

ಲಂಕೇಶ್

ಏಪ್ರಿಲ್ 21, 2010 ರೂ. 12/-



CD ಹಗರಣ


ಸಿಡಿ ಸಿಡಿ!




ಸಾರಕ್ಕಿ ನಟರಾಜ್

ರಬ್ಬರ್ ಸ್ಟಾಂಪ್ ಮೇಯರ್





ೈಲೆಂಟ್
ುನೀಲನ
ಜೆಪಿ
ೇವೆ



ಬ್ಯಾಂಕ್
ವಂಚಕ
ಸಿಂಗ್
ಬಾಬು



ಸಾನಿಯಾ
ಸೂಪರ್
ಸೇಲ್

CRPF ಹತ್ಯೆ
ಖಂಡನೀಯ
ಆದರೆ.....

ನಕ್ಸಲರ ದಾಳಿ - ಕ್ರೂರ, ಖಂಡನೀಯ. ಆದರೆ...!


"ಇದೇ ಏಪ್ರಿಲ್ 6ರಂದು ಬೆಳಗ್ಗೆ ನಕ್ಸಲ್ ಚಳವಳಿಯ ಇತಿಹಾಸದಲ್ಲೇ ನಡೆಸಲಾದ ಅತಿ ದೊಡ್ಡದಾದ ಮತ್ತು ಕ್ರೂರವಾದ ದಾಳಿಯಲ್ಲಿ ಸಿಪಿಐ (ಮಾವೋವಾದಿ) ಪಕ್ಷದ ಪಿಎಲ್‌ಎ ಗೆರಿಲ್ಲಾ ಪಡೆಗಳು ಸಿಆರ್‌ಪಿಎಫ್‌ನ 76 ಕ್ಕೂ ಹೆಚ್ಚು ಯೋಧರನ್ನು ಕೊಂದುಹಾಕಿವೆ. ಪ್ರಾಯಶಃ ಸಾವಿನ ಸಂಖ್ಯೆ ಇನ್ನೂ ಹೆಚ್ಚಲಿದ್ದು ಸ್ವಾತಂತ್ರ್ಯಾನಂತರದಲ್ಲಿ ಈಶಾನ್ಯ ಭಾರತದಲ್ಲಿ ಬಿಟ್ಟರೆ ಭಾರತದ ಅರೆ ಸೈನಿಕ ಪಡೆಯ ಇಡೀ ಕಂಪನಿಯೊಂದು ಈ ರೀತಿ ಆಂತರಿಕ ಸಂಘರ್ಷದಲ್ಲಿ ಹತವಾದದ್ದು ಇದೇ ಮೊದಲಿರಬಹುದು. ಸರ್ಕಾರ ಕೂಡಲೇ ಇದಕ್ಕೆ ದೊಡ್ಡ ಮಟ್ಟದಲ್ಲಿ ಪ್ರತೀಕಾರ ತೀರಿಸಿಕೊಳ್ಳಲು ಸಜ್ಜಾಗುತ್ತಿದೆ. ಈ ದಾಳಿ ನಡೆದ ಸಂಜೆಯೇ ತುರ್ತಾಗಿ ನಡೆದ ರಾಷ್ಟ್ರೀಯ ಭದ್ರತಾ ಮಂಡಳಿಯ ಸಭೆಯಲ್ಲಿ ಮಾವೋವಾದಿಗಳನ್ನು ಮಟ್ಟಹಾಕಲು ಸೇನಾಪಡೆಗಳನ್ನು ಬಳಸುವ ಬಗ್ಗೆ ಗುಪ್ತ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ.

ಇದರ ಹಿಂದಿನ ದಿನವೇ ಗೃಹಮಂತ್ರಿ ಚಿದಂಬರಂ ಲಾಲ್‌ಘಡ್‌ನಲ್ಲಿ ಒಂದು ಕಡೆ ನಕ್ಸಲರನ್ನು ಮಾತುಕತೆಗೂ ಆಹ್ವಾನಿಸಿ ಮತ್ತೊಂದು ಕಡೆ "ನಕ್ಸಲ್ ಪೀಡೆಯನ್ನು ಇನ್ನು ಮೂರು ವರ್ಷಗಳಲ್ಲಿ ಸಂಪೂರ್ಣವಾಗಿ ಹತ್ತಿಕ್ಕಲಾಗುವುದು" ಎಂದೂ ಏಕಕಾಲದಲ್ಲಿ ಘೋಷಿಸಿದ್ದರು. ಅದರ ಮರುದಿನವೇ ಈ ದಾಳಿ ನಡೆದಿರುವುದು ಸರ್ಕಾರಕ್ಕೆ ಮುಖಭಂಗವಾಗಿದೆ. ಹೀಗಾಗಿ ಇದನ್ನು ಸರ್ಕಾರ ಸವಾಲೆಂದು ಸ್ವೀಕರಿಸಿರುವುದು ಅದರ ಹೇಳಿಕೆಗಳು ಮತ್ತು ನಡೆಸುತ್ತಿರುವ ತಯಾರಿಗಳಿಂದ ಸ್ಪಷ್ಟವಾಗುತ್ತಿದೆ. ಇದರ ಒಟ್ಟು ಫಲಿತಾಂಶವೆಂದರೆ ಛತ್ತೀಸ್‌ಘಡ್‌ದ ಇಂದ್ರಾವತಿ ನದಿಯಲ್ಲಿ ಇಷ್ಟರಲ್ಲೇ ರಕ್ತ ಹರಿಯಲಿದೆ. ಅಲ್ಲಿ ಹರಿಯುವ ರಕ್ತದಲ್ಲಿ ಪೊಲೀಸ್ ಮತ್ತು ಅರೆ ಸೈನಿಕ ಪಡೆಗಳ ಪಾಲೆಷ್ಟು, ಮಾವೋವಾದಿಗಳ ಪಾಲೆಷ್ಟು ಮತ್ತು ಅಮಾಯಕ ಆದಿವಾಸಿಗಳ ಪಾಲೆಷ್ಟು ಎಂಬ ಚರ್ಚೆಯಲ್ಲಿ ತೊಡಗುವುದು ನಿರರ್ಥಕ ಮತ್ತು ಕ್ರೂರ. ಅಷ್ಟೇ ವ್ಯರ್ಥವಾದದ್ದು ಈ ಸಂದರ್ಭದಲ್ಲಿ ಹಿಂಸೆ ಮತ್ತು ಅಹಿಂಸೆಗಳ ಅಮೂರ್ತ ನೈತಿಕ ವಾಗ್ವಾದಗಳಲ್ಲಿ ತೊಡಗಿಕೊಳ್ಳುವುದು.




ಏಕೆಂದರೆ ಪ್ರಭುತ್ವ ಮಾವೋವಾದಿಗಳ ಮೇಲೆ ಅಥವಾ ಆದಿವಾಸಿಗಳ ಮೇಲೆ ನಡೆಸುತ್ತಿರುವ "ಪ್ರಭುತ್ವ ಹಿಂಸೆ" ಇರಬಹುದು, ಅದಕ್ಕೆ ಪ್ರತಿಕ್ರಿಯೆಯಾಗಿ ಮಾವೋವಾದಿಗಳು ನಡೆಸುವ "ಕ್ರಾಂತಿಕಾರಿ ಹಿಂಸೆ" ಇರಬಹುದು ಇವೆರಡೂ ಅಮೂರ್ತದಲ್ಲಿ ನಡೆಯುತ್ತಿಲ್ಲ, ಅವು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಘಟಿಸುತ್ತಿವೆ. ಯಾವುದೇ ಬಗೆಯ ಹಿಂಸೆಯನ್ನು "ಅನಿವಾರ್ಯ" ಮಾಡುವ ಸಂದರ್ಭವನ್ನೇ ಬದಲಿಸದ ಹೊರತು ಅಹಿಂಸೆಯ ಬಗೆಗಿನ ಹಪಹಪಿಕೆಗಳು ಅರಣ್ಯ ರೋದನವಷ್ಟೇ ಆಗುತ್ತದೆ. ಈ ಹಿಂಸಾತ್ಮಕ ಸಂದರ್ಭದಲ್ಲಿರುವ ಹಿಂಸೆಯನ್ನು ಇಲ್ಲವಾಗಿಸದೆ ಕೇವಲ ಒಂದು ಬಗೆಯ ಹಿಂಸಾಚಾರವನ್ನು ಮಾತ್ರ ಖಂಡಿಸುವುದು ಅದಕ್ಕೆ ಪ್ರತಿಯಾಗಿರುವ ಹಿಂಸಾಚಾರದ ಪರೋಕ್ಷ ಸಮರ್ಥನೆಯಾಗುತ್ತದೆಯೇ ವಿನಃ ಅಹಿಂಸೆಯ ಪ್ರತಿಪಾದನೆಯಾಗುವುದಿಲ್ಲ.

ಮಾವೋವಾದಿಗಳ ದಾಳಿ ನಡೆದು ಪ್ರಾಣಹಾನಿ ಸಂಭವಿಸಿದಾಗಲೆಲ್ಲಾ ಈ ದೇಶದ ಮಾನವ ಹಕ್ಕು ಹೋರಾಟಗಾರರ ಮೇಲೆ ಸರ್ಕಾರಗಳು ಮತ್ತು ಬಲಪಂಥೀಯರು ಹರಿಹಾಯುತ್ತಾರೆ. "ಮಾವೋವಾದಿಗಳ ಮೇಲೆ ದಾಳಿ ನಡೆದಾಗ ಮಾತ್ರ ಮಾನವ ಹಕ್ಕುಗಳ ಉಲ್ಲಂಘನೆಯಾಯಿತೆಂದು ಕೂಗಾಡುವ ನೀವು ಪೊಲೀಸರ ಹತ್ಯೆಯಾದಾಗ ಅವರ ಮಾನವ ಹಕ್ಕು



ಹರಣ ಮಾಡಿದ ನಕ್ಸಲರ ವಿರುದ್ಧವೇಕೆ ಮಾತಾಡುವುದಿಲ್ಲ" ಎಂದು ಪ್ರಶ್ನಿಸುತ್ತಾರೆ. ಆದರೆ ಇದೇ ಮಾಧ್ಯಮಗಳು ಮತ್ತು ತಥಾಕಥಿತ ಅಹಿಂಸಾವಾದಿಗಳು "ಪ್ರಭುತ್ವ ಹಿಂಸೆ"ಯ ಬಗ್ಗೆಯಾಗಲೀ, ಈ ತಾರತಮ್ಯ ವ್ಯವಸ್ಥೆ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ವ್ಯವಸ್ಥೆಯ ಹಿಂಸೆಯ ಬಗ್ಗೆಯಾಗಲೀ ಮಾತನಾಡಿದ್ದೇ ಅಪರೂಪ. ಅಸಹನೀಯ ಬದುಕು ಸೃಷ್ಟಿಸುತ್ತಿರುವ ಪ್ರತಿರೋಧದ ಸಂದರ್ಭದ ಭಾಗವಾಗಿ ಹಿಂಸೆ-ಪ್ರತಿಹಿಂಸೆಯ ವಿದ್ಯಮಾನವನ್ನು ಅರ್ಥಮಾಡಿಕೊಳ್ಳುವುದಂತೂ ಕನ್ನಡದ ಸಂದರ್ಭದಲ್ಲಿ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ.

ಇಂದು ಸಿಆರ್‌ಪಿಎಫ್ ಯೋಧರ ಹತ್ಯೆ ನಡೆದಿರುವಾಗಲೂ ಮತ್ತೆ ಇದೇ ಬಗೆಯ ಆರೋಪ-ಪ್ರತ್ಯಾರೋಪಗಳ ನಿರರ್ಥಕ ವಾಗ್ವಾದಗಳು ನಡೆಯುತ್ತಿವೆ. ನಿಜಕ್ಕೂ ಶಾಶ್ವತ



ಶಾಂತಿ ಬಯಸುವವರನ್ನು ಮಾವೋವಾದಿಗಳ ಬೆಂಬಲಿಗರಂತೆಯೂ, ಯೋಧರ ಹತ್ಯೆಯ ವಿರುದ್ಧ ಮಾವೋವಾದಿಗಳ ಮತ್ತು ಅವರ ಬೆಂಬಲಕ್ಕೆ ನಿಂತಿರುವ ಆದಿವಾಸಿಗಳ ಸಾಮೂಹಿಕ ಹತ್ಯೆ ಮಾಡಲು ಯುದ್ಧ ಘೋಷಿಸಬೇಕೆನ್ನುವವರನ್ನು ಮಹಾನ್ ದೇಶಭಕ್ತರಂತೆಯೂ ಮಾಧ್ಯಮ ಮತ್ತು ಸರ್ಕಾರ ಚಿತ್ರಿಸುತ್ತಿದೆ. ಕಳೆದ 43 ವರ್ಷಗಳಿಂದ ಇದೇ ಬಗೆಯ ವ್ಯರ್ಥ ವಾಗ್ವಾದಗಳೂ, ಪ್ರಾಣಹರಣಗಳೂ ನಡೆದಿದ್ದು ಇನ್ನಾದರೂ ಸೈನಿಕರ ಪ್ರಾಣ, ಮಾವೋವಾದಿಗಳ ಪ್ರಾಣ ಹಾಗೂ ಆದಿವಾಸಿಗಳ ಪ್ರಾಣಹರಣವಾಗುತ್ತಿರುವ ಸಂದರ್ಭವನ್ನು ಬದಲಿಸುವ ಬಗ್ಗೆ ನಿಜವಾದ ಶಾಂತಿಪ್ರಿಯರು ತಲೆಕೆಡಿಸಿಕೊಳ್ಳಬೇಕಿದೆ.

ಹೀಗಾಗಿ ನಾಗರಿಕ ಸಮಾಜ ಕೇಳಬೇಕಿರುವ ಪ್ರಶ್ನೆ:

"ಆಪರೇಷನ್ ಗ್ರೀನ್ ಹಂಟ್ ಮತ್ತು ಅದಕ್ಕೆ ಪ್ರತಿಯಾಗಿ ಈ ಯೋಧರ ಸಾವಿಗೆ ಕಾರಣವಾಗಿರುವ ಮಾವೋವಾದಿಗಳ "ಕ್ರಾಂತಿಕಾರಿ ಹಿಂಸೆ" ಹುಟ್ಟಿಕೊಂಡಿರುವ ಸಂದರ್ಭವೇನು?"

ಈ ದೇಶದ ನಾಗರಿಕರ ಹೆಸರಲ್ಲಿ, ಈ ದೇಶದ ಪ್ರಜಾಸತ್ತೆಯನ್ನು ಮತ್ತು ಕಾನೂನುಬದ್ಧ ಆಡಳಿತವನ್ನು (ರೂಲ್ ಆಫ್ ಲಾ) ಉಳಿಸುವ ಹೆಸರಿನಲ್ಲಿ ಛತ್ತೀಸ್‌ಘಡ್‌ದಲ್ಲಿ ಸರ್ಕಾರ ಯುದ್ಧವನ್ನು ಪ್ರಾರಂಭಿಸಿದೆ. ಈ ದೇಶದ ಸಕಲ ಶೋಷಿತ ಜನತೆಯ ಹೆಸರಿನಲ್ಲಿ "ನವಪ್ರಜಾಸತ್ತಾತ್ಮಕ ಕ್ರಾಂತಿಯ" ಹೆಸರಿನಲ್ಲಿ ಮಾವೋವಾದಿಗಳೂ ಸಹ ಸಶಸ್ತ್ರ ಹೋರಾಟವನ್ನು ಪ್ರಾರಂಭಿಸಿದ್ದಾರೆ. ಸ್ಥೂಲವಾಗಿ ಇದು ಮೇಲ್ನೋಟಕ್ಕೆ ಎರಡೂ ಕಡೆಯವರ ಘೋಷಣೆಗಳಿಂದ ಅರ್ಥವಾಗುವ ಸನ್ನಿವೇಶ. ಆದರೆ ಕಳೆದ 60 ವರ್ಷಗಳಲ್ಲಿ ಸಂವಿಧಾನದ ನಿರ್ದೇಶನ ತತ್ವಗಳ ಆಶಯಕ್ಕೆ ವಿರುದ್ಧವಾಗಿಯೇ ಈ ದೇಶದ ರೂಲ್ ಆಫ್ ಲಾ ನಡೆದುಕೊಂಡು ಬಂದಿರುವುದೇ ಈ ದೇಶದ ಪ್ರಜಾಸತ್ತೆಯ ವಿಪರ್ಯಾಸ. ಹೀಗಾಗಿ ಈ Rule Of Law ಒಂದು ಕಡೆ ಈ ದೇಶದ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಸಕಲ ಸಂಪತ್ತನ್ನೆಲ್ಲಾ ಲೂಟಿ ಮಾಡುವುದನ್ನು ಕಾನೂನುಬದ್ಧಗೊಳಿಸಿದ್ದರೆ, ಈ ನೀತಿಗಳಿಗೆ ಬಲಿಯಾಗಿರುವ ಈ ದೇಶದ ದಲಿತ, ಆದಿವಾಸಿ, ರೈತ ಕೂಲಿ ಕಾರ್ಮಿಕರ ಬದುಕನ್ನೇ Unlawful Activity (ಕಾನೂನುಬಾಹಿರ ಚಟುವಟಿಕೆ)ಯನ್ನಾಗಿ ಮಾಡಿಬಿಟ್ಟಿದೆ. ಹೀಗಾಗಿಯೇ ಇಂದು Unlawful Activity Prevention Act (UAPA) ಅಡಿ ಅತಿಹೆಚ್ಚು ಬಂಧನವಾಗಿರುವುದು ಛತ್ತೀಸ್‌ಘಡ್‌ದ ಆದಿವಾಸಿಗಳದ್ದೇ.

ಛತ್ತೀಸ್‌ಘಡ್‌ನಲ್ಲಿ ಆಗುತ್ತಿರುವುದು ಇದೆ. ಅಲ್ಲಿ ಅಪರೂಪದ ಖನಿಜ ನಿಕ್ಷೇಪಗಳಿವೆ. ಅದರ ಒಟ್ಟು ಬೆಲೆ ಏನಿಲ್ಲವೆಂದರೂ 10 ಲಕ್ಷ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಹೀಗಾಗಿ ಅದರ ಮೇಲೆ ಈ ದೇಶದ ಮತ್ತು ಸಾಮ್ರಾಜ್ಯಶಾಹಿ ದೇಶಗಳ ಬಹುರಾಷ್ಟ್ರೀಯ ಗಣಿ ಕಂಪನಿಗಳ ಕಣ್ಣು ಬಿದ್ದಿದೆ. ಈಗಾಗಲೇ ಸರ್ಕಾರಗಳು 1,50,000 ಕೋಟಿಗೂ ಹೆಚ್ಚಿನ ಮೌಲ್ಯದ ಒಪ್ಪಂದಗಳನ್ನು ಮಾಡಿಕೊಂಡಿವೆ. ಈ ಗಣಿಗಾರಿಕೆ ನಿರಾತಂಕವಾಗಿ ನಡೆಯಬೇಕೆಂದರೆ ಶತಮಾನಗಳಿಂದ ಕಾಡನ್ನೇ ನಂಬಿ ಬದುಕುತ್ತಿರುವ ಲಕ್ಷಾಂತರ ಮಂದಿ ಆದಿವಾಸಿಗಳನ್ನು ಎತ್ತಂಗಡಿ ಮಾಡಬೇಕಿದೆ. ಆದರೆ ಸರ್ಕಾರದಿಂದ ತಮ್ಮ ಬದುಕಿನ ಪ್ರತಿಹೆಜ್ಜೆಯಲ್ಲೂ ಬರಿ ದಮನವನ್ನು ಎದುರಿಸುತ್ತಾ ಕುಗ್ಗಿ, ಬಗ್ಗಿ ಬದುಕುತ್ತಿದ್ದ ಈ ಆದಿವಾಸಿಗಳ ಬೆಂಬಲಕ್ಕೆ ನಿಂತಿದ್ದು ಮಾಧ್ಯಮಗಳೂ ಅಲ್ಲ, ಅಮೂರ್ತ ಅಹಿಂಸಾವಾದಿಗಳೂ ಅಲ್ಲ. 60 ವರ್ಷಗಳಿಂದ ಸರ್ಕಾರದ ಒಬ್ಬ ಪ್ರತಿನಿಧಿಯೂ ಕಾಲಿಡದ ಆ ಗೊಂಡಾರಣ್ಯದ ಮೂಲೆಮೂಲೆಗೂ ತಲುಪಿ ಆದಿವಾಸಿಗಳನ್ನು ಸಂಘಟಿಸಿ, ಹೊಸ ಬದುಕು ಕಲಿಸಿದವರು ಈ ಹಿಂಸಾವಾದಿ ಮಾವೋವಾದಿಗಳೇ. ಹೀಗಾಗಿಯೇ ನಾಗರಿಕ ಸಮಾಜ ಒಪ್ಪಲಿ ಬಿಡಲಿ ಈ ದೇಶದ "ಪ್ರಜಾಪ್ರಭುತ್ವವಾದಿ ಸರ್ಕಾರಕ್ಕಿಂತ", "ಅಹಿಂಸಾವಾದಿ ನಾಗರಿಕ ಸಮಾಜಕ್ಕಿಂತ", "ನಿಷ್ಪಕ್ಷಪಾತಿ ಮಾಧ್ಯಮಗಳಿಗಿಂತ" ಈ ಆದಿವಾಸಿಗಳಿಗೆ "ಹಿಂಸಾವಾದಿ ಮಾವೋವಾದಿಗಳೇ" ಅಚ್ಚುಮೆಚ್ಚು.

ಈಗ ಕೆಲವೇ ಮಂದಿಯ ಲಾಭಕ್ಕೆ ದೇಶದ ಸಂಪತ್ತನ್ನೇ ಲೂಟಿ ಹೊಡೆದು ಆದಿವಾಸಿಗಳನ್ನು ಎತ್ತಂಗಡಿ ಮಾಡುವ ಪರಮದೇಶದ್ರೋಹಿ ಕಾರ್ಯಕ್ಕೆ ಸರ್ಕಾರ 70,000ಕ್ಕೂ ಹೆಚ್ಚು ಯೋಧರನ್ನು ನಿಯೋಜಿಸಿದೆ. ಅವರ ಕಣ್ಣುಮುಂದೆ ಬಂದೂಕು ಹಿಡಿದ ನಕ್ಸಲರನ್ನು ಮತ್ತು ಅವರನ್ನು ಬೆಂಬಲಿಸುವ ಆದಿವಾಸಿಗಳನ್ನು ದೇಶದ ಶತ್ರುಗಳನ್ನಾಗಿ ಚಿತ್ರಿಸಲಾಗಿದೆ. ಅಂದರೆ ಕೆಲವರ ಹಿತಾಸಕ್ತಿಯನ್ನೇ ದೇಶದ ಹಿತಾಸಕ್ತಿಯೆಂದು ಬಣ್ಣಿಸುತ್ತಾ 70,000 ಯೋಧರ ಬದುಕನ್ನು ಬಲಿಕೊಡಲಾಗಿದೆ. ತಮ್ಮ ಅಣ್ಣತಮ್ಮಂದಿರನ್ನು ತಾವೇ ಕೊಲ್ಲುವಂತಹ ಅಥವಾ ಅವರಿಂದ ಹತರಾಗುವಂತಹ ದುರಂತ ಸಂದರ್ಭವನ್ನು ಸೃಷ್ಟಿಸಿದೆ. ಹೀಗೆ ಇಂದು ಸಹೋದರರ ನಡುವೆ ಯುದ್ಧ ಘೋಷಣೆಯಾಗಿದೆ. ಈ ಭ್ರಾತೃಹತ್ಯೆಯ ಲಾಭವನ್ನು ಮಾತ್ರ ಉದ್ಯಮಿಗಳು ಪಡೆಯುತ್ತಾರೆ. ಅಲ್ಲಿಯತನಕ ಯೋಧರೋ, ನಕ್ಸಲರೋ ಅಥವಾ ಆದಿವಾಸಿಗಳೋ ಪರಸ್ಪರ ಹತ್ಯೆಯಾಗುತ್ತಲೇ ಇರುತ್ತಾರೆ. ಆದ್ದರಿಂದಲೇ ನಾಗರಿಕ ಸಮಾಜ ಈ ಹತ್ಯೆಗೆ ಕಾರಣವಾಗುತ್ತಿರುವ ನೀತಿಗಳನ್ನು ಬದಲಿಸಲು ಯತ್ನಿಸದೆ ಕೇವಲ ಹಿಂಸೆಯ ಬಗ್ಗೆ ಮಾತನಾಡುವುದೇ ಅತ್ಯಂತ ಹಿಂಸಾತ್ಮಕವಾದದ್ದು.

ಅದೇರೀತಿ ಸಮಾಜ ಬದಲಾವಣೆಯ ಉದಾತ್ತ ಆದರ್ಶಗಳಿಗಾಗಿ ಮಾವೋವಾದಿಗಳು ಪ್ರಾಣವನ್ನೇ ಬಲಿಕೊಡುವ ಅಥವಾ ಬಲಿ ತೆಗೆದುಕೊಳ್ಳುವಷ್ಟು ಬದ್ಧತೆ ಹೊಂದಿದ್ದಾರೆ, ನಿಜ. ಆದರೆ ಈ ಬದ್ಧತೆಯು ಮೊಂಡು ಹಠಮಾರಿತನವಾದರೆ, ಬದಲಾಗುತ್ತಿರುವ ಸಂದರ್ಭದ ವಿವೇಕಕ್ಕೆ ತೆರೆದುಕೊಳ್ಳದಿದ್ದರೆ ಹೇಗೆ ಕುರುಡನ್ನೂ ಮತ್ತು ಆತ್ಮವಿನಾಶವನ್ನೂ ತರುತ್ತದೆ ಎಂಬುದನ್ನು ನಕ್ಸಲ್ ಚಳವಳಿ ಪ್ರಾರಂಭದಲ್ಲೇ ಅನುಭವಿಸಿತ್ತು.

ದೇಶಾದ್ಯಂತ ಜನಸಮೂಹದ ರಾಜಕೀಯ ಹೋರಾಟಗಳ ಅಲೆ ಏರದೆ ಯಾವುದೋ ಮೂಲೆಯಲ್ಲಿ

▶▶ 15

ನೋ ಕಾಮೆಂಟ್ಸ್

"ನನ್ನ ಇದುವರೆಗಿನ ಪುಸ್ತಕ ಬಿಡುಗಡೆ ಸಮಾರಂಭಗಳಲ್ಲಿ ಇದು ಅತ್ಯಂತ ವಿಶಿಷ್ಟ ಮತ್ತು ಅವಿಸ್ಮರಣೀಯ. ಏಕೆಂದರೆ ಈ ಸಭೆಯಲ್ಲಿ ರಾಮಾ ಜೋಯಿಸ್, ಆರೆಸ್ಸೆಸ್ಸಿನ ಮೈ.ಚ ಜಯದೇವ, ಬಿಜೆಪಿಯ ಆಯನೂರು ಮಂಜುನಾಥ್ ವಿಶ್ವೇಶ್ವರ ಭಟ್ ಹೀಗೆ ನನ್ನ ಇಡೀ 'ಪರಿವಾರವೇ' ಇಲ್ಲಿದೆ."

- ತರುಣ್ ವಿಜಯ್, ಆರೆಸ್ಸೆಸ್‌ನ 'ಪಾಂಚಜನ್ಯ' ಪತ್ರಿಕೆಯ ಸಂಪಾದಕ

"ಬಿಜೆಪಿ ಸರ್ಕಾರಕ್ಕೆ ಸಂಬಂಧಪಟ್ಟಂತೆ ಸಂಘಪರಿವಾರದವರು ಬೇರೆಬೇರೆ ವಿಚಾರಗಳಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ, ಸರ್ಕಾರಕ್ಕೆ ಸಲಹೆ-ಸೂಚನೆ ಕೊಡುತ್ತಾರೆ. ಆದರೆ ಏಕೋ ಏನೋ ಬಳ್ಳಾರಿ ಚಟುವಟಿಕೆಗಳಿಗೆ ಮಾತ್ರ ಅವರ ಬಾಯಿ ಬಂದಾಗಿದೆ."

- ಪಿ. ತ್ಯಾಗರಾಜ್, ಪತ್ರಕರ್ತ

"ನಾಚಿಕೆಯಾಗಬೇಕಾಗಿರುವುದು ಮತದಾನ ಮಾಡದ ಮತದಾರರಿಗಲ್ಲ, ಎಂಥವರಿಗೂ ಮತಹಾಕಲಾಗದ ಅಭ್ಯರ್ಥಿಗಳನ್ನು ನಿಲ್ಲಿಸಿದ ರಾಜಕೀಯ ಪಕ್ಷಗಳಿಗೆ."

- ಡಾ.ಸಿ.ಆರ್. ಚಂದ್ರಶೇಖರ್

"ಜಾತಿ-ಧರ್ಮಗಳ ಹೆಸರಿನಲ್ಲಿ ಜನರಲ್ಲಿ ಒಡಕು ಮೂಡಿಸುವ ಖಳನಾಯಕರುಗಳು ಮಾಧ್ಯಮಗಳ ನಾಯಕರಾಗಿ ಮತಷ್ಟು ಅಪಾಯಕಾರಿಗಳಾಗುತ್ತಿದ್ದಾರೆ."

- ಬರಗೂರು ರಾಮಚಂದ್ರಪ್ಪ

"ಸ್ವಾತಂತ್ರ್ಯ ಬಂದು 60 ವರ್ಷಗಳಾದ ನಂತರವೂ ಕಪ್ಪು ಗೌನು ಧರಿಸಿಯೇ ಪದವಿ ಪ್ರದಾನ ಸಮಾರಂಭ ಏಕೆ ನಡೆಯಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ."

- ಜೈರಾಂ ರಮೇಶ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಕೇಂದ್ರ ಸರ್ಕಾರವು 2009-10ನೇ ಸಾಲಿನ ಬಜೆಟ್ಟಿನಲ್ಲಿ ಕಾರ್ಪೊರೇಟ್ ಸಂಸ್ಥೆಗಳಿಗೆ ಒದಗಿಸಿರುವ ರಿಯಾಯಿತಿಗಳಿಂದ ಏನಿಲ್ಲವೆಂದರೂ 5.4 ಲಕ್ಷ ಕೋಟಿ ರೂ. ತೆರಿಗೆಯನ್ನು ಕಳೆದುಕೊಂಡಿದೆ. ಇಂಥ ಕ್ರಮಗಳಿಂದಾಗಿಯೇ ಭಾರತದ ಶತಕೋಟ್ಯಾಧಿಪತಿಗಳ ಸಂಖ್ಯೆ 2008ರಲ್ಲಿ 27 ಇದ್ದದ್ದು 2009ರಲ್ಲಿ 52ಕ್ಕೆ ಜಿಗಿದಿದೆ. ಫೋರ್ಬ್ಸ್ ಎಂಬ ಪತ್ರಿಕೆಯ ಅಂದಾಜಿನ ಪ್ರಕಾರ ಭಾರತದ 100 ಅತಿದೊಡ್ಡ ಶ್ರೀಮಂತರ ಒಟ್ಟಾರೆ ಆಸ್ತಿ-ಪಾಸ್ತಿ 12, 70,000 ಕೋಟಿ ರೂಪಾಯಿಗಳು!"

-ಕೋಬಾಡ್ ಗಾಂಧಿ, ಮಾವೋವಾದಿ ನಾಯಕ

(ತಿಹಾರ್ ಜೈಲಿನಿಂದ EPW ಪತ್ರಿಕೆಗೆ ಬರೆದ ಲೇಖನದ...)

"ವಿಶ್ವಸಂಸ್ಥೆಯ ತಂಡವು ಯಾವ ಆಧಾರವನ್ನು ಹಿಡಿದು ಬೆನಜೀರ್ ಹತ್ಯೆಯ ತನಿಖೆಯನ್ನು ನಡೆಸುತ್ತಿದೆ? ತನಿಖಾ ತಂಡವು ಬೆನಜೀರ್ ಮೃತದೇಹದ ಶವಪರೀಕ್ಷೆಯನ್ನು ಮತ್ತೊಮ್ಮೆ ನಡೆಸಿಲ್ಲ, ದಫನಗೊಂಡ ಮೃತದೇಹವನ್ನು ಹೊರತೆಗೆಯಲಾಗಿಲ್ಲ, ಅಲ್ಲದೆ ಅಪರಾಧ ನಡೆದ ಸ್ಥಳದ ಪುರಾವೆಗಳನ್ನು ಈಗಾಗಲೇ ನಾಶಪಡಿಸಲಾಗಿದೆ."

-ಫಾತಿಮಾ ಭುಟ್ಟೊ, ಬೆನಜೀರ್ ಭುಟ್ಟೋರ ಸೋದರ ಸೊ...

"ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆಯಾಗುತ್ತಿಲ್ಲ, ಪ್ರಸ್ತುತ ರಾಜ್ಯದಲ್ಲಿ 220 ... ಟನ್ನಿನಷ್ಟು ಆಹಾರ ಧಾನ್ಯ ಉತ್ಪಾದನೆಯಾಗುತ್ತಿದೆ. ಅದು ಕನಿಷ್ಠ 250 ಲಕ್ಷ ಟನ್ನಿಗೇರಿಸದಿದ್ದರೆ ಆಹಾರ ಕೊ... ಉದ್ಭವವಾಗುತ್ತದೆ."

- ಕೆ.ವಿ. ಸತೀಶ್, ಖ್ಯಾತ ಕೃಷಿ...

ಕಾಂಗ್ರೆಸ್ಸು ಸಂಘಪರಿವಾರದ ಬಿ ಟೀಮ್ ಎನ್ನುವುದು ಇದಕ್ಕೆ!

"ನಾನು ಹಳ್ಳಿಯಿಂದ ಬಂದವನು. ಒರಟಾಗಿ ಬೆಳೆ... ನನ್ನ ವ್ಯಕ್ತಿತ್ವದಲ್ಲಿ ಸಂಸ್ಕೃತಿಯಿದೆ ಅಂತಾದರೆ ಅದು ಸಂ... ಕಲಿಯಲು ಆರಂಭಿಸಿದ ನಂತರವೇ. ಸಂಸ್ಕೃತ ಮನು... ವ್ಯಕ್ತಿತ್ವವನ್ನು ಬದಲಿಸುತ್ತದೆ ಎನುವುದಂತೂ ಸತ್ಯ."


-ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ... ಕಾರ್ಯಾ...

ಎನ್ಕೌಂಟರ್‌ಗಳು ದೇಹವನ್ನು ಮಾ... ಕೊಲ್ಲುತ್ತದೆ, ಆದರೆ ಇದು?

"ಛತ್ತೀಸ್‌ಘಡ್‌ನಲ್ಲಿ ನಾವು ನಡೆಸುತ್ತಿರುವ ಯುದ್ಧ... ಕೇವಲ ಪೊಲೀಸ್ ಮತ್ತು ಸೈನ್ಯ ಶಕ್ತಿಯಿಂದ ಗೆ... ಸಾಧ್ಯವಿಲ್ಲ, ಈ ಆದಿವಾಸಿಗಳ ಮನಸ್ಸಿನಲ್ಲಿ ಆಸೆಯೆಂಬ... ಇಲ್ಲ. ಎಲ್ಲಿಯತನಕ ಇವರ ಮನಸ್ಸಿನಲ್ಲಿ ... ಆಸೆ-ದುರಾಸೆಗಳನ್ನು ಹುಟ್ಟಿಸಲು ಸಾಧ್ಯವಿಲ್ಲ... ಅಲ್ಲಿಯವರೆಗೆ ನಾವು ಅವರನ್ನು ಗೆಲ್ಲಲು ಸಾಧ... ಆದ್ದರಿಂದಲೇ ನಾನು ನಮ್ಮ ಬಾಸ್‌ಗಳಿಗೆ ಹೇಳಿ... ಇಲ್ಲಿ ಪೊಲೀಸ್ ಪಡೆಗಳನ್ನು ಕಳಿಸುವ ಬದಲಿಗೆ ಮನೆಗೊ... ಟಿವಿ ಸೆಟ್‌ಗಳನ್ನು ಕೊಡಿ. ನಂತರ ಇವರನ್ನು ಸುಲಭ... ಗೆಲ್ಲಬಹುದು ಎಂದು."

- ಛತ್ತೀಸ್‌ಘಡ್‌ನ ಪೊಲೀಸ್ ವರಿಷ್ಠಾಧಿ... ಅರುಂಧತಿ ರಾಯ್ ಜೊತೆ ಸಂವಾ...

ಈ ಯುದ್ಧದಲ್ಲಿ ರಾಮ ಯಾರು ರಾಕ್ಷಸರು ಯಾರು?



ಕಂಡಹಾಗೆ

■ ಗೌರಿ ಲಂಕೇಶ್
editorlankesh@gmail.com

ಕಳೆದ ಮಂಗಳವಾರ ಛತ್ತೀಸಘಢದಲ್ಲಿ 76 ಸಿಆರ್‌ಪಿ ...ಎಫ್‌ನ ಜವಾನರನ್ನು ಮಾವೋವಾದಿಗಳು (ನಕ್ಸಲೈಟರು) ...ಂದದ್ದು ಖಂಡನೀಯ. ಹಾಗೆ ನೋಡಿದರೆ ಯಾವ ...ಲಿಯೂ ಖಂಡನೀಯವೇ. ಆದರೆ ಅಷ್ಟು ಮಾತ್ರ ...ಳಿ ಸುಮ್ಮನಾದರೆ ಸಾಕೆ?



...ಈ ಹತ್ಯೆಗಳು ಯಾಕಾಗುತ್ತಿವೆ? ಅವುಗಳ ಹಿಂದಿರುವ ...ಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಕಾರಣಗಳೇನು ...ದು ಅರ್ಥಮಾಡಿಕೊಳ್ಳದೆ ಅಹಿಂಸಾವಾದಿ ನಿಲುವನ್ನು ... 'ಖಂಡನೀಯ' ಎಂದಷ್ಟೇ ಅಬ್ಬರಿಸಿ ತಟಸ್ಥರಾದರೆ ...ಸಮಸ್ಯೆ ಬಗೆಹರಿಯುವುದಾದರೂ ಹೇಗೆ? ಹಿಂಸೆಗೆ ...ಹಿಂಸೆ ನಿಲ್ಲುವುದಾದರೂ ಎಂದು? ಮಾವೋವಾದಿಗಳ ...ಹತ್ತಿಕ್ಕುವ ನೆಪದಲ್ಲಿ ಆದಿವಾಸಿಗಳ ವಿರುದ್ಧ ಸೈನ್ಯವನ್ನೇ ...ಬಳಸಬೇಕು ಎನ್ನುವುದಾದರೆ ಈ ದೇಶದ ಜನ ಯಾರು? ...ಸರ್ಕಾರ ಇರುವುದು ಯಾರಿಗಾಗಿ?

...ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮುನ್ನ ...ತು ವರ್ಷಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ...ಯಿತು ಎಂಬುದರತ್ತ ಹಿನ್ನೋಟ ಬೀರೋಣ.

...ಎಲ್ಲರಿಗೂ ಗೊತ್ತಿರುವಂತೆ ಪಶ್ಚಿಮ ಬಂಗಾಳದ ...ರ ಪ್ರಭಾವಿ ಉದ್ಯಮ ರತನ್ ಟಾಟಾನ ನಾನೋ ... ಘಟಕಕ್ಕೆ ಸಿಂಗೂರಿನಲ್ಲಿ ಫಲವತ್ತಾದ ರೈತರ ...ಮಿಯನ್ನು ನೀಡಿದ್ದರ ವಿರುದ್ಧ ಅಲ್ಲಿನ ಜನ ಪ್ರತಿಭಟಿಸಿ ... ಅವರ ಪ್ರತಿಭಟನೆಯನ್ನು ಹತ್ತಿಕ್ಕಲು ಆ ರಾಜ್ಯದ ...ರ ತನ್ನ ಪೊಲೀಸರನ್ನಲ್ಲದೆ ತನ್ನ ಸಿಪಿಎಂ ಪಕ್ಷದ ...ಡಾ ಪಡೆಗಳನ್ನೂ ಛೂಬಿಟ್ಟಿತ್ತು, ಆಗ ಹಲವಾರು ...ರೆಗಳು, ಅತ್ಯಾಚಾರಗಳು, ದಮನಗಳು ನಡೆದಿದ್ದವು. ...ತೂ ಅಲ್ಲಿನ ಜನ ಜಗ್ಗಲಿಲ್ಲ, ತಮ್ಮ ಹೋರಾಟವನ್ನು ...ಲಿಲ್ಲ, ಕೊನೆಗೆ ವಿಧಿ ಇಲ್ಲದೆ ರತನ್ ಟಾಟಾ ಪಶ್ಚಿಮ ...ಗಾಳಕ್ಕಿಂತಲೂ ಅಗ್ಗದ ದರದಲ್ಲಿ ಭೂಮಿಯನ್ನು ಮತ್ತು ...ಗೆ ತೆರಿಗೆ ರಿಯಾಯಿತಿಯನ್ನು ನೀಡಿದ ಗುಜರಾತ್ ...ಕ್ಕೆ ತನ್ನ ಕಾರ್ ಘಟಕವನ್ನು ಸ್ಥಳಾಂತರಿಸಿದ.

...ಆದರೆ ಸಿಂಗೂರಿನ ರೈತರಿಗೆ ಮತ್ತೆ ತಮ್ಮ ಭೂಮಿ ...? ಇಲ್ಲ, ಯಾಕೆಂದರೆ ಅಲ್ಲಿನ ಸರ್ಕಾರ ಆ ...ಮಿಯನ್ನು ರೈತರಿಗೆ ಹಿಂದಿರುಗಿಸಲಿಲ್ಲ, ಬದಲಾಗಿ, ...ನ್ನೆ ರತನ್ ಟಾಟಾ ಆ ಭೂಮಿಯ ವಾರ್ಷಿಕ ಗುತ್ತಿಗೆ ...ವನ್ನು ಸರ್ಕಾರಕ್ಕೆ ನೀಡುವ ಮೂಲಕ ಅದನ್ನಿನ್ನೂ ...ವಶದಲ್ಲೇ ಇಟ್ಟುಕೊಂಡಿದ್ದಾನೆ.

...ಇದೆಲ್ಲದರ ಅರ್ಥವೇನು? ಸಿಂಗೂರಿನ ರೈತರು ಸದ್ಯಕ್ಕೆ ... ಟಾಟಾ ಅಲ್ಲಿಂದ ಓಡಿಹೋಗುವಂತೆ ಮಾಡಿದ್ದರೂ ... ಭೂಮಿಯನ್ನು ವಾಪಸ್ ಪಡೆಯುವಲ್ಲಿ ...ರಾಗಿದ್ದಾರೆ. ಈ ಮಧ್ಯೆ ಟಾಟಾ ಮಾತ್ರ ಅತ್ತ ...ರಾತಿನಲ್ಲೂ ಕಾರ್ ಘಟಕ, ಇತ್ತ ಸಿಂಗೂರಿನಲ್ಲೂ ...ಮಿಯ ಒಡೆಯನಾಗಿಯೇ ಉಳಿದಿದ್ದಾನೆ.

...ಸಿಂಗೂರಿನ ರೈತರು ಮಾವೋವಾದಿಗಳಾಗಿರಲಿಲ್ಲ, ...ರ ಮತ್ತು ಟಾಟಾನ ವಿರುದ್ಧ ಶಸ್ತ್ರಾಸ್ತ್ರಗಳನ್ನು ...ಸುಲಿಲ್ಲ, ಅವರು ಪ್ರಜಾಸತ್ತಾತ್ಮಕವಾಗಿ ಹೋರಾಡಿ ..., ಗೆದ್ದಿದ್ದರೂ ಅವರ ಗೆಲುವು ಯಾವ ರೀತಿಯಿಂದಲೂ ಗೆಲುವಾಗಿರಲಿಲ್ಲ, ನಮ್ಮ ಪ್ರಜಾಪ್ರಭುತ್ವದಲ್ಲಿ ಓರ್ವ ಬಲಿಯಾಧಿಪತಿ ಗೆದ್ದ; ತಮ್ಮ ಹೊಟ್ಟೆಪಾಡಿಗಾಗಿ ಭೂಮಿಯನ್ನು ಅವಲಂಬಿಸಿದ್ದ ಸಾವಿರಾರು ರೈತರ ಹೋರಾಟ ಸೋತಿತು. ಟಾಟಾನ ತಲೆ ಮೇಲಿನ ಒಂದು ಕೂದಲೂ ಕೊಂಕಲಿಲ್ಲ, ಆದರೆ ಛಿದ್ರವಾದ ರೈತರ ಬದುಕಿಗೆ, ಅವರ ದೇಹಗಳ ಮೇಲೆ ಬಿದ್ದ ಏಟಿಗೆ, ಅವರ ಮಹಿಳೆಯರ ಮೇಲಾದ ಅತ್ಯಾಚಾರಗಳಿಗೆ ಲೆಕ್ಕವೂ ಇಲ್ಲ, ಬೆಲೆಯೂ ಇಲ್ಲ, ಸಾವಿರಾರು ಜನರ ವಿರೋಧದ ನಡುವೆಯೂ ಈ ದೇಶದಲ್ಲಿ ಓರ್ವ ಟಾಟಾ ಗೆಲ್ಲುತ್ತಾನೆಂದರೆ ಇದೆಂತಹ 'ಪ್ರಜಾ' ಪ್ರಭುತ್ವ?

ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ಮೊನ್ನೆ ಛತ್ತೀಸಘಢದಲ್ಲಿ ನಡೆದಿರುವ ಸಾಮೂಹಿಕ ಹತ್ಯೆಗೆ ಬರುವ ಮುನ್ನ ಇನ್ನೊಂದು 'ಫ್ಲಾಷ್ ಬ್ಯಾಕ್'ಗೆ ಹೋಗುವುದು ಸೂಕ್ತ ಅನ್ನಿಸುತ್ತಿದೆ. ಈ 'ಫ್ಲಾಷ್ ಬ್ಯಾಕ್' ಅಂತಿಂತಹದ್ದಲ್ಲ. ಹಿಂದೂವಾದಿಗಳು ವಾದಿಸುವಂತೆ ಎಲ್ಲಾ 'ಹಿಂದೂ'ಗಳು 'ಆರಾಧಿಸುವ' ಸಾಕ್ಷಾತ್ ರಾಮನ ಕಾಲಕ್ಕೇ ಹೋಗುವಂತಹದ್ದು.

ರಾಮಾಯಣ ಒಂದು ಕಾಲ್ಪನಿಕ ಕತೆಯಾದರೂ ಹಲವರ ನಂಬಿಕೆಯ ಪ್ರಕಾರ ಅದು ನಿಜವಾಗಲೂ ನಡೆದ ಮಹಾ ಪುರಾಣ. ಆ ನಂಬಿಕೆ ಹೊಂದಿರುವವರ ಪ್ರಕಾರ ರಾಮ ತನ್ನ 14 ವರ್ಷಗಳ ವನವಾಸದಲ್ಲಿ 13 ವರ್ಷಗಳನ್ನು ಕಳೆದದ್ದು ಇದೇ ಛತ್ತೀಸಘಢ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳ ನಡುವೆ ಇರುವ ದಂಡಕಾರಣ್ಯ, ಬಸ್ತರ್ ಮತ್ತು ಕಾಂಕೇರ್ ಎಂಬ ಅರಣ್ಯ ಪ್ರದೇಶಗಳಲ್ಲಿ, ಅಷ್ಟೇ ಅಲ್ಲ, ಈ ಕಾಡಿನಲ್ಲಿದ್ದ ಆದಿವಾಸಿಗಳನ್ನೇ ರಾಕ್ಷಸರೆಂದು ರಾಮ ಕರೆದದ್ದು, ಇಲ್ಲಿಂದಲೇ ರಾವಣ ಸೀತೆಯನ್ನು ಅಪಹರಿಸಿದ್ದು, ದಟ್ಟಕಾಡಿನ ಮಧ್ಯೆ ಗೀದಮ್ ಎಂಬ ಬಯಲು ಪ್ರದೇಶದಿಂದಲೇ ರಾಮ ಸೀತೆಯೊಂದಿಗೆ ಪುಷ್ಪಕ ವಿಮಾನವನ್ನೇರಿ ಅಯೋಧ್ಯೆಗೆ ಹಿಂದಿರುಗಿದ್ದು ಎಂದೆಲ್ಲ ರಾಮನ ಮೂಢ ಭಕ್ತರು ತರ್ಕಿಸುತ್ತಾರೆ.

ಅದೇನೇ ಇರಲಿ, ಇವತ್ತು ಇದೇ ಪ್ರದೇಶದಲ್ಲಿ ಮಾವೋವಾದಿಗಳು ಮತ್ತು ಆದಿವಾಸಿಗಳು ಒಂದೆಡೆ ಇದ್ದು, ಇನ್ನೊಂದೆಡೆ ಭಾರತ ಸರ್ಕಾರ ನಿಂತಿದ್ದು ಅವರ ನಡುವೆ ಯುದ್ಧ ನಡೆಯುತ್ತಿದೆ. ಆದರೆ ಈ ಯುದ್ಧದಲ್ಲಿ ದಂಡಕಾರಣ್ಯದ ಆದಿವಾಸಿಗಳ ಮನಸ್ಸಿನಲ್ಲಿ ಯಾರು 'ರಾಮ', ಯಾರು 'ರಾಕ್ಷಸ'ರಾಗಿರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಮಾಧ್ಯಮಗಳಲ್ಲಿ ವರದಿ ಆಗಿರುವಂತೆ 76 ಸಿಆರ್‌ಪಿಎಫ್ ಜವಾನರನ್ನು ಬಲಿತೆಗೆದುಕೊಂಡ ಈ ಕಾರ್ಯಾಚರಣೆಯಲ್ಲಿ 800 ರಿಂದ 1000 ಮಾವೋವಾದಿಗಳು ಭಾಗವಹಿಸಿದ್ದರು ಹಾಗೂ ನಾಲ್ಕೂ ದಿಕ್ಕಿನಲ್ಲೂ ಜವಾನರು ಪಾರಾಗದಂತೆ ಬಾಂಬ್‌ಗಳನ್ನು ನೆಟ್ಟಿದ್ದರು.


ಇದೆಲ್ಲ ನಿಜವೇ ಆಗಿದ್ದರೆ, ಹಲವಾರು ಪ್ರಶ್ನೆಗಳು ಉದ್ಭವಿಸುತ್ತದೆ. ಮೊದಲನೆಯದಾಗಿ ದಂಡಕಾರಣ್ಯದಂತಹ ಅರಣ್ಯ ಪ್ರದೇಶದಲ್ಲಿ ನೂರಾರು ಮಾವೋವಾದಿಗಳು ಯಾವ ಹಳ್ಳಿಗರ ಗಮನಕ್ಕೂ ಬಾರದಂತೆ ಕಾರ್ಯಾಚರಣೆ ನಡೆಸುವುದು ಅಸಾಧ್ಯವಲ್ಲವೆ?

ಎರಡನೆಯದಾಗಿ ಇಷ್ಟು ದೊಡ್ಡ ಕಾರ್ಯಾಚರಣೆಗೆ ತೆಗೆದುಕೊಳ್ಳುವ ಸಮಯ ಕನಿಷ್ಠವೆಂದರೂ ಒಂದಿಡೀ ದಿನ. ಅದೂ ಈ ಹತ್ಯೆಗಳು ನಡೆದ ಸ್ಥಳ ಸಿಆರ್‌ಪಿಎಫ್ ಕ್ಯಾಂಪಿನಿಂದ ಕೇವಲ ನಾಲ್ಕು ಕಿ.ಮೀ. ದೂರದಲ್ಲಿದ್ದರೂ, ಇದರ ಸುತ್ತು ಮೂರ್‍ನಾಲ್ಕು ಹಳ್ಳಿಗಳಿದ್ದರೂ ಅವರು ತಯಾರಿ ನಡೆಸುತ್ತಿದ್ದದ್ದು ಯಾರ ಗಮನಕ್ಕೂ ಬಾರದೆ ಇದ್ದದ್ದು ಹೇಗೆ?

ಮೂರನೆಯದಾಗಿ ಸ್ಥಳೀಯ ಪೊಲೀಸರಿಗೂ ಮತ್ತು ಅಪಾರ ಸಂಖ್ಯೆಯಲ್ಲಿರುವ ಸಲ್ವಾ ಜುಡುಂನ ಎಂಬ ದಾಳಿ ಗ್ಯಾಂಗಿನ ಆದಿವಾಸಿಗಳಿಗೂ ಈ ಕಾರ್ಯಾಚರಣೆಯ ಪುಟ್ಟ ಸುಳಿವೂ ಸಿಗದಿದ್ದದ್ದು ಏಕೆ?

ಈ ಪ್ರಶ್ನೆಗಳಿಗೆ ಉತ್ತರ ಸಿಗುವುದು ಛತ್ತೀಸಘಢದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬ ಪತ್ರಿಕೆಯೊಂದಕ್ಕೆ ನೀಡಿರುವ ಹೇಳಿಕೆಯಲ್ಲಿ, ಅದು ಹೇಗೆ ಸಿಆರ್‌ಪಿಎಫ್‌ನ ಜವಾನರು ಮಾವೋವಾದಿಗಳ ಈ ಬಲೆಗೆ ಬಿದ್ದು ಅಸುನೀಗಿದರು ಎಂಬ ಪ್ರಶ್ನೆಗೆ ಆ ಅಧಿಕಾರಿ ಹೀಗೆ ಉತ್ತರಿಸಿದ್ದಾರೆ: "ಸ್ಥಳೀಯ ಆದಿವಾಸಿಗಳು ನಮಗೆ ಯಾವುದೇ ಮಾಹಿತಿ ನೀಡುವುದಿಲ್ಲ, ಆಗೊಮ್ಮೆ ಈಗೊಮ್ಮೆ ನಮಗೆ ಸಿಗುವ ಮಾಹಿತಿ ಒಂದೋ ಹಳೆಯದ್ದಾಗಿರುತ್ತದೆ ಅಥವಾ ಬೇಕಂತಲೇ ನೀಡಿರುವ ತಪ್ಪು ಮಾಹಿತಿಯಾಗಿರುತ್ತದೆ. ಇಲ್ಲಿ ನಾವು ಮಾಹಿತಿ ಜಾಲವನ್ನು ಏರ್ಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ, ಅದಕ್ಕೆ ಪ್ರಮುಖ ಕಾರಣ ಇಲ್ಲಿಯ ಆದಿವಾಸಿಗಳು ನಮ್ಮನ್ನು ಆಳವಾದ ಅವಿಶ್ವಾಸದಿಂದ ನೋಡುತ್ತಾರೆ. ಆದರೆ ಮಾವೋವಾದಿಗಳಿಗೆ ಆದಿವಾಸಿಗಳೊಂದಿಗೆ ಸಂಪರ್ಕವಿದೆ. ಅದಕ್ಕೆ ಕಾರಣ ಭಯವೂ ಇರಬಹುದು ಅಥವಾ ನೈಜ ಬೆಂಬಲವೂ ಇರಬಹುದು."

ಓರ್ವ ಹಿರಿಯ ಅಧಿಕಾರಿಯೇ ಅಲ್ಲಿನ ಜನ ತಮ್ಮನ್ನು ನಂಬುವುದಿಲ್ಲ ಬದಲಾಗಿ ಮಾವೋವಾದಿಗಳನ್ನೇ ನಂಬುತ್ತಾರೆ ಎಂದು ಹೇಳುತ್ತಾರೆಂದರೆ ಯಾರು ಆದಿವಾಸಿಗಳ ಕಣ್ಣಲ್ಲಿ 'ಜನಪರರು' ಎಂಬುದು ಅರ್ಥವಾಗುತ್ತಲ್ಲವೇ? ಆದ್ದರಿಂದಲೇ ಮಾವೋವಾದಿಗಳ ಈ ಹತ್ಯಾಕಾರ್ಯಾಚರಣೆಯ ಬಗ್ಗೆ ಯಾರೂ ಪೊಲೀಸರಿಗೆ ತಿಳಿಸಲಿಲ್ಲ ಎಂಬುದೂ ಗೊತ್ತಾಗುತ್ತದಲ್ಲವೇ?



ವಾಸ್ತವವಾಗಿ ಈ ಅರಣ್ಯದ ಆದಿವಾಸಿಗಳನ್ನು ಸರ್ಕಾರಗಳು ಶತಮಾನಗಳಿಂದ ಶೋಷಿಸುತ್ತಲೇ ಬಂದಿದೆ. ಶಾಲೆ, ಆರೋಗ್ಯ ಸವಲತ್ತು, ಪಡಿತರ ಚೀಟಿ, ಭಾವಿ, ಚಾನೆಲ್ ತರಹದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರ ಇಲ್ಲಿ ಮಾಡಿಲ್ಲ, ಇಲ್ಲಿರುವ ರಸ್ತೆಗಳು ಕೂಡ ಜನರಿಗಾಗಿ ನಿರ್ಮಿಸಿರುವಂತಹದ್ದಲ್ಲ, ಅವುಗಳು ಹಳ್ಳಿಗಳ ಮತ್ತು ಮಾರುಕಟ್ಟೆಗಳ ನಡುವೆ ಸಂಪರ್ಕ ಸೃಷ್ಟಿಸಿಲ್ಲ, ಬದಲಾಗಿ ಈ ರಸ್ತೆಗಳಿರುವುದೇ ಪೊಲೀಸ್, ಅರಣ್ಯ ಅಧಿಕಾರಿ ಮತ್ತು ಅರೆಸೇನಾ ಪಡೆಗಳಿಗೆಂದು.

ಸರ್ಕಾರ ಹೀಗೆ ಆದಿವಾಸಿಗಳಿಗೆ ಕಿರುಕುಳ ನೀಡುತ್ತಿದ್ದಾಗಲೇ ಅವರ ನೆರವಿಗೆ, ಬೆಂಬಲಕ್ಕೆ ನಿಂತದ್ದು ಮಾವೋವಾದಿಗಳು. ಈಗಲೂ ಅಲ್ಲಿನ ಆದಿವಾಸಿಗಳಿಗೆ ವೈರಿಗಳಾಗಿರುವುದು ಭಾರತದ ಮತ್ತು ಆಯಾ ರಾಜ್ಯಗಳ ಸರ್ಕಾರಗಳೇ ಹೊರತು ಅರಣ್ಯಗಳಲ್ಲಿ ಮಾವೋವಾದಿಗಳ ನೇತೃತ್ವದಲ್ಲಿ ಸ್ಥಾಪನೆಗೊಂಡಿರುವ ಜನತೆಯ ಸರ್ಕಾರಗಳಲ್ಲ, ಇತ್ತೀಚೆಗಂತೂ ಭಾರತದ ಮತ್ತು ಛತ್ತೀಸಘಢದ ಸರ್ಕಾರಗಳು ಪೋಟಾ ಕಾಯ್ದೆಯನ್ನು ಉಪಯೋಗಿಸಿ ಆದಿವಾಸಿಗಳನ್ನು ಬಂಧಿಸುತ್ತಿರುವುದು, ಸಲ್ವಾ ಜುಡುಂ ಮೂಲಕ ಹಳ್ಳಿಗಳನ್ನು ದರೋಡೆ ಮಾಡುತ್ತಿರುವುದು, ಪೊಲೀಸ್, ಅರೆಸೇನಾ ಮತ್ತು ಸಲ್ವಾ ಜುಡುಂನ ಕ್ರಿಮಿಗಳು ಆದಿವಾಸಿ ಮಹಿಳೆಯರ ಮೇಲೆ ಅತ್ಯಾಚಾರಗಳನ್ನು ಎಸಗುತ್ತಿರುವುದು ಮಾಮೂಲಿಯಾಗಿ ಹೋಗಿದೆ. ಇದೆಲ್ಲದರ ನಡುವೆ ಆದಿವಾಸಿಗಳ ಅರಣ್ಯಗಳನ್ನೇ ಸರ್ಕಾರಗಳು ಅದಿರು ಕಂಪನಿಗಳಿಗೆ ನೀಡಲು ತವಕಿಸುತ್ತಿದ್ದಾವೆ. ಇಂತಹ ಪರಿಸ್ಥಿತಿಯಲ್ಲಿ ಆದಿವಾಸಿಗಳು ಮಾವೋವಾದಿಗಳ ಪರ ಇರುತ್ತಾರೆಯೇ ಹೊರತು ರಾಜ್ಯ ಅಥವಾ ಭಾರತ ಸರ್ಕಾರದ ಪರವಾಗಲ್ಲ. ಇದನ್ನು ಅರ್ಥಮಾಡಿಕೊಳ್ಳದೆ ಮಾವೋವಾದಿಗಳನ್ನು ದಮನ ಮಾಡಲು ಕೇಂದ್ರ ಸರ್ಕಾರವೇನಾದರೂ ಭಾರತದ ಸೈನ್ಯವನ್ನು ದಂಡಕಾರಣ್ಯಕ್ಕೆ ಕಳುಹಿಸಿದರೆ ಆಗುವ ದುರಂತ ಅಂತಿಂತಹದ್ದಲ್ಲ, ಹೇಗೆ ಇವತ್ತು ಅಫಘಾನಿಸ್ತಾನ ಮತ್ತು ಇರಾಕ್‌ಗಳಲ್ಲಿ ಜನರ ಬೆಂಬಲವೂ ಇಲ್ಲದೆ, ಮಾಹಿತಿ ಜಾಲವೂ ಇಲ್ಲದೆ ಅಮೆರಿಕ ತನ್ನ ಸೈನಿಕರನ್ನು ಬಲಿ ಕೊಡುತ್ತಿದೆಯೋ ಹಾಗೆಯೇ ಭಾರತವೂ ಮೊನ್ನಿನ ಪ್ರಕರಣದಂತೆ ತನ್ನ ಜವಾರನ್ನು ಮಾವೋವಾದಿಗಳಿಗೆ ಬಲಿಕೊಡುತ್ತದಷ್ಟೇ.

ಮೊನ್ನಿನ ಹತ್ಯಾಕಾಂಡದ ನಂತರ ಗೃಹ ಸಚಿವ ಪಿ. ಚಿದಂಬರಂ ಅವರು ಓರ್ವ ಮಾನವಹಕ್ಕು ಹೋರಾಟಗಾರ್ತಿಗೆ ಫೋನ್ ಮಾಡಿ **"I am ready to loose my men but I will win the war"** (ನಾನು ನನ್ನ ತಂಡದವರನ್ನು ಕಳೆದುಕೊಳ್ಳಲೂ ಸಿದ್ಧ ಆದರೆ ನಾನು ಈ ಯುದ್ಧವನ್ನು ಗೆಲ್ಲುತ್ತೇನೆ) ಎಂದು ಅಬ್ಬರಿಸಿದರಂತೆ.

ಈ ಮನುಷ್ಯನ ದುಷ್ಟತನ ಎಂತಹದ್ದು ನೋಡಿ. ಈತನಲ್ಲಿ ಒಂದೆಡೆ ಬಡ ಆದಿವಾಸಿಗಳ ಬಗ್ಗೆಯೂ ಕಾಳಜಿ ಇಲ್ಲ; ಇನ್ನೊಂದೆಡೆ ತಮ್ಮ ಹೊಟ್ಟೆಪಾಡಿಗಾಗಿ ಪೊಲೀಸ್-ಅರೆಸೇನಾಪಡೆ-ಸೈನ್ಯವನ್ನು ಸೇರುವ ಬಡ ಯುವಕರ ಬಗ್ಗೆಯೂ ಚಿಂತೆ ಇಲ್ಲ. ಯಾರೇ ಸಾಯಲಿ ತಾನು ಗೆಲ್ಲಬೇಕು ಎಂಬ ಧೋರಣೆ ಚಿದಂಬರಂನದ್ದು. ಯಾಕೆಂದರೆ ಆತ ಗೆದ್ದರೆ ವೇದಾಂತ ತರಹದ ದೈತ್ಯ ಗಣಿ ಕಂಪನಿಗಳು ಗೆಲ್ಲುತ್ತವೆ, ಇದೇ ಅರಣ್ಯಗಳಲ್ಲಿರುವ ಗಣಿಗಳು ಲೂಟಿಯಾಗುತ್ತವೆ, ಹಿಂದೊಮ್ಮೆ ವೇದಾಂತ ಕಂಪನಿಗೆ ಕಾನೂನು ಸಲಹೆಗಾರನಾಗಿದ್ದ ಚಿದಂಬರಂಗೆ ಹೆಚ್ಚೆಚ್ಚು ಹಣ ಬರುತ್ತೆ. ಆದಿವಾಸಿಗಳು ಸತ್ತರೇನು? ಜವಾನರು ಬಲಿಯಾದರೇನು? ಭಾರತದ ಸಂಪತ್ತು ಲೂಟಿಯಾದರೇನು? ವೇದಾಂತ ಮತ್ತು ಚಿದಂಬರಂರ ತಿಜೋರಿ ತುಂಬುತ್ತೆ. ಇಂತಹ ಗೃಹಮಂತ್ರಿಯನ್ನು ಹೊಂದಿರುವ ಭಾರತಕ್ಕೆ, ಭಾರತೀಯರಿಗೆ ಭವಿಷ್ಯವಿದೆಯೇ? ●

MOUವಾದಿಗಳ ಮತ್ತು ಮಾವೋವಾದಿಗಳ ನಡುವಿನ ಸಮರ!!

ಕೇಂದ್ರ ಸರ್ಕಾರ ಮಾವೋವಾದಿಗಳನ್ನು ಇನ್ನು ಮೂರು ವರ್ಷಗಳಲ್ಲಿ ಸಂಪೂರ್ಣ ಮುಗಿಸುವುದಾಗಿಯೂ, ದೇಶದ ಅತಿದೊಡ್ಡ ಆಂತರಿಕ ಶತ್ರುವೆಂದರೆ ಮಾವೋವಾದಿಗಳೇ ಎಂದು ಹೇಳುತ್ತಾ 'ಆಪರೇಷನ್ ಗ್ರೀನ್ ಹಂಟ್'ನ ಹೆಸರಲ್ಲಿ ಆ ದೇಶದ ಅಮಾಯಕ ಆದಿವಾಸಿಗಳ ಮೇಲೆ ಯುದ್ಧ ಘೋಷಿಸಿದೆ. ಆದರೆ ಈ ಯುದ್ಧದ ಉದ್ದೇಶ ನಿಜಕ್ಕೂ ಮಾವೋವಾದಿಗಳ ಸಶಸ್ತ್ರ ಹೋರಾಟವನ್ನು ಅದಗಿಸುವುದು ಮಾತ್ರವೇ? ಕಾಶ್ಮೀರ ಹಾಗೂ ಈಶಾನ್ಯ ಭಾರತದ ಹಲವು ರಾಜ್ಯಗಳಲ್ಲೂ ಸಶಸ್ತ್ರ ಹೋರಾಟಗಳು ನಡೆಯುತ್ತಿವೆ. ಅವುಗಳಲ್ಲಿ ಕೆಲವು ಹೋರಾಟಗಳಂತೂ ದೇಶದಿಂದ ವಿಚ್ಛೇದನವನ್ನೇ ಆಗ್ರಹಿಸುತ್ತಿರುವ ಹೋರಾಟಗಳು. ಆದರೂ ಅವುಗಳನ್ನು ದೇಶದ ಪ್ರಮುಖ ಆಂತರಿಕ ಶತ್ರು ಎಂದು ಪರಿಗಣಿಸದೆ ಮಧ್ಯ ಭಾರತದ ದಟ್ಟ ಕಾಡುಗಳಲ್ಲಿ ಆದಿವಾಸಿಗಳ ಬೆಂಬಲದೊಂದಿಗೆ ನಡೆಯುತ್ತಿರುವ ಮಾವೋವಾದಿಗಳ ಸಶಸ್ತ್ರ ಹೋರಾಟವನ್ನು ಮಾತ್ರ ಪ್ರಧಾನ ಮಂತ್ರಿಗಳು ದೇಶದ ನಂ.1 ಆಂತರಿಕ ಶತ್ರುವೆಂದು ಕರೆಯಲು ಕಾರಣವೇನು? ಈ ಹಿಂದೆ ನಾಗಾ ಹೋರಾಟಗಾರರನ್ನು ಮತ್ತು ಕಾಶ್ಮೀರೀ ವಿಮೋಚನಾವಾದಿಗಳನ್ನು ಬಗ್ಗುಬಡಿಯಲು ನಿಯೋಜಿಸಿದ್ದಕ್ಕಿಂತ ಹೆಚ್ಚಿನ ಸಶಸ್ತ್ರ ಪಡೆಗಳನ್ನು, ಹಿಂದೆಂದೂ ಇಲ್ಲದಷ್ಟು ಹಣಕಾಸು ಬೆಂಬಲವನ್ನು ಮತ್ತು ಶಸ್ತ್ರಾಸ್ತ್ರಗಳನ್ನೂ ಒದಗಿಸುತ್ತಿರಲು ಕಾರಣವೇನು?

ಇವೆಲ್ಲಕ್ಕೂ, ಮಾವೋವಾದಿಗಳು ಈ ವ್ಯವಸ್ಥೆಯನ್ನು ಒಪ್ಪದೆ ಕ್ರಾಂತಿ ಮಾಡಲು ಹೊರಟಿರುವುದು ಕಾರಣವೆಂಬುದು ಮಾತ್ರ ನಿಜವಲ್ಲ. ಮಾವೋವಾದಿಗಳು ಕಾಶ್ಮೀರಿ ಅಥವಾ ಈಶಾನ್ಯ ಭಾರತದ ವಿಮೋಚನಾವಾದಿ ಹೋರಾಟಗಳಿಗಿಂತ ಭಾರತದ ಬಂಡವಾಳಶಾಹಿ-ಭೂಮಾಲೀಕ ಸರ್ಕಾರಕ್ಕೆ ದೊಡ್ಡ ಸವಾಲು ಎಂಬುದೇನೋ ನಿಜ. ಏಕೆಂದರೆ ಮಾವೋವಾದಿಗಳ ಹೋರಾಟದ ಉದ್ದೇಶ ಭಾರತದಿಂದ ಬೇರ್ಪಡುವುದಲ್ಲ, ಅವರ ಉದ್ದೇಶ ನವಭಾರತ ನಿರ್ಮಾಣ. ಬಂಡವಾಳಶಾಹಿ, ವಿದೇಶಿ ಸಾಮ್ರಾಜ್ಯಶಾಹಿ ಹಾಗೂ ಸ್ಥಳೀಯ ಭೂಮಾಲೀಕ-ಬಡ್ಡಿವ್ಯಾಪಾರಿಗಳ ಸುಲಿಗೆಗಳಿಲ್ಲದ ಬಡವರ ಭಾರತ. ಹೀಗಾಗಿ ಪ್ರಜಾತಂತ್ರದ ಹೆಸರಲ್ಲಿ ಈ ದೇಶದ ಆಡಳಿತದ ಚುಕ್ಕಾಣಿ ಹಿಡಿದು ಸಕಲ ಸಂಪತ್ತನ್ನೂ ಲೂಟಿ ಹೊಡೆದು ತಮ್ಮ ತಿಜೋರಿ ಸೇರಿಸಿಕೊಳ್ಳುವ "ಸ್ವಾತಂತ್ರ್ಯ"ವನ್ನು ಪಡೆದುಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ಪಾಲಿಗೆ ಮಾವೋವಾದಿಗಳು ಪ್ರಜಾತಂತ್ರದ ವಿರೋಧಿಗಳು ಮತ್ತು ಅವರ ಹೋರಾಟ ಈ ಶಕ್ತಿಗಳಲ್ಲಿ "ಭಯೋತ್ಪಾದನೆ"ಯನ್ನು ಉಂಟುಮಾಡುತ್ತಿರುವುದು ನಿಜವೇ. ಮಾವೋವಾದಿಗಳ ಅಧಿಪತ್ಯ ನಡೆಯುತ್ತಿರುವ ಕಡೆ ಅವರು ಇಡೀ ಬಂಡವಾಳ ಶಾಹಿ ವ್ಯವಸ್ಥೆಗೇ ಪರ್ಯಾಯ ರಾಜಕೀಯ ಮತ್ತು ಪರ್ಯಾಯ ಆರ್ಥಿಕತೆ ಸ್ಥಾಪಿಸಲು ಪ್ರಯತ್ನ ನಡೆಸುತ್ತಾರಾದ್ದರಿಂದ ಮಾವೋವಾದಿಗಳ ಹೋರಾಟ ಒಂದು ಆಡಳಿತದ ವಿರುದ್ಧವಲ್ಲ, ಒಂದು ವ್ಯವಸ್ಥೆಯ ವಿರುದ್ಧ. ಹೀಗಾಗಿ ಯಾರ್‍ಯಾರು ಹಾಲಿ ಅಸ್ತಿತ್ವದಲ್ಲಿರುವ ವ್ಯವಸ್ಥೆಯ ಫಲಾನುಭವಿಗಳೋ ಅವರೆಲ್ಲರಿಗೂ ಈ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಮಾವೋವಾದಿಗಳ ಹೋರಾಟ "ಭಯೋತ್ಪಾದಕ" ಹೋರಾಟವಾಗಿಯೇ ಕಾಣುತ್ತದೆ. ಆದ್ದರಿಂದಲೇ ಮಾವೋವಾದಿಗಳ ಹೋರಾಟವನ್ನು ಬಗ್ಗುಬಡಿಯಬೇಕೆಂಬ ನಿಲುವಿನಲ್ಲಿ ಮಾತ್ರ ಆಳುವ ಪಕ್ಷ ಅಥವಾ ವಿರೋಧ ಪಕ್ಷವೆಂಬ ಭೇದಭಾವವಿಲ್ಲದೆ ಎಲ್ಲಾ ಪಕ್ಷಗಳೂ ಒಂದೇ ರಾಗವನ್ನು ಹಾಡುತ್ತವೆ. ಇದೇ ಪ್ರಾಯಶಃ ಈ ಪಕ್ಷಗಳಲ್ಲಿ ಈ ದೇಶದ ಶೇ.80ರಷ್ಟು ಶೋಷಿತ ಜನರನ್ನು ಪ್ರತಿನಿಧಿಸುವ ಒಂದೇ ಒಂದು ಪಕ್ಷವಿಲ್ಲವೆಂಬುದಕ್ಕೆ ಸಾಕ್ಷಿ.

ಇವೆಲ್ಲಾ ನಿಜವೇ. ಆದರೆ ಮಾವೋವಾದಿಗಳ, ನಕ್ಸಲರ ಹೋರಾಟ ಪ್ರಾರಂಭವಾಗಿ 43 ವರ್ಷಗಳಾಯಿತು. ನಕ್ಸಲರ ಹೋರಾಟ ಛತ್ತೀಸ್‌ಘಡ್‌ನ ಇಂದಿನ ಪರಿಸ್ಥಿತಿಗೆ ಸರಿಸಮವಾದದ್ದಲ್ಲವಾದರೂ ಹತ್ತಿರಹತ್ತಿರವಾದ ಮಟ್ಟಿಗೆ ಬಿಹಾರ, ತೆಲಂಗಾಣ ಮತ್ತು ದಂಡಕಾರಣ್ಯಗಳಲ್ಲಿ ಹೋರಾಟ ನಡೆಯುತ್ತಿದ್ದಾಗಲೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾವೋವಾದಿಗಳ ಮೇಲೆ ಈ ರೀತಿಯಲ್ಲಿ ಅಂತಿಮ ಸಮರವನ್ನು ಸಾರಿರಲಿಲ್ಲ. ಅಷ್ಟೇ ಏಕೆ, ಆಂಧ್ರದ ಪೀಪಲ್ಸ್ ವಾರ್ ಪಕ್ಷದ ನಕ್ಸಲರು ಆದಿಲಾಬಾದ್‌ನ ಗಡಿಗಳನ್ನು ದಾಟಿ ಇಂದಿನ ಛತ್ತೀಸ್‌ಘಡ್‌ದಲ್ಲಿ ಹೋರಾಟ ಪ್ರಾರಂಭಿಸಿದ್ದು 1985ರಲ್ಲಿ, ಕಳೆದೆರಡು ದಶಕಗಳಲ್ಲಿ ಅವರ ಶಕ್ತಿ ಸಾಮರ್ಥ್ಯ ಕ್ರಮೇಣ ಹೆಚ್ಚಾಗಿರುವುದು ನಿಜವಾದರೂ ಅದೇನೂ ಕಳೆದೆರಡು ವರ್ಷಗಳಲ್ಲಿ ಹೆಚ್ಚಾದದ್ದಲ್ಲ. ಹಾಗಿದ್ದರೂ ಕಳೆದ ಕೆಲವು ವರ್ಷಗಳಿಂದೀಚೆಗೇ ಸರ್ಕಾರ ಮಾವೋವಾದಿಗಳನ್ನು ಛತ್ತೀಸ್‌ಘಡ್ ಅರಣ್ಯದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕೆಂದು ನಿರ್ಧರಿಸಿದ್ದು, ಸ್ವಾತಂತ್ರ್ಯಾನಂತರದ ಭಾರತವೇ ಕಂಡುಕೇಳರಿಯದಂಥ ಆಂತರಿಕ ಯುದ್ಧವನ್ನೂ ಪ್ರಾರಂಭಿಸಿರುವುದೇಕೆ?

ಇದಕ್ಕೆ ಇರುವ ಒಂದೇ ಒಂದು ಉತ್ತರ, ಛತ್ತೀಸ್‌ಘಡ ಮತ್ತು ಅದಕ್ಕೆ ಹತ್ತಿಕೊಂಡಂತೆ ಇರುವ ಒರಿಸ್ಸಾ, ಜಾರ್ಖಂಡ್ ರಾಜ್ಯಗಳ ದಟ್ಟಾರಣ್ಯದಲ್ಲಿ ಇರುವ ಅಪಾರ ಖನಿಜ ಸಂಪತ್ತು! 1991ರ ನಂತರ ಭಾರತ ಅನುಸರಿಸುತ್ತಿರುವ ಖಾಸಗೀಕರಣ, ಜಾಗತೀಕರಣ ನೀತಿಯ ಭಾಗವಾಗಿ ಈ ದೇಶದ ಎಲ್ಲಾ ಜನರಿಗೂ ಸೇರಬೇಕಾದ ಖನಿಜ ಸಂಪತ್ತುಗಳೂ ಖಾಸಗೀಕರಣಗೊಂಡಿವೆ. ಒಂದು ಅಂದಾಜಿನಂತೆ ಈ ಪ್ರದೇಶದಲ್ಲಿ ಏನಿಲ್ಲವೆಂದರೂ 12 ಲಕ್ಷ ಕೋಟಿ ರೂಪಾಯಿ ಮೌಲ್ಯದ 28 ಬಗೆಯ ಖನಿಜ ಸಂಪತ್ತು ಅಡಕವಾಗಿದೆ. ಇದು ಈ ದೇಶದ ಮತ್ತು ವಿದೇಶದ ಗಣಿ ಬಹುರಾಷ್ಟ್ರೀಯ ಕಂಪನಿಗಳ ಕಣ್ಣು ಕುಕ್ಕುತ್ತಿದೆ. 2000ರ ನಂತರ ದೇಶದ ಎಲ್ಲಾ ಬಗೆಯ ಖನಿಜ ಸಂಪತ್ತನ್ನು ಖಾಸಗಿ ಕಂಪನಿಗಳು ಹುಡುಕಿ (Explore), ತೆಗೆದು (Extract), ರಫ್ತು (Export) ಮಾಡುವ ನೀತಿ ಜಾರಿಗೆ ಬಂದಿತು. ಅದರ ಭಾಗವಾಗಿ ದೇಶದೆಲ್ಲೆಡೆ ದೇಶೀಯ ಮತ್ತು ವಿದೇಶೀಯ ಖಾಸಗಿ ಕಂಪನಿಗಳು ಖನಿಜದ ಅನ್ವೇಷಣೆಯಲ್ಲಿ ತೊಡಗಿದರು. ಭಾರತ ಸರ್ಕಾರ ಇವೆಲ್ಲವನ್ನು ಬಿಡಿಗಾಸಿನ ಲೈಸೆನ್ಸಿಗೆ ಖಾಸಗಿ ಕಂಪನಿಗಳಿಗೆ ಮಾರಿಕೊಂಡು ಅವರ ಲೂಟಿಗೆ ಎಲ್ಲಾ ಬಗೆಯ ಅನುಕೂಲತೆಯನ್ನು ಒದಗಿಸುವ ಪಾತ್ರವನ್ನಷ್ಟೇ ವಹಿಸಲು ಪ್ರಾರಂಭಿಸಿತು.

ಛತ್ತೀಸ್‌ಘಡ ಕಬ್ಬಿಣ, ಕಲ್ಲಿದ್ದಲು, ವಜ್ರ, ಚಿನ್ನ, ಬಾಕ್ಸೈಟ್, ಯುರೇನಿಯಂ, ಒಳಗೊಂಡಂತೆ 28ಕ್ಕೂ ಹೆಚ್ಚು ಬಗೆಯ ಖನಿಜ ಸಂಪತ್ತನ್ನು ಹೊಂದಿದೆ. ಇಡೀ ದೇಶದ ಎಲ್ಲಾ ಕ್ರೋಮಿಯಮ್ ನಿಕ್ಷೇಪಗಳು ಒರಿಸ್ಸಾದಲ್ಲೇ ಇದೆ. ಇವೆಲ್ಲದರ ಒಟ್ಟು ಮೌಲ್ಯ ಈಗಾಗಲೇ ವಿವರಿಸಿದಂತೆ ಲಕ್ಷಾಂತರ ಕೋಟಿ ರೂಪಾಯಿಗಳಷ್ಟು. ಹೀಗಾಗಿ 2005ರ ವೇಳೆಗೆ ಟಾಟಾ, ಎಸ್ಸಾರ್, ಜೈಸ್ವಾಲ್‌ನಂಥ ಸ್ಥಳೀಯ ಗಣಿ ಉದ್ಯಮಗಳೊಂದಿಗೆ, ವೇದಾಂತ, ಮಿತ್ತಲ್, ಪೋಸ್ಕೋ ಹಾಗೂ ಇನ್ನಿತರ ವಿದೇಶಿ ಕಂಪನಿಗಳೂ ಈ ಸಂಪತ್ತಿನ ಲೂಟಿಗೆ ಅನುಮತಿ ಕೋರಿ ಸರ್ಕಾರದ ಮುಂದೆ ಕ್ಯೂ ಹಚ್ಚಿದವು. ಒಂದು ಅಂದಾಜಿನಂತೆ ಸರ್ಕಾರ ಈ ಎಲ್ಲಾ ಕಂಪನಿಗಳ ಜೊತೆ ಸುಮಾರು 1,50,000 ಕೋಟಿ ಮೌಲ್ಯದ ಒಪ್ಪಂದ ಪತ್ರಕ್ಕೆ (Memorandum Of Understanding- MOU) ಸಹಿ ಹಾಕಿದೆ. ಆಗ ಪ್ರಾರಂಭವಾದದ್ದು ಈ "MOU"ಗಳಿಗೂ ಮಾವೋವಾದಿಗಳಿಗೂ ನಡುವಿನ ಸಮರ!!

2005ರಿಂದೀಚೆಗೆ ಇಡೀ ಮಧ್ಯಭಾರತ ಸಮರ ಸಂಘರ್ಷಮಯವಾದ ವಾತಾವರಣದಲ್ಲಿ ನಲುಗುತ್ತಿರುವುದು ಈ ಹಿನ್ನೆಲೆಯಲ್ಲೇ! ಆದ್ದರಿಂದಲೇ ಈ ಸಮರವನ್ನು ಯಾರು? ಯಾರ ಪರವಾಗಿ? ಯಾರ ಮೇಲೆ ಪ್ರಾರಂಭಿಸಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳದೆ ನಿನ್ನೆ ಸರ್ಕಾರಿ ಪಡೆಗಳಿಂದ ಸಾಯಿಸಲ್ಪಟ್ಟ ಆದಿವಾಸಿ-ಮಾವೋವಾದಿಗಳ ಬರ್ಬರ ಹತ್ಯೆಯನ್ನಾಗಲೀ, ಇಂದು ಮಾವೋವಾದಿಗಳಿಂದ ಸಾಯಿಸಲ್ಪಟ್ಟ ಸೈನಿಕರ ಬರ್ಬರ ಹತ್ಯೆಯನ್ನಾಗಲೀ ಅರ್ಥಮಾಡಿಕೊಳ್ಳಲಾಗುವುದಿಲ್ಲ.

ಆದಿವಾಸಿಗಳು ಈ ಮಧ್ಯಭಾರತದ ಕಾಡುಗಳಲ್ಲಿ ಶತಶತಮಾನಗಳಿಂದ ತಾವೂ ಬದುಕುತ್ತಾ ಕಾಡನ್ನೂ ಉಳಿಸುತ್ತಾ ಬಂದಿದ್ದಾರೆ. ಅಲ್ಲಿರುವ ಅಪಾರ ಖನಿಜ ಸಂಪತ್ತಿನ ನಿಜವಾದ ರಕ್ಷಕರು ಮತ್ತು ವಾರಸುದಾರರು ಈ ಆದಿವಾಸಿಗಳೇ. ತಮ್ಮ ಸಾವಿರಾರು ವರ್ಷಗಳ ಸ್ವಾಭಿಮಾನಿ ಬದುಕನ್ನೂ ಮತ್ತು ಕಾಡನ್ನೂ ಕಿತ್ತುಕೊಳ್ಳಲು ಬಂದ ಎಲ್ಲಾ ಪ್ರಭುತ್ವಗಳ ವಿರುದ್ಧವೂ ರಾಜಿರಹಿತವಾಗಿ ಹೋರಾಡುತ್ತಲೇ ಬಂದಿದ್ದಾರೆ. ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧವೂ ಸಮರ ನಡೆಸಿ ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದ್ದರು.

ಇಂಥಾ ಆದಿವಾಸಿಗಳನ್ನು ಬ್ರಿಟಿಷರಿಗಿಂತ ಸ್ವತಂತ್ರ ಭಾರತ ಹೀನಾಯವಾಗಿ ನಡೆಸಿಕೊಂಡಿದೆ. 1950ರ ಸಂವಿಧಾನ ತನ್ನ ಒಂದೇ ಒಂದು ಕಲಮಿನ ಮೂಲಕ ಇಡೀ ಕಾಡು ಪ್ರಭುತ್ವಕ್ಕೇ ಸೇರಿದ್ದು ಎಂದು ಘೋಷಿಸಿ ಈವರೆಗೆ ಕಾಡಿನ ರಾಜರಾಗಿದ್ದ ಆದಿವಾಸಿಗಳನ್ನು ಏಕಾಏಕಿ ಅಪರಾಧಿಗಳನ್ನಾಗಿಸಿ ಬಿಟ್ಟಿತು. ಸ್ವತಂತ್ರ ಭಾರತದ ಪ್ರಜಾತಂತ್ರ ಸರ್ಕಾರ ಆದಿವಾಸಿಗಳನ್ನು ಕಾಡುಪ್ರಾಣಿಗಳಿಗಿಂತ ಹೀನಾಯವಾಗಿ ನಡೆಸಿಕೊಂಡಿತು. ಇತ್ತೀಚಿನ ಸರ್ಕಾರೀ ವರದಿಯೇ ಹೇಳುವಂತೆ ಶೇ.60ಕ್ಕಿಂತಲೂ ಹೆಚ್ಚಿನ ಆದಿವಾಸಿಗಳು ಈಗಲೂ ಎಲ್ಲಾ ಬಗೆಯ ನಾಗರಿಕ ಸೌಲಭ್ಯದಿಂದ ವಂಚಿತರು. ಅವರಲ್ಲಿ ಮುಕ್ಕಾಲುವಾಸಿ ಮಂದಿಗೆ ಈಗಲೂ ಮೂರುಹೊತ್ತಿನ ಊಟದ ಗ್ಯಾರಂಟಿಯಿಲ್ಲ. ನಕ್ಸಲರು ಛತ್ತೀಸ್‌ಘಡ್‌ಗೆ ಕಾಲಿರಿಸುವ ತನಕ ಅವರನ್ನು ಅರಣ್ಯ ಇಲಾಖೆ, ಕಾಂಟ್ರಾಕ್ಟರುಗಳು ಮತ್ತು ಬಡ್ಡಿವ್ಯಾಪಾರಿ-ಭೂಮಾಲೀಕರು ಸುಲಿಗೆ ಮಾಡುತ್ತಿದ್ದರು. ಚತ್ತೀಸ್‌ಘಡ್‌ನ ಶೇ.70ಕ್ಕೂ ಹೆಚ್ಚು ಪ್ರದೇಶಗಳಿಗೆ ಈ ಆಪರೇಷನ್ ಗ್ರೀನ್‌ಹಂಟ್ ಪ್ರಾರಂಭವಾಗುವರೆಗೂ ಒಬ್ಬ ಸರ್ಕಾರಿ ಅಧಿಕಾರಿ ಕಾಲಿಟ್ಟಿರಲಿಲ್ಲ. ಈಗಲೂ ಅಲ್ಲಿನ ಆದಿವಾಸಿಗಳು ಕಂಡಿರುವ ಸರ್ಕಾರವೆಂದರೆ ಪೊಲೀಸು ಮತ್ತು ಅರೆಸೇನಾ ಪಡೆಗಳೇ. ಪ್ರಜಾತಾಂತ್ರಿಕ ಆಡಳಿತವೆಂದರೆ ಅವರು ಕಂಡಿರುವುದು ಈ ಅಧಿಕಾರಿಗಳು ದಿನಬೆಳಗಾದರೆ ನಡೆಸುವ ಕ್ರೌರ್ಯವನ್ನೇ!

ಇಷ್ಟೆಲ್ಲಾ ಆದರೂ ಆದಿವಾಸಿಗಳು ತಮ್ಮ ಪಾಡಿಗೆ ತಾವು ಹೇಗೋ ಬದುಕುತ್ತಿದ್ದರು. ಆದರೆ ಜಾಗತೀಕರಣದ ಭಾಗವಾಗಿ ಕಾಡಿನ ಖನಿಜ ಸಂಪತ್ತನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಪರಭಾರೆ ಮಾಡುವ ಸಲುವಾಗಿ ಈಗ ಸರ್ಕಾರ ಆದಿವಾಸಿಗಳನ್ನು ಅವರ ಬದುಕಿನ ನೆಲೆಯಾದ ಕಾಡಿನಿಂದಲೇ ಎತ್ತಂಗಡಿ ಮಾಡುತ್ತಿದೆ. ಈಗಾಗಲೆ ಈ ವಲಯದಲ್ಲಿ, ವಿದೇಶಿ ಕಂಪನಿಗಳಿಗೆ ನೂರು ಲೈಸೆನ್ಸ್ ನೀಡಲಾಗಿದೆ. 7650 ಕೀಮೀ ಉದ್ದದ ವಜ್ರದ ಗಣಿಗಳಿಗಾಗಿ, ಹಾಗೂ ಕಬ್ಬಿಣ ಇನ್ನಿತರ ಗಣಿಗಳಿಗಾಗಿ 1.04ಲಕ್ಷ ಹೆಕ್ಟೇರಿನಷ್ಟು ಜಮೀನಿನಲ್ಲಿ ಗಣಿಗಾರಿಕೆ ಮಾಡಲು ಲೈಸೆನ್ಸ್ ನೀಡಲಾಗಿದೆ. ಅವುಗಳನ್ನು ವಿಶೇಷ ಆರ್ಥಿಕ ವಲಯ-ಎಸ್‌ಇಜೆಡ್ ಎಂದು ಘೋಷಿಸಲಾಗಿದೆ. ಹೀಗೆ ವಿದೇಶಿ ಕಂಪನಿಗಳ ಲೂಟಿಗೆ ಎಲ್ಲವೂ ಸಿದ್ಧವಾಗಿದೆ. ಅಡ್ಡವಾಗಿರುವುದು ಆದಿವಾಸಿಗಳು ಮಾತ್ರ. ಒರಿಸ್ಸಾದ ಕಳಿಂಗನಗರ್‌ನಲ್ಲಿ ಟಾಟಾ ಕಂಪನಿ ಗಣಿಗಾರಿಕೆ ಪ್ರಾರಂಭಿಸಲು ಹೊರಟಾಗ ಆದಿವಾಸಿಗಳು ಅಹಿಂಸಾತ್ಮಕವಾಗಿ ಆದರೆ ಪ್ರಬಲವಾಗಿ ಪ್ರತಿಭಟಿಸಿದರು. ಆದರೆ ಪೊಲೀಸರು 2006ರಲ್ಲಿ ಅವರ ಮೇಲೆ ಗೋಲಿಬಾರ್ ನಡೆಸಿ ಪ್ರತಿಭಟನೆಯನ್ನು ಹೆಚ್ಚೂಕಡಿಮೆ ಹತ್ತಿಕ್ಕಿದರು. ಅದೇರೀತಿ ಕರಾವಳಿ ಒರಿಸ್ಸಾದಲ್ಲಿ ಪೊಸ್ಕೋ ಎಂಬ ವಿದೇಶಿ ಕಂಪನಿಯ ವಿರುದ್ಧ ಸ್ಥಳೀಯ ಆದಿವಾಸಿಗಳು ಕಳೆದ ಎರಡು ವರ್ಷಗಳಿಂದ ಅಹಿಂಸಾತ್ಮಕವಾಗಿ ಶಾಂತಿಯುತವಾಗಿ ಹೋರಾಡುತ್ತಿದ್ದಾರೆ. ಆದರೆ ಅವರ ಆರ್ತನಾದವನ್ನು ಯಾವ ಸರ್ಕಾರವೂ, ಮಾಧ್ಯಮಗಳೂ ಕೇಳಿಸಿಕೊಳ್ಳುತ್ತಿಲ್ಲ.

ಆದರೆ ಛತ್ತೀಸ್‌ಘಡ್‌ನ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿದೆ. ಇಲ್ಲಿ ಆದಿವಾಸಿಗಳನ್ನು ಕಳೆದೆರಡು ದಶಕಗಳಿಂದಲೂ ಮಾವೋವಾದಿ ನಕ್ಸಲರು ಸಶಸ್ತ್ರ ಹೋರಾಟದದಿಯಲ್ಲಿ ಸಂಘಟಿಸುತ್ತಿರುವುದರಿಂದ ಇಲ್ಲಿ ಅವರನ್ನು ಎತ್ತಂಗಡಿ ಮಾಡುವುದು ಅಷ್ಟು ಸುಲಭವಲ್ಲವೆಂದು ಪ್ರಾರಂಭದಲ್ಲೇ ಸರ್ಕಾರ ಮತ್ತು ಕಂಪನಿಗಳು ಅರ್ಥಮಾಡಿಕೊಂಡಿದ್ದವು. ಅದಕ್ಕೇ ಆದಿವಾಸಿಗಳನ್ನು ಕಾಡಿನಿಂದ ಎತ್ತಂಗಡಿ ಮಾಡಲು "ಸಾಲ್ವಾ ಜುಡುಂ" ಎಂಬ ಅತ್ಯಂತ ಕ್ರೂರ ಕುತಂತ್ರವನ್ನು ಮಾಡಿತು. ಅದರಡಿಯಲ್ಲಿ ಆದಿವಾಸಿಗಳನ್ನೇ ಆದಿವಾಸಿಗಳ ವಿರುದ್ಧ ಎತ್ತಿಕಟ್ಟಿ ಪರಸ್ಪರ ಭ್ರಾತೃಹತ್ಯೆ ಮಾಡಲು ಪ್ರೇರೇಪಿಸಿದರು. ಅವರ ಜೊತೆ ಸೇರಿ ಅರೆಸೇನಾ ಪಡೆಗಳು ಸಹ ನಾಗರಿಕ ಸಮಾಜ ಕಂಡುಕೇಳರಿಯದ ಹಿಂಸಾಚಾರವನ್ನು ಎಸಗಿತು. ಸುಪ್ರೀಂಕೋರ್ಟಿನಲ್ಲೇ ಒಪ್ಪಿಕೊಂಡಿರುವ ಅಂಕಿಅಂಶಗಳ ಪ್ರಕಾರ ಒಂದು ವರ್ಷದಲ್ಲೇ 538 ಬರ್ಬರ ಹತ್ಯೆಗಳು, ಮಹಿಳೆಯರ ಮೇಲೆ 99ಕ್ಕೂ ಹೆಚ್ಚು ಅತ್ಯಾಚಾರಗಳು ಕೇವಲ 2006 ಒಂದರಲ್ಲೇ ನಡೆದಿತ್ತು.

76 ಯೋಧರ ಹತ್ಯೆಗೆ ಕಣ್ಣೀರು ಮಿಡಿದ ಎಷ್ಟು ಜನ ಈ ಹತ್ಯೆಗಳಿಗೆ ಕಣ್ಣೀರು ಮಿಡಿದರು? ಎಷ್ಟು ಪತ್ರಿಕೆಗಳು ಇದರ ಬಗ್ಗೆ ಬರೆದವು? ಎಷ್ಟು ಟಿವಿ ಚಾನೆಲ್‌ಗಳು ಚರ್ಚೆಗಳನ್ನು ಏರ್ಪಡಿಸಿದವು? ಪ್ರಜಾತಂತ್ರದ ಬಗ್ಗೆ ಈಗ ಉದ್ದುದ್ದನ್ನೇ ಮಾತನಾಡುತ್ತಿರುವ ಉದ್ಯಮಿಗಳು ಮತ್ತವರ ಗೃಹಮಂತ್ರಿಗಳು ಆಗೇನು ಮಾಡುತ್ತಿದ್ದರು?

ಪ್ರಾರಂಭದಲ್ಲಿ ಮಹಿಳೆಯರ ಅತ್ಯಾಚಾರಗಳನ್ನು ಮಾಡಿದ "ಸಾಲ್ವಾ ಜುಡುಂ"ನ ನರಹಂತಕ ಪಡೆಗಳನ್ನು ಕಟ್ಟಲು ಸರ್ಕಾರಕ್ಕೆ ಹಣ ನೀಡಿದ್ದೇ ಟಾಟಾ ಕಂಪನಿ. ಅಲ್ಲಿ ಬಾಕ್ಸೈಟ್ ಅದಿರನ್ನು ಲೂಟಿ ಮಾಡಲು ಮಾಡಬಾರದ ಅನಾಚಾರ ಮಾಡುತ್ತಿರುವ ವೇದಾಂತ ಕಂಪನಿಗೆ ವಕಾಲತ್ತು ವಹಿಸಿದ್ದು ಇಂದಿನ ಗೃಹ ಮಂತ್ರಿಯಾದ ಚಿದಂಬರಂ.

ಹೀಗೆ ಆಪರೇಷನ್ ಗ್ರೀನ್ ಹಂಟ್ ಸಾರಾಂಶದಲ್ಲಿ ಕಾರ್ಪೊರೇಟ್ ಸಂಸ್ಥೆಗಳು ಸರ್ಕಾರದ ನೀತಿಗೆಟ್ಟ ಬೆಂಬಲದೊಂದಿಗೆ ನಡೆಸುತ್ತಿರುವ ಟ್ರೆಷರ್ ಹಂಟ್ (ನಿಧಿ ಬೇಟೆ) ಆಗಿದೆ. ಇದಕ್ಕೆ ಅಡ್ಡಿಯಾಗಿರುವ ಎಲ್ಲಾ ಅಡೆತಡೆಗಳನ್ನು ನಿವಾರಿಸಿಕೊಳ್ಳಲೆಂದೇ "ಮಾವೋವಾದಿ"ಗಳ ಗುಮ್ಮವನ್ನು ತೋರಿಸಿ ಆದಿವಾಸಿಗಳನ್ನು ಬೇಟೆಯಾಡಲಾಗುತ್ತಿದೆ.

ದೇಶವೆಂದರೆ ಕಾರ್ಪೊರೇಟ್ ದೊರೆಗಳು ಎನ್ನುವವರಿಗೆ ಖಂಡಿತಾ ಮಾವೋವಾದಿಗಳು ನಂ1 ಆಂತರಿಕ ಶತ್ರುಗಳೇ! ಆದರೆ ದೇಶವೆಂದರೆ ಆದಿವಾಸಿಗಳು, ಬಡಜನರು ಮತ್ತು ಎಲ್ಲಾ ಶೋಷಿತರು ಎನ್ನುವವರಿಗೆ ಮಾತ್ರ ದೇಶದ ನಂ1 ಆಂತರಿಕ ಶತ್ರು ಈ ಜನವಿರೋಧಿ ಸರ್ಕಾರ ಮತ್ತು ಲೂಟಿಕೋರ ಕಾರ್ಪೊರೇಟ್ ಸಂಸ್ಥೆಗಳೇ ಅಲ್ಲವೇ?


ಆದ್ದರಿಂದಲೇ ಸರ್ಕಾರ ಈ ಅನ್ಯಾಯದ ಮತ್ತು ಸಂವಿಧಾನ ವಿರೋಧಿ ಯುದ್ಧಕ್ಕೆ ಮಾನ್ಯತೆ ದೊರಕಿಸಿಕೊಳ್ಳಲು ಮಾವೋವಾದಿಗಳಿಗೆ ಭಯೋತ್ಪಾದಕರ ಪಟ್ಟವನ್ನು ಕಟ್ಟಿ ಯುದ್ಧ ಘೋಷದ ಕರ್ಕಶ ಧ್ವನಿಯಡಿ ಆದಿವಾಸಿಗಳ ಆಕ್ರಂದನವನ್ನು ಅಡಗಿಸಿಡುವ ಪ್ರಯತ್ನ ಮಾಡುತ್ತಿದೆ. ಜನತೆಯ (ಯೋಧರ, ಮಾವೋವಾದಿಗಳ) ಹೆಣಗಳ ಮೆರವಣಿಗೆಯ ಸದ್ದಿನಲ್ಲಿ ಕಾಡಿನ ಲೂಟಿಯ ಕಡೆ ಗಮನ ಹರಿಯದಂತೆ ನೋಡಿಕೊಳ್ಳುತ್ತಿದೆ.

ಹೀಗಾಗಿ ಈ ಯುದ್ಧ ಕಾರ್ಪೊರೇಟ್ ಕಂಪನಿಗಳು ಜನರ ವಿರುದ್ಧ, ಆದಿವಾಸಿಗಳ ವಿರುದ್ಧ, ಈ ದೇಶದ ವಿರುದ್ಧ ನಡೆಸಿರುವ ಯುದ್ಧವಾಗಿದೆ. ನಮ್ಮನ್ನು ಕಾಯಬೇಕಾದ ಸರ್ಕಾರ ಜನ ಶತ್ರುಗಳ ಸೈನ್ಯದ ದಂಡನಾಯಕವಾಗಿದೆ. ಈಗ ಜನರೇನು ಮಾಡಬೇಕು?



• ಶಿವಸುಂದರ್
shivasundar35@gmail.com

ಎಲ್ಲೋ ಒಂದೆರಡು ವಾರ್ಡುಗಳ ಹೊರತಾಗಿ ಈ ಬಾರಿ ಇಡೀ ಸುನೀಲನ ಗ್ಯಾಂಗ್ ಬಿಜೆಪಿ ಪರ ಕಾರ್ಯಾಚರಣೆಗಿಳಿದಿದ್ದಂತೂ ವಾಸ್ತವ. ಮತ್ತು ಸುನೀಲನ ಬಿಜೆಪಿ ಸೇವೆಗೆ ಮಂತ್ರಿ ಕಟ್ಟಾ ಜಗ್ಗನೇ ಮೂಲಪುರುಷನೆಂಬುದು ಕೂಡ ಅಷ್ಟೇ ಸತ್ಯ. ಬೆಂಗಳೂರು ಪಾಲಿಕೆ ಹಿಡಿಯುವ ಬಿಜೆಪಿ ದುರಾಶೆಗೆ ರೌಡಿಯಾದರೇನು ಕೇಡಿಯಾದರೇನು?



ಪಾಲಿಕೆ ಎಲೆಕ್ಷನ್ ಸೈಲೆಂಟ್ ಸುನೀಲನ ಬಿಜೆಪಿ ಸೇವೆ

ಸರ್ಕಾರವಿದ್ದು, ಕೋಟಿಗಟ್ಟಲೇ ದುಡ್ಡು ಸುರಿದೂ ಬೆಂಗಳೂರು ಪಾಲಿಕೆ ಹಿಡಿಯಲು ಬಿಜೆಪಿಗೆ ಸೈಲೆಂಟ್ ಸುನೀಲನಂಥ ಪಾತಕಿಯ ಜೊತೆ ಕೈಜೋಡಿಸಬೇಕಾದ ದುರಂತಕ್ಕೆ ಏನೆನ್ನಬೇಕು?

ಈ ಸಲದ ಪಾಲಿಕೆ ಚುನಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದ ಯಾರಿಗಾದರೂ ಮನದಟ್ಟಾಗುವ ಒಂದು ಸಂಗತಿಯೆಂದರೆ ಸದ್ಯ ಚಿತ್ರದುರ್ಗ ಜೈಲಲ್ಲಿರುವ ಸೈಲೆಂಟ್ ಸುನೀಲನ ಇಡೀ ಗ್ಯಾಂಗ್ ಈ ಬಾರಿ ಬಿಜೆಪಿ ಅಭ್ಯರ್ಥಿಗಳ ಬೆಂಬಲಕ್ಕೆ ನಿಂತಿದ್ದು!

ಪ್ರಕಾಶ್‌ನಗರದ ಬಿಜೆಪಿ ಅಭ್ಯರ್ಥಿ ಕೆ. ರವೀಂದ್ರನನ್ನು ಗೆಲ್ಲಿಸಲು ಮರಿಯಪ್ಪನ ಪಾಳ್ಯದ ಇಡೀ ಸುನೀಲನ ಗ್ಯಾಂಗ್ ಬೀದಿಗಿಳಿದದ್ದು, ವಸಂತನಗರದಲ್ಲಿ ಕಟ್ಟಾ ಮಗ ಜಗ್ಗನ ಪರವಾಗಿ ಸುನೀಲನ ಹಾರ್ಡ್‌ಕೋರ್ ಶಿಷ್ಯರೆಲ್ಲ ಕಾಂಗ್ರೆಸ್ ಕಾರ್ಯಕರ್ತರನ್ನು ಆಟ್ಟಾಡಿಸಿದ್ದು, ಯಲಹಂಕದ ಶಾಸಕ ವಿಶ್ವನಾಥ್ ಪರವಾಗಿ ಅಲ್ಲಿನ ಮೂರು ವಾರ್ಡುಗಳ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಸುನೀಲನ ಗುರು ಗೆಡ್ಡಾ ನಾಗ ಮತ್ತು ಬುಲೆಟ್‌ರವಿ ಕೊಲೆ ಕೇಸಿನ ಪ್ರಮುಖ ಆರೋಪಿ ಅಳ್ಳಾಳ ಸಂದ್ರ ಶೇಖಿ ಓಡಾಡಿದ್ದು ಸಂಪಂಗಿರಾಮನಗರ ಬಿಜೆಪಿ ಕ್ಯಾಂಡಿಡೇಟ್ ಮತ್ತು ಕಟ್ಟಾ ಲ್ಯಾಂಡ್ ದಂಧೆಯ ಬೇನಾಮಿ ಗೋಪಿಯ ಪರ ಸುನೀಲನ ಮತ್ತೊಂದು ಟೀಮು ದುಡ್ಡು ಹಂಚಲು ನಿಂತದ್ದು ಬಿಜೆಪಿ ನಾಯಕರ ಕ್ರಿಮಿನಲ್ ಕಾಂಟ್ಯಾಕ್ಟಿಗೆ ಕೆಲ ನಿದರ್ಶನಗಳಷ್ಟೆ.

ಎಲ್ಲೋ ಒಂದೋ ಎರಡೋ ವಾರ್ಡುಗಳಲ್ಲಿ ಸುನೀಲನ ಹುಡುಗರು ಪಕ್ಷೇತರರಿಗೋ ಅಥವಾ ಬಿಜೆಪಿಯೇತರ ಅಭ್ಯರ್ಥಿಗಳ ಪರವಾಗೋ ಓಡಾಡಿದ್ದು ಬಿಟ್ಟರೆ ಮಿಕ್ಕಂತೆ ಆತನ ಇಡೀ ನೆಟ್‌ವರ್ಕ್ ಈ ಬಾರಿ ಬಿಜೆಪಿ ಬೆನ್ನಿಗೆ ನಿಂತಿತ್ತು, ಇಲ್ಲಿಗೆ ತಿಂಗಳ ಹಿಂದಷ್ಟೇ ಜೈಲಿಂದ ಹೊರಬಿದ್ದ ಸುನೀಲನ ರೈಟ್‌ಹ್ಯಾಂಡ್ ಒಂಟೆ ಫ್ಯಾಮಿಲಿ ತಾಪತ್ರಯಕ್ಕೆ ಸಿಲುಕಿ ಈ ಬಾರಿ ಎಲ್ಲೂ ಬಹಿರಂಗ ಪ್ರಚಾರಕ್ಕೆ ಬರಲಿಲ್ಲ, ಹಾಗಂತ ಸುನೀಲನ ಇತರೇ ಶಿಷ್ಯರು ಕೈಕಟ್ಟಿ ಕೂರದೇ ಕಟ್ಟಾ ಜಗ್ಗನ ಪರ ದುಡಿಯಲು ನಿಂತರು.

ವಸಂತನಗರದ ಲೋಕಲ್ ರೌಡಿ ಸಂಪತ್ತು ಎಂಬಾತನ ಜೊತೆ ಪೀಸಿ ವಿಜಿ, ಪಿಟಿ ಸಂತೋಷ್ ಮತ್ತು ಅನಾಲಿ ಮುಂತಾದ ಸುನೀಲನ ಶಿಷ್ಯರು ಓಡಾಡಿದ ಬಗ್ಗೆ ಸಿಸಿಬಿ ಪೊಲೀಸರಿ ಗಾಗಲೇ ಮಾಹಿತಿ ಸಿಕ್ಕಿತ್ತು, ಇನ್ನೆಲ್ಲಿ ಕಟ್ಟಾ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತೋ ಎಂದು ಹೆದರಿದ ಸಿಸಿಬಿ ಎಸಿಪಿ ಹಾದಿಮನಿ ತಮ್ಮ ತಾಯಿಯ ಆರೋಗ್ಯ ಸರಿಯಿಲ್ಲವೆಂಬ ಕಾರಣ ಕೊಟ್ಟು ರಜೆ ಮೇಲೆ ಹೋದವರು ಈತನಕ ಬೆಂಗಳೂರಿಗೆ ಕಾಲಿಟ್ಟಿಲ್ಲ!


ಸಂಪಂಗಿ ರಾಮನಗರಕ್ಕೆ ಬಿಜೆಪಿ ಅಭ್ಯರ್ಥಿಯಾದ ಗೋಪಿ ಹೇಳಿಕೇಳಿ ಕಟ್ಟಾ ಬೇನಾಮಿ. ಬಂಡಿಕೊಡಿಗೇ ಹಳ್ಳಿಯಲ್ಲಿ ನಕಲಿ ಇಟಾಸ್ಕಾ ಕಂಪೆನಿಯ ಹೆಸರಲ್ಲಿ ಕಟ್ಟಾ ತನ್ನ ಪತ್ನಿ ಸೌಭಾಗ್ಯಮ್ಮನವರ ಜೊತೆ ಈ ಗೋಪಿಯನ್ನೂ ಕಂಪೆನಿಯ ಮತ್ತೊಬ್ಬ ಡೈರೆಕ್ಟರಾಗಿ ಮಾಡಿಕೊಂಡಿದ್ದಾರೆ.

ಈತನ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾದ ಶೇಖಿಗೆ ಸ್ಥಳೀಯವಾಗಿ ಒಳ್ಳೆಯ ಹೆಸರಿದೆ. ಬಹುಶಃ ಮಾಜಿ ಕೌನ್ಸಿಲರ್ ನಾಗರತ್ನ ನಾಗರಾಜುಗೆ ಬಿಜೆಪಿ ಟಿಕೆಟ್ ಕೊಟ್ಟಿದ್ದರೆ ಇಲ್ಲಿ ಬಿಜೆಪಿಗೆ ತಾಪತ್ರಯವಿರಲಿಲ್ಲ. ಆದರೆ ಗೋಪಿಯನ್ನು ಹೇಗಾದರೂ ಮಾಡಿ ಗೆಲ್ಲಿಸಬೇಕಿಲ್ಲ; ಅದಕ್ಕೆ ಕಟ್ಟಾ ಮಗ ಜಗ್ಗ ನೇಮಿಸಿದ್ದು ಸುನೀಲನ ಮತ್ತೊಬ್ಬ ಬಂಟ ಮಾರ್ಕೆಟ್ ವೇಡಿಯನ್ನು!

ಆದರೆ ಮಾರ್ಕೆಟ್ ವೇಡಿಗೆ ಸಿಸಿಬಿ ಪೊಲೀಸರ ಭಯ. ಬಹಿರಂಗವಾಗಿ ಬಿಜೆಪಿ ಅಭ್ಯರ್ಥಿ ಗೋಪಿಯ ಪರ ಓಡಾಡುವಂತಿಲ್ಲ, ಅದಕ್ಕೊಂದು ಪಕ್ಕದ ಕೆ.ಎಸ್. ಗಾರ್ಡನ್ನಿಗೆ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ ವೇಡಿ ಹಗಲು ಹೊತ್ತು ತನ್ನ ಪರ ಪ್ರಚಾರ ಮಾಡಿಕೊಂಡು ರಾತ್ರಿಯಾಗುತ್ತಿದ್ದಂತೆ ಪಕ್ಕದ ಸಂಪಂಗಿರಾಮನಗರದ ಕಟ್ಟಾ ಶಿಷ್ಯ ಗೋಪಿಯ ಜೊತೆ ಅಖಾಡಕ್ಕಿಳಿಯುತ್ತಿದ್ದ. ಒಂದು ಮೂಲದ ಪ್ರಕಾರ ಪಲ್ಲವಿ ಟಾಕೀಸ್ ಹಿಂಭಾಗದ ಸ್ಲಮ್ಮು ಮತ್ತು ಪೂರ್ಣಿಮಾ ಟಾಕೀಸ್ ಎದುರಿದ್ದ ತಮಿಳರ ಓಟುಗಳನ್ನೆಲ್ಲ ಗೋಪಿಗೆ ಕಟರ್ ಮಾಡಿಕೊಟ್ಟಿದ್ದೇ ಸುನೀಲನ ಬಂಟ ವೇಡಿ.

ಈ ಸಲದ ಪಾಲಿಕೆ ಚುನಾವಣೆಯಲ್ಲಿ ಸುನೀಲನನ್ನು ಮುಂದಿಟ್ಟುಕೊಂಡೇ ತಮ್ಮ ಕೆಲ ಚೇಲಾಗಳನ್ನು ಗೆಲ್ಲಿಸುವುದು ಕಟ್ಟಾ ಮಗ ಜಗ್ಗ ಮತ್ತು ಯಲಹಂಕದ ಶಾಸಕ ವಿಶ್ವನಾಥ್ ತಂತ್ರವಾಗಿತ್ತು, ಬುಲೆಟ್ ರವಿ ಹತ್ಯೆಗೆ ಸುಪಾರಿ ಕೊಟ್ಟಿದ್ದೇ ಯಲಹಂಕ ಶಾಸಕ ವಿಶ್ವನಾಥ್ ಎಂದು ಸ್ವತಃ ಬುಲೆಟ್ ರವಿ ಅಣ್ಣನೇ ಆರೋಪಿಸಿದ್ದಕ್ಕೂ, ಬುಲೆಟ್ ರವಿಯ ಹತ್ಯೆಗೂ ಮುನ್ನ ನಡೆದ ಶಾಸಕ ವಿಶ್ವನಾಥ್ ಹುಟ್ಟುಹಬ್ಬದ ಪಾರ್ಟಿಯಲ್ಲಿ ಗೆಡ್ಡಾನಾಗ ಮತ್ತು ಸುನೀಲ ಭಾಗವಹಿಸಿದ್ದಕ್ಕೂ, ಈಗ ಪಾಲಿಕೆ ಚುನಾವಣೆಯಲ್ಲಿ ಇದೇ ಸುನೀಲನ ಗ್ಯಾಂಗ್ ಬಿಜೆಪಿಯ ಪರ ಕಾರ್ಯಾಚರಣೆಗಿಳಿದದ್ದಕ್ಕೂ, ಪರಸ್ಪರ ಸಂಬಂಧವಿಲ್ಲದಿಲ್ಲ.

ಯಲಹಂಕದ ಅಟ್ಟೂರು ಲೇಔಟ್ ವಾರ್ಡಿಗೆ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದದ್ದು ಪ್ರೇಮ್‌ಕುಮಾರ್ ಎಂಬ ನಿಷ್ಠಾವಂತ ಕಾರ್ಯಕರ್ತ. ಪಕ್ಕದ ವಾರ್ಡ್ ನಂಬರ್ ನಾಲ್ಕಾದ ಯಲಹಂಕಕ್ಕಾದರೂ ಪ್ರೇಮ್ ಕುಮಾರ್‌ಗೆ ಟಿಕೆಟ್ ಕೊಡಬಹುದಿತ್ತು, ಆದರೆ ವಿಶ್ವನಾಥ್‌ಗೆ ಪ್ರೇಮ್‌ಕುಮಾರ್ ಥರದ ಬುದ್ಧಿವಂತರು ಬೇಕಿಲ್ಲ, ಗೆದ್ದು ಮುಂದೊಮ್ಮೆ ತನಗೇ ಪ್ರತಿಸ್ಪರ್ಧಿಯಾಗಬಹುದೆಂಬ ಅಳುಕು ಬೇರೆ. ಅದಕ್ಕೆ ಅಟ್ಟೂರು ಲೇಔಟಿಗೆ ಡಾ. ಗೀತಾ ಶಶಿಕುಮಾರ್ ಎಂಬ ರಬ್ಬರ್ ಸ್ಟ್ಯಾಂಪ್ ಅಭ್ಯರ್ಥಿಗೆ ಟಿಕೆಟ್ ಕೊಟ್ಟು ಪ್ರೇಮ್‌ರನ್ನು ಬೀದಿಗೆ ಹಾಕಿದ್ದಾಯ್ತು, ಹಾಗೇ ಪಕ್ಕದ ಯಲಹಂಕಕ್ಕೆ ಮುನಿರಾಜು ಎಂಬ ಮತ್ತೊಬ್ಬ ನರಸತ್ತ ಆಸಾಮಿಯನ್ನು ಕಣಕ್ಕಿಳಿಸಿದರು.



ವಿಶ್ವನಾಥ್

ಇಂಥ ರಬ್ಬರ್ ಸ್ಟ್ಯಾಂಪ್ ಅಭ್ಯರ್ಥಿಗಳನ್ನು ಹೇಗಾದರೂ ಮಾಡಿ ಗೆಲ್ಲಿಸಬೇಕಲ್ಲ; ಅದಕ್ಕೆ ವಿಶ್ವನಾಥ್ ವೀಳ್ಯ ಕೊಟ್ಟಿದ್ದು ಬುಲೆಟ್ ರವಿ ಕೊಲೆ ಕೇಸಿನ ಆರೋಪಿಗಳಾದ ಗೆಡ್ಡಾ ನಾಗ ಮತ್ತು ಅಳ್ಳಾಳಸಂದ್ರದ ಶೇಖಿಗೆ.




ಪದ್ಮಾವತಿ

ಗೆಡ್ಡಾ ನಾಗ ಹೇಳಿಕೇಳಿ ಸುನೀಲನ ಗುರು. ಯಲಹಂಕದ ಮೂರು ವಾರ್ಡುಗಳಲ್ಲಿ ಎಲ್ಲೆಲ್ಲಿ ಸುನೀಲನಿಗೆ ಹುಡುಗರಿದ್ದರೋ ಅವರೆಲ್ಲರನ್ನೂ ಶಾಸಕ ವಿಶ್ವನಾಥ್ ಮನೆಯಲ್ಲೇ ಗುಡ್ಡೆ ಹಾಕಿದ ಗೆಡ್ಡಾ ನಾಗ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಯಥೇಚ್ಛವಾಗಿ ಕಾಸು ಹಂಚಿದ್ದು ಯಾರಿಗೆ ಗೊತ್ತಿಲ್ಲ?



ರವೀಂದ್ರ

ಅಷ್ಟಕ್ಕೂ ಕಟ್ಟಾ ಮಗ ಜಗ್ಗನಿಗೆ ಸುನೀಲನನ್ನು ಅಂಟು ಹಾಕಿದ್ದೇ ಶಾಸಕ ವಿಶ್ವನಾಥ್. ಮೊನ್ನೆ ಸುನೀಲನನ್ನು ಜಂಟಿ ಪೊಲೀಸ್ ಕಮೀಷನರ್ ಅಲೋಕ್‌ಕುಮಾರ್ ಇನ್ನೇನು ಎನ್‌ಕೌಂಟರ್ ಮಾಡೇ ಬಿಟ್ಟರು ಎನ್ನುವಾಗ ಮಂತ್ರಿ ಕಟ್ಟಾನ ಮೂಲಕ ಅಲೋಕ್‌ಕುಮಾರ್‌ರನ್ನು ದಬಾಯಿಸಿ ಪ್ರಾಣ ಉಳಿಸಿದ್ದೇ ಕಟ್ಟಾಮಗ ಜಗ್ಗ ಮತ್ತು ಶಾಸಕ ವಿಶ್ವನಾಥ್. ಪ್ರತಿಯಾಗಿ ಸುನೀಲ ಇಷ್ಟೂ ಋಣ ತೀರಿಸದಿದ್ದರೆ ಹೇಗೆ?



ಎಚ್.ರವೀಂದ್ರ

ಸುನೀಲನ ಭದ್ರಕೋಟೆಯಂತಿರುವುದು ಗಾಯತ್ರಿನಗರದ ಪಕ್ಕದ ಮರಿಯಪ್ಪನ ಪಾಳ್ಯ. ಒಂಟೆ, ಪೀಟೆ, ವೇಸಿ, ಅನಾಲಿ, ಹಿಟ್ಟು ಇತ್ಯಾದಿ ಆತನ ಹಾರ್ಡ್‌ಕೋರ್ ಬಂಟರೆಲ್ಲರೂ ಅಲ್ಲಿನವರೇ. ಈ ಮರಿಯಪ್ಪನಪಾಳ್ಯ ರಾಜಾಜಿನಗರದ ಪ್ರಕಾಶ್‌ನಗರ ವಾರ್ಡಿಗೆ ಸೇರುತ್ತದೆ. ಇಲ್ಲಿ ಕಾಂಗ್ರೆಸ್ಸಿನ ಪದ್ಮಾವತಿ ವಿರುದ್ಧ ಬಿಜೆಪಿಗೆ ನಿಂತ ರವೀಂದ್ರ ಕೂಡ ಮಂತ್ರಿ ಕಟ್ಟಾ ಕುಲಬಾಂಧವನೇ. ಸ್ಥಳೀಯವಾಗಿ ಆತ ಅನಂತ್‌ಕುಮಾರ್ ಭಟ್ಟಂಗಿಯಾದರೂ ಜಾತಿಯಲ್ಲಿ ಕಮ್ಮಾನಾಯ್ಡು ಮತ್ತು ತನ್ನ ದೂರದ ಸಂಬಂಧಿ ಎಂಬ ಒಂದೇ ಕಾರಣಕ್ಕೆ ಆತನಿಗೆ ಬಿಜೆಪಿ ಟಿಕೆಟ್ ಕೊಡಿಸಿದ್ದು ಕಟ್ಟಾ ನಾಯ್ಡು. ಪ್ರಕಾಶ್‌ನಗರದಲ್ಲಿ ಹಿಂದಿನಿಂದಲೂ ಪದ್ಮಾವತಿಯ ಪ್ರಾಬಲ್ಯವಿದೆ. ಆಕೆಯ ವಿರುದ್ಧ ಶತಗತಾಯ



ಕಟ್ಟಾಜಗ್ಗ

ರವೀಂದ್ರನನ್ನು ಗೆಲ್ಲಿಸಬೇಕೆಂದರೆ ಅದಕ್ಕೆ ಸೈಲೆಂಟ್ ಸುನೀಲನೇ ಮನಸ್ಸು ಮಾಡಬೇಕು. ಇದನ್ನೆಲ್ಲ ಲೆಕ್ಕ ಹಾಕಿಯೇ ಕಟ್ಟಾ ಮಗ ಜಗ್ಗ ಗೆಡ್ಡಾ ನಾಗನನ್ನು ಕರೆಸಿದ್ದೇ ಸುನೀಲನ ಜೊತೆ ಡೀಲು ಕುದುರಿಸಿದ. ಏಕೆಂದರೆ ಗೆಡ್ಡಾನಾಗ ಕೂಡ ಒಂದಾನೊಂದು ಕಾಲಕ್ಕೆ ಇದೇ ಏರಿಯಾದಲ್ಲಿದ್ದ ಮತ್ತು ಆತನ ತಮ್ಮ ಕಿಟ್ಟಿ ಅಡ್ಡೆ ಹಾಕುತ್ತಿದ್ದದ್ದು ಇದೇ ಮರಿಯಪ್ಪನ ಪಾಳ್ಯದಲ್ಲಿ.

ಈಗ ಸಂಬಂಧಿ ರವೀಂದ್ರನನ್ನು ಗೆಲ್ಲಿಸಲು ಸುನೀಲನನ್ನು ಛೂಬಿಡದಿದ್ದರೆ ಹೇಗೆ? ಕಟ್ಟಾ ಮಗ ಜಗ್ಗನಿಂದ ವೀಳ್ಯ ಪಡೆದ ಸುನೀಲ ತನ್ನ ಹುಡುಗರನ್ನು ಕರೆಸಿ ರವೀಂದ್ರನ ಪರ ಅಖಾಡಕ್ಕಿಳಿಯುವಂತೆ ಹೇಳಿದ್ದೇ ತಡ, ಕಾಂಗ್ರೆಸ್ ಅಭ್ಯರ್ಥಿ ಪದ್ಮಾವತಿಗೆ ಎಂಥಾ ಕಾಟ ಶುರುವಾಯಿತೆಂದರೆ, ಆಕೆ ಓಟು ಕೇಳಲು ಮರಿಯಪ್ಪನ ಪಾಳ್ಯಕ್ಕೆ ಕಾಲಿಡುತ್ತಿದ್ದಂತೆ ಮುತ್ತಿಗೆ ಹಾಕಿದ ಸುನೀಲನ ಶಿಷ್ಯರು ಬಿಜೆಪಿಗೆ ಜೈಕಾರ ಹಾಕುತ್ತಿದ್ದರು. ಕೊನೆಕೊನೆಗೆ ರೋಸತ್ತ ಪದ್ಮಾವತಿ ಮರಿಯಪ್ಪನ ಪಾಳ್ಯದತ್ತ ತಲೆ ಹಾಕುವುದನ್ನೇ ಬಿಟ್ಟುಬಿಟ್ಟರು.

ಈಗ ಕೌನ್ಸಿಲರ್ ಆಗಿ ಗೆದ್ದಿರುವ ರವೀಂದ್ರ ಋಣಿಯಾಗಿರುವುದು ಕಟ್ಟಾ ಮಗ ಜಗ್ಗ ಮತ್ತು ಸುನೀಲನಿಗಷ್ಟೇ.

ಹಾಗೇ ಸುನೀಲನ ಶಿಷ್ಯರ ನೆರವನ್ನು ಪಡೆಕೊಂಡು ಈ ಸಲದ ಎಲೆಕ್ಷನ್ ಪೂರೈಸಿದ ಮತ್ತೊಬ್ಬ ಬಿಜೆಪಿ ಅಭ್ಯರ್ಥಿಯೆಂದರೆ ಆತ ವಿಜಯನಗರದ ಎಚ್. ರವೀಂದ್ರ. ಕೆಂಪಾಪುರ ಅಗ್ರಹಾರ ಮತ್ತು ಚೋಳೂರು ಪಾಳ್ಯದಲ್ಲಿ ಹುಟ್ಟಿಕೊಂಡ ಸುನೀಲನ ಶಿಷ್ಯರನ್ನು ತನ್ನ ಪರ ದುಡಿಸಿಕೊಳ್ಳಲು ರವೀಂದ್ರ ಚಿತ್ರದುರ್ಗ ಜೈಲಿಗೇ ಹೋಗಿ ಸುನೀಲನನ್ನು ಕಂಡು ಕಾಣಿಕೆ ಸಲ್ಲಿಸಿದನೆಂಬುದು ಎದುರಾಳಿ ಕಾಂಗ್ರೆಸ್ ಕಾರ್ಯಕರ್ತರ ಆರೋಪ.

ಎಲ್ಲೋ ಒಂದೆರಡು ವಾರ್ಡುಗಳ ಹೊರತಾಗಿ ಈ ಬಾರಿ ಇಡೀ ಸುನೀಲನ ಗ್ಯಾಂಗ್ ಬಿಜೆಪಿ ಪರ ಕಾರ್ಯಾಚರಣೆಗಿಳಿದಿದ್ದಂತೂ ವಾಸ್ತವ. ಮತ್ತು ಸುನೀಲನ ಬಿಜೆಪಿ ಸೇವೆಗೆ ಮಂತ್ರಿ ಕಟ್ಟಾ ಜಗ್ಗನೇ ಮೂಲಪುರುಷನೆಂಬುದು ಕೂಡ ಅಷ್ಟೇ ಸತ್ಯ. ಬೆಂಗಳೂರು ಪಾಲಿಕೆ ಹಿಡಿಯುವ ಬಿಜೆಪಿ ದುರಾಶೆಗೆ ರೌಡಿಯಾದರೇನು ಕೇಡಿಯಾದರೇನು?


• ರಾ. ಸೋಮನಾಥ್
ra.somanath2010@gmail.com

ಕತ್ರಿಗುಪ್ಪೆ ಲಿಂಗ ಮತ್ತು ಅಶೋಕ್ ಶಿಷ್ಯ ವಿಶ್ವ

ಬಿಜೆಪಿ ಪರ ಪಾಲಿಕೆ ಎಲೆಕ್ಷನ್ನಿಗಿಳಿದ ಸುನೀಲನ ಸಿಂಡಿಕೇಟಿನ ಮತ್ತೊಬ್ಬ ದೈತ್ಯನೆಂದರೆ ಆತ ಕತ್ರಿಗುಪ್ಪೆ ಲಿಂಗ!

ಆತನನ್ನು ಫೀಲ್ಡಿಗಿಳಿಸಿ ಎಲೆಕ್ಷನ್ ಗೆಲ್ಲುವ ಹರಕತ್ತಿಗೆ ಬಿದ್ದವನು ಹೊಸಕೆರೆಹಳ್ಳಿಯ ಬಿಜೆಪಿ ಅಭ್ಯರ್ಥಿ ನಾರಾಯಣ. ಈ ನಾರಾಯಣ ಹೇಳಿಕೇಳಿ ಪಕ್ಕಾ ಲ್ಯಾಂಡ್ ಗ್ರಾಬರ್. ಲಿಂಗನ ಕಡುವೈರಿಗಳಾದ ಸೈಕಲ್ ರವಿ ಮತ್ತು ಪರಂಧಾಮ ಸೇರಿಕೊಂಡು ಇಟ್ಟಮಡು ಬಾಬುವನ್ನು ಕೊಂದರಲ್ಲ; ಆ ಬಾಬುವಿಗೆ ಪರಮಾಪ್ತ ನಂತಿದ್ದವನು ಲಿಂಗ. ಈಗ ಕೊಲೆಯಾದ ಬಾಬು ತಮ್ಮ ವಿಶ್ವನೇ ಲಿಂಗನಿಗೆ ಅನ್ನದಾತ. ವಿಶ್ವ ಮಂತ್ರಿ ಅಶೋಕ್‌ನ ಚೇಲಾ ಬೇರೆ. ಹೇಗಾದರೂ ಮಾಡಿ ಬಿಜೆಪಿ ಅಭ್ಯರ್ಥಿ ನಾರಾಯಣನನ್ನು ಗೆಲ್ಲಿಸಲು ಅಖಾಡಕ್ಕಿಳಿದ ವಿಶ್ವ ತನ್ನ ಆಯುಧವಾಗಿ ಬಳಸಿದ್ದು ಲಿಂಗನನ್ನು.

ಏಕೆಂದರೆ ನಾರಾಯಣನ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾದ ಕೆಂಪೇಗೌಡ ಜನಪ್ರಿಯ ವ್ಯಕ್ತಿ. ಕಳಂಕವಿಲ್ಲ, ಬೆನ್ನಿಗೆ ರೌಡಿಗಳಿಲ್ಲ, ಇಂಥ ಕೆಂಪೇಗೌಡನನ್ನು ಸೋಲಿಸಿ ನೆಲಗಳ್ಳ ನಾರಾಯಣನನ್ನು ಗೆಲ್ಲಿಸಲು ಬಿಜೆಪಿ ಲಿಂಗನಂಥ ಭೂಗತ ಆಸಾಮಿಯ ಮೊರೆ ಹೊಕ್ಕಿತ್ತು. ವಿಕಟವೆಂದರೆ ಚನ್ನಮ್ಮನಕೆರೆ ಅಚ್ಚುಕಟ್ಟು ಇನ್ಸ್‌ಪೆಕ್ಟರ್ ನಾಯಕ್ ಲಿಂಗನಗುರು ವಿಶ್ವನನ್ನು ಕಂಡಿದ್ದೇ ಎದ್ದು ನಿಂತು ಸೆಲ್ಯೂಟ್ ಹೊಡೆಯುತ್ತಾರೆ. ಲಿಂಗನನ್ನು ಕಂಡೂಕಾಣದಂತೆ ನಟಿಸುವ ಪೊಲೀಸರಿಗೆ ಮಂತ್ರಿ ಅಶೋಕ್ ಬೇರೆ ವಿಶ್ವನ ಪರ ಗುಪ್ತ ಆದೇಶ ಜಾರಿಗೊಳಿಸಿದ್ದರಂತೆ.




▶▶ ಕಾರ್ಟೂನ್ ಕಾರ್ನರ್



ಗೌನು ಕಳಚಿಟ್ಟರೆ ಸಾಕೇ?

ಕೇವಲ ಗೌನು ಬಿಚ್ಚಿಡುವುದರಿಂದ ಸ್ವಾತಂತ್ರ್ಯ, ಸ್ವಾಯತ್ತತೆ, ಸ್ವಾಭಿಮಾನ, ಸಾರ್ವಭೌಮತೆಗಳು ಬಂದುಬಿಡುತ್ತವೆ ಎಂದು ಕೇಂದ್ರ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಜಯರಾಮ್ ರಮೇಶ್ ಅಂದುಕೊಂಡಿದ್ದರೆ ಅವರಂಥ ಮೂರ್ಖರು ಮತ್ತೊಬ್ಬರಿಲ್ಲ ಅನ್ನಿಸುತ್ತದೆ. ಗೌನು ತೆಗೆದಿಟ್ಟಿರುವುದು ಒಂದು ಸ್ವಾಗತಾರ್ಹ ಕೆಲಸವೇ ಆದರೂ ಅದಕ್ಕಿಂತಲೂ ಜರೂರತ್ತಾಗಿ ಮಾಡಬೇಕಿರುವ ಇನ್ನೂ ಬೇಕಾದಷ್ಟು ಕೆಲಸಗಳೂ ಇವೆ.



ಮೊನ್ನೆ ಭೂಪಾಲ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರೆಸ್ಟ್ ಮ್ಯಾನೇಜ್‌ಮೆಂಟ್‌ನ ಕಾನ್ವಕೇಷನ್ ಸಮಾರಂಭದಲ್ಲಿ ನಮ್ಮ ಕೇಂದ್ರ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಜೈರಾಮ್ ರಮೇಶ್ ಮಾತನಾಡುತ್ತಾ 'ಗೌನು ಧರಿಸುವುದು ಬರ್ಬರ ವಸಾಹತುಶಾಹಿಯ ಪಳೆಯುಳಿಕೆ' ಎಂದು ಗುಡುಗಿದ್ದಾರೆ. 'ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ನಾವಿನ್ನೂ ಯಾಕೆ ಆ ವಸಾಹತುಶಾಹಿ ಬರ್ಬರ ಪಳೆಯುಳಿಕೆಗೆ ಅಂಟಿಕೊಂಡಿದ್ದೇವೆ ಎಂಬುದೇ ಅರ್ಥವಾಗುತ್ತಿಲ್ಲ' ಎಂದು ಸೋಜಿಗ ವ್ಯಕ್ತಪಡಿಸಿದ್ದಾರೆ. ಮಾತ್ರವಲ್ಲ, ತುಂಬಿದ ಸಮಾರಂಭದಲ್ಲೇ ತಮ್ಮ ಗೌನನ್ನು ಕಳಚಿಡುವ ಮೂಲಕ ಈ ವಸಾಹತು ಪರಂಪರೆಗೆ ಇತಿಶ್ರೀ ಹಾಡುವ ಆಂದೋಲನಕ್ಕೆ ಮುನ್ನುಡಿ ಬರೆದಿದ್ದಾರೆ.



ಇವೆಲ್ಲವೂ ಕೇಳಬೇಕಾದ ಪ್ರಶ್ನೆಗಳೇ. ತುಂಬಿದ ಸಭೆಯಲ್ಲೇ ಗೌನು ಕಳಚಿಟ್ಟು ವಸಾಹತು ಪರಂಪರೆಯನ್ನು ನಿಲ್ಲಿಸುವುದಕ್ಕೆ ನಾಂದಿ ಹಾಡಿದ್ದೂ ಮೆಚ್ಚಬೇಕಾದದ್ದೆ. ಆದರೆ ಕತೆಯನ್ನು ಅಷ್ಟಕ್ಕೆ ನಿಲ್ಲಿಸಿಬಿಟ್ಟರೆ ಹೇಗೆ? ನಮ್ಮಲ್ಲಿ ಗೌನು ಮಾತ್ರವೇ ವಸಾಹತುಶಾಹಿಯ ಪರಂಪರೆಯ ಉಳಿಕೆಯಾಗಿದೆಯೇ? ಹಾದಿಬೀದಿಯಲ್ಲಿ ಎಲ್ಲಿ ತಲೆಯೆತ್ತಿದರೂ ಬ್ಯಾಟನ್, ಕರ್ಜನ್, ಎಲಿಜಬೆತ್ ಮೂರ್ತಿಗಳು ರಾರಾಜಿಸುತ್ತಿವೆ. ಕಬ್ಬನ್ ಪಾರ್ಕು, ಬೋರಿಂಗ್ ಹಾಸ್ಪಿಟಲ್, ರಿಚ್ಮಂಡ್ ಸರ್ಕಲ್, ರಿಪ್ಪನ್ ಪೇಟೆ, ಕನ್ನಿಂಗ್‌ಹ್ಯಾಮ್ ರೋಡ್, ಮೆಯೋಹಾಲ್, ಬೆಂಟಿಂಕ್ ರೋಡ್, ಮಿಂಟೋ ಹಾಸ್ಪಿಟಲ್ ಅಂತ ಅವೇ ಬ್ರಿಟಿಷ್ ವಸಾಹತುಶಾಹಿಗಳ ಹೆಸರುಗಳನ್ನೇ ಉಳಿಸಿಕೊಂಡಿದ್ದೇವೆ. ಇವೆಲ್ಲವೂ ಹೇಗೆ ಬ್ರಿಟಿಷರು ಭಾರತವನ್ನು ಮುನ್ನೂರು ವರ್ಷಗಳ ಕಾಲ ತಮ್ಮ ಉಕ್ಕಿನ ಪಾದಗಳಡಿಯಲ್ಲಿ ಹಿಂಡಿದರು ಎಂಬುದನ್ನು ದಿನನಿತ್ಯವೂ ನೆನಪಿಸಿ ಚುಚ್ಚುತ್ತಿದ್ದರೂ ಬಹಳ ಆನಂದದಿಂದ ಚುಚ್ಚಿಸಿಕೊಳ್ಳುತ್ತಿದ್ದೇವೆ. ಬ್ರಿಟಿಷ್ ವಸಾಹತುಶಾಹಿಗಳನ್ನು ಇಲ್ಲಿಂದ ಒದ್ದೋಡಿಸಿ ಅರವತ್ತು ವರ್ಷ ಕಳೆದರೂ ಅವುಗಳನ್ನು ಬದಲಾಯಿಸುವ ಗೋಜಿಗೆ ಯಾಕೆ ಹೋಗಿಲ್ಲ?

1957ರಲ್ಲೇ, ಅಂದರೆ ಸ್ವಾತಂತ್ರ್ಯ ಸಿಕ್ಕ ಸರಿಯಾಗಿ ಹತ್ತು ವರ್ಷಕ್ಕೆ, ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಜವಾಹರಲಾಲ್ ನೆಹರೂ 'ಎಲ್ಲಾ ಸಾರ್ವಜನಿಕ ಸ್ಥಳಗಳಿಂದ ಬ್ರಿಟಿಷರ ಮೂರ್ತಿಗಳನ್ನು ತೆರವುಗೊಳಿಸಲಾಗುವುದು' ಎಂದು ಘೋಷಿಸಿದ್ದರು. ಅದಾಗಿಯೂ ಐವತ್ತು ವರ್ಷ ಕಳೆಯಿತು. ಬ್ರಿಟಿಷರ ಮೂರ್ತಿಗಳು, ಸಾರ್ವಜನಿಕ ಸ್ಥಳಗಳಿಗೆ ಇಟ್ಟಿರುವ ಅವರ ಹೆಸರುಗಳು ಮಾತ್ರ ಹಾಗೇ ಉಳಿದುಕೊಂಡಿವೆ. 1970ರ ದಶಕದ ಕೊನೆಯ ಭಾಗದಲ್ಲಿ ಪಶ್ಚಿಮ ಬಂಗಾಳದ ಕಮ್ಯೂನಿಸ್ಟ್ ನೇತೃತ್ವದ ಮೈತ್ರಿ ಸರ್ಕಾರ ಕೂಡ ಕೊಲ್ಕತ್ತಾದಲ್ಲಿದ್ದ ಎಲ್ಲಾ ಬ್ರಿಟಿಷ್ ಲಾರ್ಡ್‌ಗಳ, ವೈಸ್‌ರಾಯ್‌ಗಳ, ರಾಣಿಯ, ಸ್ಟೇಟ್ಸ್‌ಮನ್‌ಗಳ, ನೋಬಲ್‌ಮನ್‌ಗಳ ಮೂರ್ತಿಗಳನ್ನು ತೆರವುಗೊಳಿಸುವ ನಿರ್ಧಾರ ತೆಗೆದುಕೊಂಡಿತ್ತು, ಅಂತೆಯೇ ಅವುಗಳನ್ನೆಲ್ಲಾ ತೆರವುಗೊಳಿಸಿ ಬ್ರಿಟಿಷ್ ರಾಣಿಯ ಹೆಸರಿನಲ್ಲಿದ್ದ ವಿಕ್ಟೋರಿಯ ಮೆಮೋರಿಯಲ್‌ನಲ್ಲಿಡಲಾಯಿತು. ಈ ಮೂರ್ತಿಗಳಿದ್ದ ಜಾಗದಲ್ಲಿ ಸುಭಾಷ್‌ಚಂದ್ರ ಭೋಸ್, ಮಹಾತ್ಮಾ ಗಾಂಧಿ, ಜವಾಹರಲಾಲ್ ನೆಹರೂ, ಅಂಬೇಡ್ಕರ್ ಮುಂತಾದ ರಾಷ್ಟ್ರೀಯ ನಾಯಕರ ಶಿಲಾಮೂರ್ತಿಗಳನ್ನು ಪ್ರತಿಷ್ಠಾಪಿಸುವುದಕ್ಕೂ ಸರ್ಕಾರ ಯೋಚಿಸಿತ್ತು, ಆದಾದ ಇಪ್ಪತ್ತು ವರ್ಷಗಳ ನಂತರ ಅದೇ ಕಮ್ಯೂನಿಸ್ಟ್ ಸರ್ಕಾರ ವಿಕ್ಟೋರಿಯ ಮೆಮೋರಿಯಲ್‌ನಲ್ಲಿ ಧೂಳು ತಿನ್ನುತ್ತಿದ್ದ ಬ್ರಿಟಿಷ್ ಮಹನೀಯರ ಎಲ್ಲಾ ಮೂರ್ತಿಗಳನ್ನು ಅವುಗಳ ಮೂಲ ಜಾಗದಲ್ಲಿ ಪ್ರತಿಷ್ಠಾಪಿಸುವ ತೀರ್ಮಾನ ತೆಗೆದುಕೊಂಡಿತು! ಇದಕ್ಕೇನೆನ್ನಬೇಕು?

ನಮ್ಮ ಸ್ಥಳಗಳ ಹೆಸರುಗಳಿಗೆ ಅನುಗುಣವಾಗಿ ತಮ್ಮ ನಾಲಿಗೆ ತಿರುಗಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳುವ ತೊಂದರೆ ತೆಗೆದುಕೊಳ್ಳದ ಬ್ರಿಟಿಷರು ನಮ್ಮ ಹೆಸರುಗಳನ್ನೇ ತಮ್ಮ ನಾಲಿಗೆಗನುಗುಣವಾಗಿ ಬದಲಿಸಿಬಿಟ್ಟಿದ್ದರು. ಮಡಿಕೇರಿಯು ಮರ್ಕೆರಾ ಆಗಿದ್ದು, ಉತ್ತರ-ದಕ್ಷಿಣ ಕನ್ನಡಗಳು ನಾರ್ಥ್-ಸೌತ್ ಕೆನರಾಗಳಾಗಿದ್ದು, ಬೆಂಗಳೂರು ಬ್ಯಾಂಗ್ಲೋರ್ ಆಗಿದ್ದು, ಕೋಳಿಕೋಡ್ ಕ್ಯಾಲಿಕಟ್ ಆಗಿದ್ದು, ಕಣ್ಣೂರು ಕ್ಯಾನನೂರ್ ಆಗಿದ್ದು, ತಿರುವನಂತಪುರ ತ್ರಿವೆಂಡ್ರಮ್ ಆಗಿದ್ದು, ಕೊಡಗು ಕೂರ್ಗ್ ಆಗಿದ್ದು, ಹೀಗೆ ಉದ್ದನೆಯ ಪಟ್ಟಿಯನ್ನೇ ಕೊಡಬಹುದು. ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ಕುರಿತ ಜಾಗೃತಿ ಮೂಡುತ್ತಿರುವುದರಿಂದ ನಮ್ಮ ಸರ್ಕಾರಗಳೂ ಬ್ರಿಟಿಷ್ ಹ್ಯಾಂಗೋವರ್‌ನಿಂದ ಹೊರಬರಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿಯೇ ಬ್ರಿಟಿಷರ ನಾಲಿಗೆಗೆ ಸಿಕ್ಕು 'ಬಾಂಬೆ'ಯಾಗಿದ್ದ ನಗರ 'ಮುಂಬೈ' ಎಂಬ ಮೂಲ ಹೆಸರನ್ನು ಪಡೆದುಕೊಂಡಿದೆ. ಅಂತೆಯೇ ಕ್ಯಾಲ್ಕಟಾ ಮತ್ತೆ ಕೋಲ್ಕೋತ ಆಗಿದೆ. ಮದ್ರಾಸ್ ಚೆನ್ನೈ ಆಗಿದೆ. ಬ್ಯಾಂಗ್ಲೋರ್ ಬೆಂಗಳೂರು ಆಗಿದೆ. ವಿಕ್ಟೋರಿಯಾ ಟರ್ಮಿನಸ್ ಛತ್ರಪತಿ ಶಿವಾಜಿ ಟರ್ಮಿನಸ್ ಆಗಿದೆ. ಆಗಬೇಕಾದದ್ದು ಇನ್ನೂ ಬಹಳ ಇದೆ.

ಇದು ಒಂದು ಮುಖ. ಇನ್ನೊಂದು ಮುಖವನ್ನೂ ನೋಡಿ. ಒಂದೆಡೆ ಬ್ರಿಟಿಷ್ ವಸಾಹತುಶಾಹಿಗಳ ಸಂಕೇತಗಳಂತಿರುವ ಮೂರ್ತಿಗಳನ್ನು, ಹೆಸರುಗಳನ್ನು ಅಳಿಸುತ್ತಲೇ ಇನ್ನೊಂದೆಡೆ ಬ್ರಿಟಿಷರಿಗೆ ರತ್ನಗಂಬಳಿ ಹಾಸುವ ಪ್ರಕ್ರಿಯೆಯೂ ನಡೆಯುತ್ತಿದೆ. ನಿಮಗೆ ನೆನಪಿರಬೇಕು, ಈಗ್ಗೆ ಆರೆಂಟು ವರ್ಷಗಳ ಹಿಂದೆ ಇಂಗ್ಲೆಂಡಿನ ರಾಣಿ ಭಾರತಕ್ಕೆ ಬಂದಾಗ ನಮ್ಮನ್ನಾಳುವವರು ನಡೆದುಕೊಂಡ ರೀತಿ ನಿಜಕ್ಕೂ ಅಸಹ್ಯ ಹುಟ್ಟಿಸುವಂತಿತ್ತು, ಪಂಜಾಬ್‌ನ ಅಮೃತಸರದಲ್ಲಿರುವ 'ಸ್ವರ್ಣಮಂದಿರ'ಕ್ಕೆ ಹೋಗಬೇಕೆಂದರೆ ಕಡ್ಡಾಯವಾಗಿ ಪಾದರಕ್ಷೆಗಳನ್ನು ಹೊರಗೆ ಬಿಟ್ಟೇ ಹೋಗಬೇಕು. ಕನಿಷ್ಠ ಸಾಕ್ಸ್ ಕೂಡ ಹಾಕುವಂತಿಲ್ಲ. ಯಾವುದೋ ಕೊಳಚೆ ಪ್ರದೇಶದಲ್ಲಿ ಬದುಕುತ್ತಿರೋ ಬೊಮ್ಮನೇ ಆಗಿರಲಿ, ಈ ದೇಶದ ಪ್ರಧಾನಿಯಾಗಿರುವ ಮನಮೋಹನ್ ಸಿಂಗ್‌ನೇ ಆಗಿರಲಿ, ಈ ನಿಯಮ ಕಡ್ಡಾಯ. ಆದರೆ ಇಂಗ್ಲೆಂಡಿನ ರಾಣಿ ಭಾರತಕ್ಕೆ ಬಂದಾಗ ಆಕೆಗೆ ಸಾಕ್ಸ್ ಹಾಕಿಕೊಂಡು ಹೋಗುವುದಕ್ಕೆ ಅವಕಾಶ ಕೊಡಲಾಯಿತು. ವಿಶೇಷ ಎಂದರೆ ನಮ್ಮ ಪ್ರಧಾನಿ ಮತ್ತು ರಾಷ್ಟ್ರಪತಿಗಳೇ ಬರಿಗಾಲಲ್ಲಿ ಹೋದರೆ ಬ್ರಿಟನ್ ರಾಣಿಗೆ ಈ ರೀತಿಯ ಆತಿಥ್ಯ ನೀಡಲಾಗಿತ್ತು.


ಇವೆಲ್ಲವುಗಳನ್ನು ಬದಿಗಿಡೋಣ. ಅಸಲಿಗೆ ಕೇವಲ ಗೌನು ಕಳಚುವುದರಿಂದ, ಮೂರ್ತಿ ಕೆಡವುದರಿಂದ, ಹೆಸರು ಬದಲಾಯಿಸುವುದರಿಂದ ಅಥವಾ ರಾಣಿಗೆ ಸಾಕ್ಸ್ ಕಳಚಿಟ್ಟು ಬರಿಗಾಲಲ್ಲಿ ಸ್ವರ್ಣಮಂದಿರದೊಳಗೆ ಹೋಗುವಂತೆ ಮಾಡುವುದರಿಂದ ಏನೂ ಕ್ರಾಂತಿಕಾರಕ ಬದಲಾವಣೆಗಳಾಗುವುದಿಲ್ಲ, ಹೆಚ್ಚೆಂದರೆ, ನಮ್ಮ ಸ್ವಾತಂತ್ರ್ಯವನ್ನು, ಸ್ವಾಭಿಮಾನವನ್ನು ಇನ್ನಷ್ಟು ಜಾಗೃತಗೊಳಿಸುವುದಕ್ಕೆ, ಚರಿತ್ರೆಯನ್ನು ಅರಿತು ವರ್ತಮಾನದಲ್ಲಿ ಜಾಗರೂಕರಾಗಿರುವುದಕ್ಕೆ ಅನುಕೂಲ ಮಾಡಿಕೊಡುತ್ತವೆಯಷ್ಟೆ. ನಿಜವಾದ ಸ್ವಾತಂತ್ರ್ಯ ಹಾಗೂ ಸ್ವಾಭಿಮಾನವನ್ನು ಗಳಿಸುವ ಪರಿ ಇದಲ್ಲ. ಬಾಂಬೆಯನ್ನು ಮುಂಬೈ ಮಾಡಿದ ಸರ್ಕಾರವೇ, ಕ್ಯಾಲ್ಕಟಾವನ್ನು ಮತ್ತೆ ಕೋಲ್ಕತಾ ಮಾಡಿದ ಸರ್ಕಾರವೇ, ಬ್ಯಾಂಗ್ಲೋರ್ ಅನ್ನು ಬೆಂಗಳೂರು ಮಾಡಿದ ಸರ್ಕಾರಗಳೇ,



kumarburadikatti@gmail.com

ಸುತ್ತ-ಮುತ್ತ

ಕುಮಾರ್ ಬುರಡಿಕಟ್ಟಿ



ತಮಾಷೆಗೆ ಒಂದು ಮಿತಿ ಬೇಡವೇ?

ಮೊನ್ನೆಯ ಏಪ್ರಿಲ್ ಒಂದನ್ನು ಹಲವರು ಹಲವು ರೀತಿಯಲ್ಲಿ ಆಚರಿಸಿದರು. ನಮ್ಮಲ್ಲೂ ಒಂದು ಕನ್ನಡ ದಿನಪತ್ರಿಕೆ ಬಿಬಿಎಂಪಿ ಎಲೆಕ್ಷನ್‌ನಲ್ಲಿ ಬಳಸಲಾದ ಎಲೆಕ್ಟ್ರಾನಿಕ್ ಓಟಿಂಗ್ ಮಷೀನ್‌ಗಳ ಬ್ಯಾಟರಿ ಸೋರಿಕೆಯಾಗಿ, ಅದರ ಮೆಮೊರಿ ಚಿಪ್ ಮೇಲೆ ಸುರಿದು ಡಾಟಾ ಹಾಳಾಗಿದೆಯೆಂದೂ, ಇದರಿಂದ ಹೊಸದಾಗಿ ಚುನಾವಣೆ ನಡೆಸಬೇಕಾದ ಪರಿಸ್ಥಿತಿ ಎದುರಾಗಬಹುದುದೆಂದೂ ಪ್ರಕಟಿಸಿಬಿಟ್ಟಿತ್ತು, ಜನ ಅದನ್ನು ಓದಿ ಎಷ್ಟು ಮೂರ್ಖರಾದರೋ, ಎಷ್ಟು ಖುಷಿಪಟ್ಟರೋ ಗೊತ್ತಿಲ್ಲ, ಪತ್ರಿಕೆಯಂತೂ ಪ್ರಾಯಶಃ ಯಾರೂ ಮಾಡಿರದಂತಹ ವಿಶೇಷ ಕೆಲಸ ಮಾಡಿದ್ದೇನೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡಿರಲಿಕ್ಕೂ ಸಾಕು. ಅದೇ ಸುದ್ದಿಯ ಕೊನೆಯಲ್ಲಿ ಇದು ಸುಳ್ಳು ಸುದ್ದಿಯೆಂದೂ, ಏಪ್ರಿಲ್ ಫೂಲ್ ಎಂದೂ ಪ್ರಕಟಿಸಿದ್ದರಿಂದ ಈ ಸುದ್ದಿಯಿಂದ ಅಷ್ಟೇನೂ ಅವಘಡಗಳು ಸಂಭವಿಸಲಿಲ್ಲ, ಒಂದು ಮಿತಿಯಲ್ಲೇ ತಮಾಷೆ ನಡೆಯಿತೆಂದು ಹೇಳಬಹುದು.

ಅದೇ ದಿನ ಕೆಲವೆಡೆ ಮಿತಿಮೀರಿದ ತಮಾಷೆಗಳೂ ನಡೆದಿವೆ. ಜವಾಬ್ದಾರಿಯಿಲ್ಲದ ಜನ ಮಾಡಿದ ಇಂತಹ ಬೇಜವಾಬ್ದಾರಿ ಹಾಗೂ ಮಿತಿಮೀರಿದ ತಮಾಷೆಗಳು ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸಿದ್ದೂ ಅಲ್ಲದೇ ಜನರಲ್ಲಿ ಭಯ, ಭೀತಿ, ಆತಂಕಗಳನ್ನೂ ಸೃಷ್ಟಿಸಿದ್ದವು. ಒಂದು ಉದಾಹರಣೆಯನ್ನು ನೋಡಿ.

ಜೋರ್ಡಾನಿನ ಪ್ರಸಿದ್ಧ ಪತ್ರಿಕೆಯಾದ ಅಲ್ ಫಡ್ ತನ್ನ ದೇಶದ ಜನರಿಗೆ ಏಪ್ರಿಲ್ ಫೂಲ್ ಮಾಡುವುದಕ್ಕಾಗಿ ಒಂದು ವಿಶೇಷ ಸುದ್ದಿಯನ್ನು ಮುಖಪುಟದಲ್ಲೇ ಏಪ್ರಿಲ್ ಒಂದರಂದು ಪ್ರಕಟಿಸಿತು. ಆ ಸುದ್ದಿಯ ಸಾರಾಂಶ ಹೀಗಿತ್ತು: "ಬಾಹ್ಯಾಕಾಶದಿಂದ ಹತ್ತು ಅಡಿ ಎತ್ತರದ ಅನ್ಯಗ್ರಹಜೀವಿಗಳು (aliens) ಹಾರುವ ತಟ್ಟೆಗಳಲ್ಲಿ ಭೂಮಿಗೆ ಬಂದಿವೆ. ಅದರಲ್ಲೂ ಅವು ಜೋರ್ಡಾನಿನ ರಾಜಧಾನಿಯಾದ ಅಮ್ಮಾನ್‌ನಿಂದ 300 ಕಿ.ಮೀ. ದೂರದಲ್ಲಿರುವ ಜಫ್ರ್ ಎಂಬ ಮರುಭೂಮಿ ಪಟ್ಟಣದ ಹತ್ತಿರವೇ ಇಳಿದಿವೆ. ಮಾರ್ಚ್ 31ರ ತಡರಾತ್ರಿಯಲ್ಲಿ ಇಡೀ ನಗರಕ್ಕೆ ಬೆಂಕಿ ಹಚ್ಚಿ ಇಡೀ ಕಮ್ಯೂನಿಕೇಶನ್ ವ್ಯವಸ್ಥೆಯನ್ನೇ ಬುಡಮೇಲು ಮಾಡಿವೆ. ಆ ಪಟ್ಟಣದಲ್ಲಿ ಎಲ್ಲೆಲ್ಲೂ ಬೆಂಕಿ ಹೊತ್ತಿ ಉರಿಯುತ್ತಿದ್ದು, ಜನರು ಭಯಭೀತರಾಗಿ ಕಿರುಚಾಡುತ್ತಾ ದಿಕ್ಕೆಟ್ಟು ಓಡಿಹೋಗುತ್ತಿದ್ದ ದೃಶ್ಯ ಕಾಣುತ್ತಿತ್ತು. ಬ್ಲ... ಬ್ಲ... ಬ್ಲ...."

ಇದು ಎಂಥ ಬೇಜವಾಬ್ದಾರಿಯುತ ಜರ್ನಲಿಸಂ ಅಂದರೆ ಈ ಸುದ್ದಿಯ ಕೊನೆಯಲ್ಲಾದರೂ ಇದು ಏಪ್ರಿಲ್ ಫೂಲ್ ಅಂತ ಹೇಳಿರಲಿಲ್ಲ, ಮೊದಲೇ ಜನ ಈ ರೀತಿಯ ಸುದ್ದಿ ಕೇಳಿದರೆ ಬೆಚ್ಚಿಬೀಳುತ್ತಾರೆ. 'Independence Day'ದಂತಹ ಸಿನಿಮಾಗಳಿಂದಾಗಿ ಇದು ನಿಜವಿರಬಹುದೆಂಬ ನಂಬಿಕೆಯನ್ನು ಹುಟ್ಟಿಸಿವೆ. ಈಗ ನಿಜಕ್ಕೂ ಬೇರೆ ಗ್ರಹಗಳಿಂದ ಚಿತ್ರವಿಚಿತ್ರ ಜೀವಿಗಳು ಭೂಮಿಗೆ ಲಗ್ಗೆಯಿಟ್ಟಿದ್ದಾರೆ ಎಂಬ ಸುದ್ದಿ ಬಿತ್ತರಗೊಂಡರೆ, ಅದರಲ್ಲೂ ಜೋರ್ಡಾನ್ ದೇಶದ ಪ್ರಸಿದ್ಧ ಪತ್ರಿಕೆಯಾದ ಅಲ್ ಫಡ್‌ನಲ್ಲೇ ಆ ಸುದ್ದಿ ಪ್ರಕಟವಾಗಿದೆ ಎಂದರೆ ನಂಬದಿರುತ್ತಾರೆಯೆ? ಏನೇನು ಅವಘಡಗಳು ಸಂಭವಿಸಬೇಕಿತ್ತೋ ಅವೆಲ್ಲಾ ಸಂಭವಿಸಿದವು.

ಬೆಳ್ಳಂಬೆಳಗ್ಗೆ ಸುದ್ದಿ ಓದಿದ ಜನ ಬೆಚ್ಚಿಬಿದ್ದು ಕಂಗಾಲಾದರು. ಶಾಲಾಮಕ್ಕಳು ಶಾಲೆಗೆ ಹೋಗಲಿಲ್ಲ. ತಂದೆತಾಯಿಗಳು ಮಕ್ಕಳನ್ನು ಹೊರಗೆ ಕಳಿಸುವುದಕ್ಕೆ ಹೆದರಿದರು. ಏನಾಗುತ್ತೋ ಏನೋ ಎಂಬ ಭಯ. ಜಫ್ರ್ ನಗರದ ಮೇಯರ್ ಮೊಹ್ಮದ್ ಮ್ಲೇಯ್ಯಾನ್ ಅವರು ಸುದ್ದಿ ತಿಳಿದಾಕ್ಷಣವೇ ಭದ್ರತಾ ಇಲಾಖೆಯನ್ನು ಸಂಪರ್ಕಿಸಿ 'ಅನ್ಯಗ್ರಹ ಜೀವಿಗಳನ್ನು' ಹುಡುಕಿ ಬಂಧಿಸುವುದಕ್ಕೆ ಪೋಲೀಸರನ್ನು ಕಳಿಸಿಕೊಟ್ಟರು! ಅಷ್ಟೇಅಲ್ಲ, ಕೂಡಲೇ ಕಾರ್ಯಪ್ರವೃತ್ತರಾದ ಈ ಮೇಯರ್ ನಗರದ 13 ಸಾವಿರ ಜನರನ್ನು ಬೇರೆಕಡೆ ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಿದರು. ಇನ್ನೊಂದೆಡೆ ಜೋರ್ಡಾನ್‌ನ ಅತ್ಯುನ್ನತ ಭದ್ರತಾ ಅಧಿಕಾರಿಗಳು ತುರ್ತು ಸಭೆ ಸೇರಿ 'ಅನ್ಯಗ್ರಹ ಜೀವಿ'ಗಳನ್ನು ಮಟ್ಟ ಹಾಕುವುದಕ್ಕೆ ಕಾರ್ಯಾಚರಣೆಗಳನ್ನು ರೂಪಿಸಲಾರಂಭಿಸಿದರು.



ಆಮೇಲೆ ಗೊತ್ತಾಯಿತು ಈ ಸುದ್ದಿ ಸಂಪೂರ್ಣ ಸುಳ್ಳೆಂದು. ಅಲ್ ಫಡ್ ಪತ್ರಿಕೆಯ ಸಂಪಾದಕ ಮೌಸಾ ಬಹರೊಮೆಹ್ ಅವರು 'ಜನರಿಗೆ ಮನರಂಜನೆ ಕೊಡಬೇಕೆಂದುಕೊಂಡಿದ್ದೇವೇ ಹೊರತು ಅವರನ್ನು ಹೆದರಿಸಬೇಕೆಂದುಕೊಂಡಿರಲಿಲ್ಲ, ಪರಿಸ್ಥಿತಿ ನಮ್ಮ ಕೈಮೀರಿ ಹೋಯಿತು. ಕ್ಷಮಿಸಿ' ಅಂತ ಹೇಳಿ ಜಾರಿಕೊಂಡ. ಹೇಗೂ ಕ್ಷಮೆ ಕೇಳಿದ್ದಾನಲ್ಲ, ಹೋಗಲಿ ಬಿಡಿ ಅಂತ ಸರ್ಕಾರವೂ, ಅಧಿಕಾರಿಗಳೂ ಸುಮ್ಮನಾದರು. ಬೇಜವಾಬ್ದಾರಿ ಪತ್ರಿಕೋದ್ಯಮದ ಮೂಲಕ ಇಡೀ ದೇಶವನ್ನೇ ತಲ್ಲಣಗೊಳಿಸಿದ ಆತನನ್ನು ಹಿಡಿದು ಜೈಲಿಗಟ್ಟಿದ್ದರೆ ಉಳಿದವರೂ ಒಂದಿಷ್ಟು ಪಾಠ ಕಲಿಯುತ್ತಿದ್ದರು.

ಈ ಹಿಂದೆ ಅಮೆರಿಕದಲ್ಲೂ ಹೀಗೇ ಆಗಿತ್ತು. 1930ರ ದಶಕದಲ್ಲಿ ಅಮೆರಿಕದಲ್ಲಿ ಸುಪ್ರಸಿದ್ಧವಾಗಿದ್ದ ಆರ್ಸನ್ ವೆಲ್ಸ್ ಎಂಬ ನಟ ಮತ್ತು ನಿರ್ದೇಶಕನ ರೇಡಿಯೋ ನಾಟಕಗಳನ್ನು ಕೇಳಲು ಕೋಟ್ಯಂತರ ಅಮೆರಿಕನ್ನರು ರೇಡಿಯೋ ಎದುರು ಕುಳಿತುಕೊಳ್ಳುತ್ತಿದ್ದರು. ಹಾಗೆಯೇ ಅಕ್ಟೋಬರ್ 30, 1938ರ ಸಂಜೆ ಆತನ ಕಾರ್ಯಕ್ರಮ ಕೇಳಲು ಕುಳಿತಿದ್ದರು. ಆ ದಿನ ವೆಲ್ಸ್ The War of the Worlds ಎಂಬ ವಿಜ್ಞಾನವನ್ನಾಧರಿಸಿದ ಕಾಲ್ಪನಿಕ ಕಾದಂಬರಿಯನ್ನು ನಾಟಕವಾಗಿ ರೂಪಾಂತರಿಸಿ ಬಿತ್ತರಿಸಿದರು. ಮಂಗಳ ಗ್ರಹದಿಂದ ಚಿತ್ರವಿಚಿತ್ರ ಜೀವಿಗಳು ಭೂಮಿಯ ಮೇಲೆ ಆಕ್ರಮಣ ಮಾಡುವುದು ಹಾಗೂ ಅದ ರಿಂದ ಇಲ್ಲಿನ ಮನುಷ್ಯರು ಕಷ್ಟಕಾರ್ಪಣ್ಯಗಳನ್ನು ಅನುಭವಿಸುವುದು ಸಾವುನೋವುಗಳು ಉಂಟಾಗುವುದು ಮುಂತಾದವುಗಳನ್ನು ಈ ಕತೆ ಚಿತ್ರಿಸುತ್ತದೆ. ಯಾವ ಕಾರ್ಯಕ್ರಮ ಬಿತ್ತರವಾಗುತ್ತ ಎಂಬುದಾಗಲೀ, ಈ ನಿರ್ದಿಷ್ಟ ಕತೆಯ ಬಗ್ಗೆಯಾಗಲೀ ಕೇಳುಗರಿಗೆ ಏನೂ ಗೊತ್ತಿರಲಿಲ್ಲ, ಸುಮ್ಮನೇ ಆರ್ಸನ್ ವೆಲ್ಸ್ ಕಾರ್ಯ ಕ್ರಮಕ್ಕಾಗಿ ಕಾದಿದ್ದರಷ್ಟೆ. ಆರ್ಸನ್ ವೆಲ್ಸ್ ಅವರು ಈ ಕಾಲ್ಪನಿಕ ಕತೆಯನ್ನು ನಾಟಕವಾಗಿ ರೂಪಾಂತರಿಸುವಾಗ ಒಂದು ಮಹತ್ತರ ಬದಲಾವಣೆಯನ್ನು ಮಾಡಿದರು. ಅದೇನೆಂದರೆ ಇಡೀ ನಾಟಕಕ್ಕೆ ಸತ್ಯ ಘಟನೆಗಳ ಒಂದು ವರದಿಯ ರೂಪ ಕೊಟ್ಟುಬಿಟ್ಟರು. ಇಡೀ ನಾಟಕವೇ ಒಂದು ವಾರ್ತೆಗಳ ಪ್ರಸಾರದಂತಾಗಿಬಿಟ್ಟಿತು! ಯಾವುದೋ ಗುರುತುಸಿಗದ ವಿಚಿತ್ರ ವಸ್ತುವೊಂದು ಆಕಾಶದಲ್ಲಿ ಹಾರಾಡುತ್ತಿದೆಯೆಂದೂ ಅಮೆರಿಕದ ನ್ಯೂಜೆರ್ಸಿಯ ಗ್ರೋವರ್ಸ್ ಮಿಲ್ ಎಂಬ ಈ ವಸ್ತುವಿನಿಂದ ಬೆಂಕಿ ಉರಿಯುವ ವಿಚಿತ್ರ ವಸ್ತುಗಳ

ನನ್ನು ಕಳಚಿಟ್ಟು ಪ್ರತಿಭಟಿಸಿದ ಸರ್ಕಾರವೇ ಈ ದೇಶವ ದಲ ಸಂಪತ್ತನ್ನು, ಮಾರುಕಟ್ಟೆಯನ್ನು, ಶ್ರಮಸಂಪತ್ತನ್ನು ದಿ ಹಗಲೇ ಹೊಡೆಯುವುದಕ್ಕೆ ಅದೇ ಸಾಮ್ರಾಜ್ಯ ಗಳಿಗೆ ವೀಳೆಯದೆಲೆ ಕೊಟ್ಟು ಆಹ್ವಾನಿಸುತ್ತಿಲ್ಲವೆ? ಟಿಷ್ ಭಾರತದಲ್ಲಿ ಲೂಟಿ ಹೊಡೆಯುವುದಕ್ಕೆ ಒಂದೇ ಸ್ಟ್ ಇಂಡಿಯಾ ಕಂಪೆನಿಯಿತ್ತು; ಒಂದೇ ಬ್ರಿಟನ್ ಶವಿತ್ತು. ಈ ಹೊತ್ತು ಬ್ರಿಟನ್ ಅನ್ನೂ ಒಳಗೊಂಡಂತೆ ಪಂಚದ ಎಲ್ಲಾ ಸಾಮ್ರಾಜ್ಯಶಾಹಿ ದೇಶಗಳು ಸಮೃದ್ಧ ತಖಂಡವನ್ನು ಲೂಟಿ ಹೊಡೆಯುತ್ತಿವೆ. ಈಸ್ಟ್ ಡಿಯಾ ಕಂಪೆನಿಯ ಜಾಗದಲ್ಲಿ ಅದೆಷ್ಟು ಸಾವಿರ ಪೆನಿಗಳು ಬಂದಿವೆಯೋ? ನಮ್ಮ ದೇಶದಲ್ಲಿ ಯಾವ ಗಳನ್ನು ಅನುಸರಿಸಬೇಕೆಂಬುದನ್ನು ನಾವು ಆಯ್ಕೆ ಡಿದ ಸರ್ಕಾರಗಳು ನಿರ್ಧರಿಸುತ್ತಿಲ್ಲ, ಬದಲಿಗೆ, ಅಮೆರಿಕ, ಟನ್, ರಷಿಯವಾದಿಯಾಗಿ ಇಡೀ ವಿಶ್ವವನ್ನು ಯಂತ್ರಿಸುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳು ನಿಯಂತ್ರಿಸುತ್ತಿವೆ.




ವಿಶ್ವವ್ಯಾಪಾರ ಸಂಘಟನೆಯ ಮೀಟಿಂಗ್‌ಗಳಲ್ಲಾಗಲೀ, ವಿಶ್ವಸಂಸ್ಥೆಯ ಸಭೆಗಳಲ್ಲಾಗಲೀ ನಮ್ಮ ನಾಯಕರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ನಮ್ಮ ದೇಶ ಯಾವ ಆರ್ಥಿಕ ನೀತಿಯನ್ನು ಅನುಸರಿಸಬೇಕೆಂಬುದನ್ನು ಅವರೇ ನಿರ್ಧರಿಸಿ ನಮ್ಮ ನಾಯಕರಿಂದ ಸಹಿ ಹಾಕಿಸಿಕೊಂಡು ಕಳಿಸುತ್ತಾರೆ. ಇದೆಲ್ಲಾ ಬದಲಾಗದೇ ಕೇವಲ ಗೌನು ಬಿಚ್ಚಿಡುವುದರಿಂದ ತಂತ್ರ್ಯ, ಸ್ವಾಯತ್ತತೆ, ಸ್ವಾಭಿಮಾನ, ರ್ವಭೌಮತೆಗಳು ಬಂದುಬಿಡುತ್ತವೆ ಎಂದು ಮರಾಮ್ ರಮೇಶ್ ಅಂದುಕೊಂಡಿದ್ದರೆ ಅವರಂಥ ರ್ಖರು ಮತ್ತೊಬ್ಬರಿಲ್ಲ ಅನ್ನಿಸುತ್ತದೆ. ಗೌನು ಬಿಟ್ಟಿರುವುದು ಒಂದು ಸ್ವಾಗತಾರ್ಹ ಕೆಲಸವೇ ರೂ ಅದಕ್ಕಿಂತಲೂ ಜರೂರತ್ತಾಗಿ ಮಾಡಬೇಕಿರುವ ನ್ನ ಬೇಕಾದಷ್ಟು ಕೆಲಸಗಳೂ ಇವೆ. ಅದರ ಮೂ ಅವರು ಗಮನ ಕೊಡಲಿ. ●

ಸುತ್ತಿವೆಯೆಂದೂ – ನಿಜವಾದ ಸುದ್ದಿಯನ್ನು ಕಣ್ಣಾರೆ ವರದಿ ಮಾಡುತ್ತಿದ್ದಾರೇನೋ ಎಂಬಂತೆ ನಾಟಕವನ್ನು ಯಲಾಗಿತ್ತು. ಅಲ್ಲದೇ ಈ ನಾಟಕದಲ್ಲಿದ್ದ ಅಧಿಕಾರಿಗಳ ಗಳು ಹಾರುವ ವಸ್ತುವಿನಿಂದ ಮಂಗಳ ಗ್ರಹದ ಣಕಾರಿ ತಂಡ ಭೂಮಿಗೆ ಇಳಿದದ್ದನ್ನು, ಅಮೆರಿಕವನ್ನೇ ಯ ಮೊದಲ ಗುರಿ ಮಾಡಿಕೊಂಡು ಹೊರಟಿದ್ದನ್ನು ತಪಡಿಸುತ್ತಿದ್ದವು. ಒಂದು ಹಂತದಲ್ಲಿ ಆ ಹಾರುವ ಯಿಂದ ಬೃಹತ್ ಹಾವಿನಂತೆ ಬಳುಕಾಡುವ ವಿಚಿತ್ರ ಯೊಂದು ಕಾಣುತ್ತಿದೆ ಎಂದು ಒಬ್ಬರು ಸ್ಥಳದಲ್ಲೇ ವರದಿ ಮಾಡುತ್ತಿದ್ದಂತೆ ಬಿತ್ತರಿಸಲಾಯಿತು. ಒಂದು ಕಾಲ್ಪನಿಕ ನಾಟಕ ಎಂಬ ಸುಳಿವನ್ನು ಆರ್ಸನ್ ಎಲ್ಲೂ ಕೊಡಲಿಲ್ಲ.

ಆದರೆ, ಕೇಳುಗರು ಮಾತ್ರ ಅದನ್ನು ನಿಜವಾದ ವಾರ್ತಾ ರ ಅಂತಲೇ ಭಾವಿಸಿದರು. ವಿಶೇಷ, ಭಯಾನಕ ಅತಿ ತುರ್ತಿನ ಸುದ್ದಿಯಾಗಿದ್ದರಿಂದ ನಾಟಕ ವಾಗುವ ಸಮಯದಲ್ಲಿ ವಾರ್ತಾ ಪ್ರಸಾರವಾಗುತ್ತಿದೆ ಲೇ ತಿಳಿದರು. ಮುಂದೇನಾಗಬೇಕಿತ್ತೋ ಅದೇ ತು. ಇಡೀ ಅಮೆರಿಕದಾದ್ಯಂತ ಜನ ಬೀದಿಬೀದಿಗಳಲ್ಲಿ ಓಡಲಾರಂಭಿಸಿದರು. ತಂತಮ್ಮ ಪಿಸ್ತೂಲ್‌ಗಳನ್ನು ಶ್ ಮಾಡಿಕೊಂಡು ನೆಲಮಾಳಿಗೆಯಲ್ಲಿ, ಉಗ್ರಾಣಗಳಲ್ಲಿ ಕುಳಿತರು. ಕೆಲವರಂತೂ ಮಂಗಳ ಜೀವಿಗಳಿಂದ ತ್ತದೆನ್ನಲಾದ ವಿಷಾನಿಲದಿಂದ ರಕ್ಷಿಸಿಕೊಳ್ಳುವುದಕ್ಕಾಗಿ ತಲೆಗಳಿಗೆ ಹಸಿ ಟವೆಲ್‌ಗಳನ್ನು ಸುತ್ತಿಕೊಂಡರು. ಇಡೀ ಅಮೆರಿಕದಲ್ಲಿ ಜನ ಭಯ, ಭೀತಿ, ಗಳಿಂದ ಹುಚ್ಚೆದ್ದು ಹೋದರು. ಆಮೇಲೆ ಪರಿಸ್ಥಿತಿ ಯಿಸುತ್ತಿರುವುದನ್ನು ಗಮನಿಸಿ ಅದೇ ರೇಡಿಯೋ ದ ಸುದ್ದಿ ಬಿತ್ತರಿಸಿತು. ಜನ ದೇಶದಾದ್ಯಂತ ಯಿಂದ ದಿಕ್ಕೆಟ್ಟಿರುವುದೂ ಅದಕ್ಕೊಂದು ಸುದ್ದಿಯಾಗಿತ್ತು ಗೆ ಇಡೀ ಪ್ರಕರಣವೇ ಒಂದು ಹಗರಣವಾಗಿ ರ್ಚೆಯಾಯಿತು. ಸಮೂಹ ಮಾಧ್ಯಮವೊಂದು ಒಂದು ಸುಳ್ಳು ಸುದ್ದಿಯ ಮೂಲಕ ಇಡೀ ಶ್ಯೇ ತಲ್ಲಣಗೊಳಿಸಬಹುದೆಂಬುದು ಚರಿತ್ರೆಯಲ್ಲಿ ಬಾರಿಗೆ ದಾಖಲಾಯಿತು.

ಗ ಜೋರ್ಡಾನ್‌ನಲ್ಲಿ ಮತ್ತದೇ ಚಿಕಪ್ರಮಾಣದಲ್ಲಿ ನಾವರ್ತನೆಯಾಗಿದೆ. ●

ಬ್ಯಾಂಕ್‌ಗೆ ವಂಚಿಸಿದ ಗಾಂಧಿನಗರ ಸಿಕ್ಕಿಬಿದ್ದ ಸಿಂಗ್ ಬಾಬು



ಗಾಂಧಿನಗರದವರು ಎಂಥವರಿಗೂ ಟೋಪಿ ಹಾಕುತ್ತಾರೆ ಎಂಬುದನ್ನು ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಸಾಬೀತುಮಾಡಿದ್ದಾರೆ!

ಅದೂ ಒಂದೇ ವೇಳೆಗೆ ಒಂದೇ ಚಿತ್ರದ ಹೆಸರಿನಲ್ಲಿ ಹಲವಾರು ಜನರನ್ನು ವಂಚಿಸಿರುವ ಬಾಬು ತಾನು ಖ್ಯಾತ ನಿರ್ದೇಶಕ ಮಾತ್ರವಲ್ಲ ಕುಖ್ಯಾತ ವಂಚಕನೂ ಹೌದು ಎಂದು ಎದೆ ನಿಮಿರಿಸಿಕೊಂಡು ಸಾರಿದ್ದಾರೆ.

ಮೊನ್ನೆ ತಾನೆ ಬಿಡುಗಡೆಯಾದ 'ತಿಪ್ಪಾರಳ್ಳಿಯ ತರ್ಲೆಗಳು' ಚಿತ್ರ ಒಂದು ವರ್ಷದ ಹಿಂದೆಯೇ ಬಿಡುಗಡೆಗೆ ಸಿದ್ಧವಾಗಿತ್ತು. ಆದರೆ ಅದರ ನಿರ್ಮಾಪಕ ಪಾಲುದಾರರಾದ ರಾಜೇಂದ್ರ ಸಿಂಗ್ ಬಾಬು ಮತ್ತು ಮೋಹನ್ ಅವರು ಐಡಿಬಿಐ ಬ್ಯಾಂಕ್‌ನಿಂದ ಈ ಚಿತ್ರಕ್ಕಾಗಿ ಪಡೆದ ಸಾಲ ಮರುಪಾವತಿಸದೇ ಇದ್ದುದರಿಂದ ಚಿತ್ರವನ್ನು ಬಿಡುಗಡೆ ಮಾಡಲು ಬ್ಯಾಂಕ್ ನೋ ಅಬ್‌ಜೆಕ್ಷನ್ ಸರ್ಟಿಫಿಕೇಟನ್ನು ನೀಡಿರಲಿಲ್ಲ. ಆದರೆ ಒಂದು ವರ್ಷ ಕಾದರೂ ಬಾಬು ಹಣ ಸಂದಾಯ ಮಾಡುವ ಸೂಚನೆ ನೀಡದಿದ್ದಾಗ ಐಡಿಬಿಐ ಬ್ಯಾಂಕ್‌ನವರು ರಾಕ್‌ಲೈನ್ ಪ್ರೊಡಕ್ಷನ್ ಮುಖಾಂತರ ರಾಜ್ಯಾದ್ಯಂತ ಬಿಡುಗಡೆ ಮಾಡಲು ಮುಂದಾದರು.



ಮೋಹನ್



ಕೊಠಾರಿ

ಎಲ್ಲವೂ ಐಡಿಬಿಐ ಬ್ಯಾಂಕ್‌ನವರ ಪ್ಲಾನ್‌ನಂತೆ ನಡೆದಿದ್ದರೆ ಸಿನಿಮಾ ಬಿಡುಗಡೆಯಾಗಿ, ಬರುವ ಲಾಭದಲ್ಲಿ ತಮಗೆ ಸೇರಬೇಕಿದ್ದ ಮೊತ್ತವನ್ನು ಪಡೆದು ಮಿಕ್ಕ ಹಣವನ್ನು ನಿರ್ಮಾಪಕರಿಗೆ ನೀಡುವುದಾಗಿತ್ತು. ಜೊತೆಗೆ ಸಿನಿಮಾ ಬಿಡುಗಡೆಯಾದ ಮೇಲೆ ಅದರ ಸ್ಯಾಟಲೈಟ್ ಹಕ್ಕನ್ನೂ ಬ್ಯಾಂಕಿಗೆ ನೀಡಬೇಕೆಂಬ ಕರಾರನ್ನೂ ವಿಧಿಸಲಾಗಿತ್ತು.

ಆದರೆ ಪ್ರಳಯಾಂತಕ ಸಿಂಗ್ ಬಾಬು ಚಿತ್ರದ ಚಿತ್ರೀಕರಣದ ವೇಳೆಯೇ ಖಾಸಗಿ ವಾಹಿನಿಯೊಂದಕ್ಕೆ ತನ್ನ ಚಿತ್ರದ ಹಕ್ಕನ್ನು ಮಾರಿಕೊಂಡಿದ್ದರು. ಅಷ್ಟಕ್ಕೂ ಸುಮ್ಮನಾಗದ ಬಾಬು ಚಿತ್ರದ ಸ್ಯಾಟಲೈಟ್ ಹಕ್ಕನ್ನು ಗಾಂಧಿನಗರದ ಸಿನಿಮಾಗಳನ್ನು ಮಾರಾಟ ಮಾಡುವ ಬ್ರೋಕರ್ ಕೊಠಾರಿಗೂ ನಲವತ್ತು ಲಕ್ಷದ ಮೊತ್ತಕ್ಕೆ ಮಾರಿ ಆತನ ಹಣೆಗೂ ಉಂಡೇನಾಮ ತಿಕ್ಕಿದ್ದಾರೆ.

ಸಾಲ ಮಾಡಿ ಸಿನಿಮಾ ನಿರ್ಮಿಸಿ ಕಷ್ಟದಲ್ಲಿ ಸಿಲುಕಿಕೊಳ್ಳುವ ನಿರ್ಮಾಪಕರಿಂದ ಅವರ ಸಿನಿಮಾದ ಹಕ್ಕನ್ನು ಪುಡಿಗಾಸಿಗೆ ಬಾಚಿಕೊಂಡು ನಂತರ ಸಿನಿಮಾ ಬಿಡುಗಡೆಯಾದ ಮೇಲೆ ಒಳ್ಳೆ ರೇಟಿಗೆ ಬೇರೆ ಛಾನೆಲ್‌ನವರಿಗೆ ಮಾರುವುದು ಕೊಠಾರಿಯ ಕಸುಬು. ಸಿನಿಮಾವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಪಬ್ಲಿಸಿಟಿ, ಥಿಯೇಟರ್ ಬಾಡಿಗೆಗೂ ಕಾಸಿಲ್ಲದ ನಿರ್ಮಾಪಕರು ಕೊಠಾರಿಯ ಹೆಸರಿಗೆ ತಮ್ಮ ಚಿತ್ರದ ಸ್ಯಾಟಲೈಟ್ ಹಕ್ಕನ್ನು ಬರೆದುಕೊಡುತ್ತಾರೆ. "ಸಿನಿಮಾದ ಹಕ್ಕಿಗೆ ಸಹಿ ಮಾಡುತ್ತಿದ್ದಂತೇ ಕೈಗೆ ಕಾಸು ಮಡಗುತ್ತಾನೆ" ಎಂಬುದೊಂದೇ ನಿರ್ಮಾಪಕರ ಪಾಲಿಗೆ ದಕ್ಕುವ ಲಾಭ.

ಇಂಥ ಕೊಠಾರಿಯನ್ನೇ ಈಗ ಸಿಂಗ್ ಬಾಬು ಯಾಮಾರಿಸಿದ್ದಾರೆ ಎಂದರೆ ಅವರ ಬುದ್ಧಿವಂತಿಕೆ ನಿಜಕ್ಕೂ ಎಷ್ಟಿರಬಹುದು?

ಈ ಮಧ್ಯೆ 'ತಿಪ್ಪಾರಳ್ಳಿಯ ತರ್ಲೆಗಳು' ಚಿತ್ರದ ಶೂಟಿಂಗ್ ನಡೆಯುತ್ತಿದ್ದ ಸಂದರ್ಭದಲ್ಲೇ ಸಿನಿಮಾ ಫೈನಾನ್ಷಿಯರ್ ಆದ ಸುಬ್ರಹ್ಮಣ್ಯ ಎಂಬುವವರಿಂದಲೂ ಫೈನಾನ್ಸ್ ಪಡೆದಿದ್ದಾರೆ ಬಾಬು.

ಹೋಗಲಿ ಸಿನಿಮಾವಾದರೂ ಒಂದಿಷ್ಟು ಕಲೆಕ್ಷನ್ ಮಾಡಿದ್ದರೆ ಹಣ ಕೊಟ್ಟವರಿಗೆ ಒಂದಿಷ್ಟು ದುಡ್ಡು ಬರುತ್ತಿತ್ತು. ಆದರೆ 'ತರ್ಲೆಗಳು' ಎಂಬ ಅದ್ವಾನದ ಚಿತ್ರವನ್ನು ಯಾವ ಪ್ರೇಕ್ಷಕನೂ ಮೂಸಿಯೂ ನೋಡುತ್ತಿಲ್ಲ. ಚಿತ್ರ ಬಿಡುಗಡೆಯಾಗಿ ಮೂರುದಿನಗಳಾದರೂ ಬೆಂಗಳೂರಿನ ಮುಖ್ಯ ಚಿತ್ರಮಂದಿರವಾದ 'ಭೂಮಿಕಾ' ಬಿಕೋ ಎನ್ನುತ್ತಿದೆ. ಮೊದಲ ವಾರ ಥಿಯೇಟರಿನ ಬಾಡಿಗೆ ಕಳೆದು ಶೇರು ಬರುವುದೇ ದೊಡ್ಡ ವಿಷಯ ಎಂಬಂತಾಗಿರುವಾಗ, ಬಾಬುರನ್ನು ನಂಬಿ ಸಾಲ ಕೊಟ್ಟ ಐಡಿಬಿಐ ಬ್ಯಾಂಕು, ಚಿತ್ರವನ್ನು ಖರೀದಿಸಿದ ಕೊಠಾರಿ, ಹಣ ನೀಡಿದ ಫೈನಾನ್ಷಿಯರ್ ಸುಬ್ರಹ್ಮಣ್ಯ... ಇವರೆಲ್ಲರ ತಮ್ಮ ದುಡ್ಡಿಗಾಗಿ ತಿರುಪತಿ ತಿಮ್ಮಪ್ಪನನ್ನೇ ನಂಬಬೇಕಿದೆ.


ಕೋರ್ ಕಮಿಟಿಟಿಯ ಚೋರ್ ಮೆಂಬರು!

ಹೀಗೆ ಐಡಿಬಿಐ ಬ್ಯಾಂಕ್‌ಗೆ ಉಂಡೆನಾಮ ತಿಕ್ಕಿರುವ ರಾಜೇಂದ್ರ ಸಿಂಗ್ ಬಾಬು ಎಂಥ ನಂಬಿಕೆಗೆಟ್ಟ ವ್ಯಕ್ತಿ ನೋಡಿ. ಐಡಿಬಿಐ ಬ್ಯಾಂಕ್‌ನವರು ಕರ್ನಾಟಕ ವಲಯದಲ್ಲಿ ಸಿನಿಮಾ ಸಾಲ ಸೌಲಭ್ಯ ಆರಂಭಿಸಿದಾಗ ಇದೇ ರಾಜೇಂದ್ರ ಸಿಂಗ್ ಬಾಬು ಅವರಿಗೆ ಕರ್ನಾಟಕದಲ್ಲಿ ನಿರ್ಮಾಣವಾಗುವ ಸಿನಿಮಾಗಳಿಗೆ ಸಾಲ ಮಂಜೂರು ಮಾಡುವ ಮುನ್ನ ಅರ್ಹರನ್ನು ಆಯ್ಕೆಮಾಡುವ ಮಹತ್ತರ ಜವಾಬ್ದಾರಿಯನ್ನು ವಹಿಸಿತ್ತು.

ಇಂಥ ಮರ್ಯಾದಸ್ಥ ಸ್ಥಾನವನ್ನು ಉಳಿಸಿಕೊಳ್ಳದ ಬಾಬು ಬೇಲಿಯೇ ಎದ್ದು ಹೊಲ ಮೇಯ್ದಂತೆ ತಾವೇ ಮೂರ್ನೂರು ಚಿತ್ರಗಳ ಹೆಸರಿನಲ್ಲಿ ಸಾಲ ಪಡೆದು ಹಣ ನುಂಗಿಹಾಕಿದ್ದಾರೆ.

ಕಲ್ಪವೃಕ್ಷವೂ ಕೈಬಿಟ್ಟಾಗ..

ಇತ್ತೀಚೆಗೆ ರಿಯಲ್ ಎಸ್ಟೇಟ್ ದಂಧೆ ಕೂಡ ಪಾತಾಳ ಸೇರಿರುವುದರಿಂದ ಕನ್ನಡ ಚಿತ್ರರಂಗ ಕೂಡ ಕಷ್ಟದ ದಿನಗಳನ್ನು ಎದುರಿಸುತ್ತಿದೆ. ಇಂತಹ ಕ್ಲಿಷ್ಟಕರ ಸಂದರ್ಭದಲ್ಲಿ ಕನ್ನಡ ಚಿತ್ರರಂಗ ನಿರ್ಮಾಪಕರಿಗೆ ಸ್ನೇಹಹಸ್ತ ಚಾಚಿದ್ದು ಐಡಿಬಿಐ ಬ್ಯಾಂಕ್. ಕಳೆದ ಒಂದೆರಡು ವರ್ಷಗಳಿಂದ ಐಡಿಬಿಐ ಬ್ಯಾಂಕ್ ಸಿನಿಮಾ ನಿರ್ಮಾಣವನ್ನು ಒಂದು ಉದ್ಯಮ ಎಂದು ಪರಿಗಣಿಸಿ ನಿರ್ಮಾಪಕರಿಗೆ ಸಾಲ ನೀಡುತ್ತಿತ್ತು. ಇದರಿಂದಾಗಿ ಮಾರ್ವಾಡಿಗಳು ಮತ್ತು ಫೈನಾನ್ಷಿಯರ್‌ಗಳಿಂದ ಅರವತ್ತು ಪರ್ಸೆಂಟ್ ಮೀಟರ್ ಬಡ್ಡಿಗೆ ಸಾಲ ತರುವ ಬದಲು ನಿರ್ಮಾಪಕರು ಕೇವಲ ಒಂಭತ್ತು ಅಥವಾ ಹತ್ತು ಪರ್ಸೆಂಟ್ ಬಡ್ಡಿಗೆ ಬ್ಯಾಂಕಿನಿಂದ ಸಾಲ ಪಡೆಯುವಂತಾಯಿತು. ಆಗ ರಾಜೇಂದ್ರ ಸಿಂಗ್ 'ತಿಪ್ಪಾರಳ್ಳಿಯ ತರ್ಲೆಗಳು', 'ಭೀಮೂಸ್ ಬ್ಯಾಂಗ್ ಬ್ಯಾಂಗ್' ಮತ್ತು 'ರಕ್ತಾಕ್ಷ' ಎಂಬ ಮೂರು ಸಿನಿಮಾಗಳಿಗೆ ಸಾಲ ಪಡೆದಿದ್ದರು.



ರಮೇಶ್ ಯಾದವ್



ರಾಮ್‌ಪ್ರಸಾದ್

ಆದರೆ ಸಿನಿಮಾವನ್ನು ಬಿಡುಗಡೆ ಮಾಡುವ ಮೊದಲು ಬಡ್ಡಿ ಸಮೇತ ಸಾಲವನ್ನು ಹಿಂತಿರುಗಿಸಬೇಕು ಎಂಬುದು ಬ್ಯಾಂಕಿನವರ ಷರತ್ತಾಗಿತ್ತು. ಈಗ ನೋಡಿದರೆ 'ತರ್ಲೆ' ನೆಲ ಕಚ್ಚಿದೆ. ಹಾಗೊಮ್ಮೆ ಬಾಬು ನಿರ್ದೇಶನದ 'ಭೀಮೂಸ್' ಮತ್ತು 'ರಕ್ತಾಕ್ಷ'ಗಳನ್ನೂ ಬಿಡುಗಡೆ ಮಾಡಿ ತಮ್ಮ ಹಣವನ್ನು ವಸೂಲಿ ಮಾಡಲು ಬ್ಯಾಂಕ್ ನಿರ್ಧರಿಸಿದರೆ ಅದಕ್ಕೆ ಹಣ ಬರುವುದಿರಲಿ, ಇನ್ನಷ್ಟು ನಷ್ಟ ಕಟ್ಟಿಟ್ಟ ಬುತ್ತಿ.

ಬಾಬು ರೀತಿಯೇ ದಿವಂಗತ ಪಾತಕಿ ಚಿಕ್ಸ್‌ಕಣ್ ರಾಜೇಂದ್ರನ ಖಾಸಾ ಸಹೋದರ ರಮೇಶ್ ಯಾದವ್ ಕೂಡ ಎರಡು ಸಿನಿಮಾಗಳಿಗೆ ಐಡಿಬಿಐ ಬ್ಯಾಂಕಿನಿಂದ ಸಾಲ ಪಡೆದಿದ್ದ. ಪ್ರಜ್ವಲ್ ನಟಿಸಿದ್ದ 'ಕೆಂಚ' ಮತ್ತು ದರ್ಶನ್ ನಟಿಸಿರುವ 'ಬಾಸ್' ಚಿತ್ರಕ್ಕೆ ಸಾಲ ಪಡೆದ ಯಾದವ್ ಅದನ್ನು ಇನ್ನೂ ತೀರಿಸಿಲ್ಲ. ಈ ಕಾರಣಕ್ಕೆ ದರ್ಶನ್‌ನ 'ಬಾಸ್' ಸಿದ್ಧಗೊಂಡು ವರ್ಷವೇ ಕಳೆದಿದ್ದರೂ ಅದಿನ್ನೂ ಬಿಡುಗಡೆಯ ಭಾಗ್ಯವನ್ನು ಪಡೆದಿಲ್ಲ.

ಇದೇ ಸಾಲಿಗೆ ಸೇರುವ ಮತ್ತೊಬ್ಬ ನಿರ್ಮಾಪಕ ಅಶ್ವಿನಿ ರಾಮ್‌ಪ್ರಸಾದ್. ಈತ ಪ್ರೇಮ್ ಮತ್ತು ರಮ್ಯಾ ಜೋಡಿಯ 'ಜೊತೆಗಾರ' ಚಿತ್ರಕ್ಕಾಗಿ ಐಡಿಬಿಐನಿಂದ ಪಡೆದ ಸಾಲವನ್ನು ಮರುಪಾವತಿಸುವ ಮೊದಲೇ ಆ ಚಿತ್ರವನ್ನು ಬಿಡುಗಡೆ ಮಾಡಲು ಹೊರಟಿದ್ದರು. ಅದಕ್ಕೆ ಸಂಬಂಧಪಟ್ಟಂತೆ ಪತ್ರಿಕಾಗೋಷ್ಠಿಯನ್ನೂ ಕರೆದು ಥಿಯೇಟರುಗಳನ್ನು ಕೂಡಾ ಅನೌನ್ಸ್ ಮಾಡಿದ್ದರು. ಆದರೆ ಗಾಂಧಿನಗರದ ಜನ ಚಾಪೆ ಕೆಳಗೆ ತೂರುವುದರಲ್ಲಿ ನಿಸ್ಸೀಮರು ಎಂದು ಅರಿತ ಐಡಿಬಿಐನವರು 'ಜೊತೆಗಾರ'ನ ಬಿಡುಗಡೆಯ ದಿನವೇ ಕೋರ್ಟಿನಿಂದ ತಡೆಯಾಜ್ಞೆ ತಂದು 'ಜೊತೆಗಾರ'ನನ್ನು ಡಬ್ಬಾದಲ್ಲೇ ಬಂಧಿಸಿದರು. 'ಜೊತೆಗಾರ'ನ ಬಿಡುಗಡೆ ರದ್ದಾಗಿ ಈಗ್ಗೆ ಏಳೆಂಟು ತಿಂಗಳುಗಳಾಗಿವೆ. ಆದರೆ ರಾಮ್‌ಪ್ರಸಾದ್ ಐಡಿಬಿಐ ಬ್ಯಾಂಕ್‌ಗೆ ನಯಾ ಪೈಸೆಯ ಬ್ಯಾಲೆನ್ಸನ್ನೂ ಕ್ಲಿಯರ್ ಮಾಡಲಾಗದೆ 'ಜೊತೆಗಾರ'ನನ್ನು ಡಬ್ಬದಲ್ಲಿ ಕೊಳೆಸುತ್ತಿದ್ದಾರೆ.

ನಿರ್ಮಾಪಕ ಎನ್.ಎಂ ಸುರೇಶ್ ಕೂಡ 'ಕಾರಂಜಿ' ಚಿತ್ರಕ್ಕಾಗಿ ಐಡಿಬಿಐ ಬ್ಯಾಂಕ್‌ನಿಂದ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಸಾಲ ಪಡೆದಿದ್ದರು. ಸಿನಿಮಾ ಬಿಡುಗಡೆಗೆ ಮುನ್ನ ಮೂವತ್ತು ಲಕ್ಷ ರೂಪಾಯಿಗಳನ್ನು ಕ್ಲಿಯರ್ ಮಾಡಿದ ಸುರೇಶ್ ಮಿಕ್ಕ ಹಣವನ್ನು 'ಕಾರಂಜಿ'ಯನ್ನು ಬಿಡುಗಡೆ ಮಾಡಿದ ಹದಿನೈದು ದಿನಗಳ ಒಳಗೆ ಕ್ಲಿಯರ್ ಮಾಡುವುದಾಗಿ ಬ್ಯಾಂಕಿಗೆ ಹೇಳಿ ಅದರಿಂದ ಅನುಮತಿ ಪಡೆದಿದ್ದರು.

ಅವರ ದುರಾದೃಷ್ಟವೋ, ಬ್ಯಾಂಕಿನ ದುರಾದೃಷ್ಟವೋ 'ಕಾರಂಜಿ' ಬಿಡುಗಡೆಯಾದ ಒಂದೇ ವಾರಕ್ಕೆ ಥಿಯೇಟರಿನಿಂದ ಜಾಗ ಖಾಲಿ ಮಾಡಿತ್ತು. ಇನ್ನು ಉಳಿದ ಒಂದು ಕೋಟಿಯನ್ನು ಮರುಪಾವತಿಸುವ ಮಾತೆಲ್ಲಿಂದ? ಈ ಕಾರಣಕ್ಕಾಗಿಯೇ ಈಗ ಸುರೇಶ್ ಅವರ ಬಿಗ್ ಬಜೆಟ್ ಚಿತ್ರ 'ಚೆಲುವೆ ನಿನ್ನೆ ನೋಡಲು'ಗೆ ಐಡಿಬಿಐನಿಂದ ನಾಲ್ಕಾಣೆಯ ಸಾಲವೂ ಸಿಕ್ಕಿಲ್ಲ.

ಗಾಂಧಿನಗರಿಗಳ ಈ ಅತಿಬುದ್ಧಿವಂತಿಕೆಯನ್ನು ನೋಡಿ ಐಡಿಬಿಐನವರು ರೋಸಿಹೋಗಿದ್ದಾರೆ. 'ಇನ್ನು ಮುಂದೆ ಕನ್ನಡದ ನಿರ್ಮಾಪಕರಿಗೆ ಯಾವ ಕಾರಣಕ್ಕೂ ಸಾಲ ನೀಡಬಾರದು' ಎಂದು ಬ್ಯಾಂಕಿನವರು ಠರಾವು ಹೊರಡಿಸಿದ್ದಾರೆ. ಇದರಿಂದಾಗಿ ಕನ್ನಡ ಚಿತ್ರರಂಗದ ಅನೇಕ ಚಿತ್ರಗಳ ನಿರ್ಮಾಣಕ್ಕೆ ದೊಡ್ಡ ಪೆಟ್ಟು ಬಿದ್ದು ಮೊದಲೇ ಹಳ್ಳ ಹಿಡಿದಿರುವ ಚಿತ್ರರಂಗ ಮತ್ತಷ್ಟು ಚಿಂತಾಕ್ರಾಂತ ಸ್ಥಿತಿಗೆ ದೂಡಲ್ಪಟ್ಟಿದೆ.


ಪ್ರಾಮಾಣಿಕರಿಗೂ ಸಾಲವಿಲ್ಲ!

ಚಿತ್ರ ನಿರ್ಮಾಪಕರ ಪಾಲಿಗೆ ವರವಾಗಿದ್ದ ಈ ಬ್ಯಾಂಕ್‌ನ ಯೋಜನೆಯನ್ನು ನಮ್ಮ ಬಾಬು, ರಾಮ್‌ಪ್ರಸಾದ್, ಯಾದವ್‌ರಂಥ ನಿರ್ಮಾಪಕರೇ ಹಾಳುಮಾಡಿದ್ದಾರೆ. ಹೀಗಾಗಿ ತಮ್ಮ ಟ್ರ್ಯಾಕ್ ರೆಕಾರ್ಡ್ ಅನ್ನು ಉತ್ತಮವಾಗಿ ಉಳಿಸಿಕೊಂಡಿರುವ ಇತರೆ ನಿರ್ಮಾಪಕರೂ ಈಗ ಸಾಲವಿಲ್ಲದೇ ಕಂಗಾಲಾಗುವಂತಾಗಿದೆ.

ಒಂದೆಡೆ ರಿಯಲ್ ಎಸ್ಟೇಟ್‌ನವರು ಈಗ ಗಾಂಧಿನಗರಕ್ಕೆ ಕಾಲಿಡುತ್ತಿಲ್ಲ. ಇನ್ನೊಂದೆಡೆ ಗಣಿಯವರೂ ಈ ಕಡೆ ತಿರುಗಿನೋಡುತ್ತಿಲ್ಲ. ಮತ್ತೊಂದೆಡೆ ಕಾರ್ಪೊರೇಟ್ ವಲಯದವರೂ ಸಿನಿಮಾದವರ ಸಹವಾಸವೇ ಬೇಡ ಎಂದು ತೀರ್ಮಾನಿಸಿರುವಂತಿದೆ. ಇಂತಹ ಸಂದರ್ಭದಲ್ಲಿ ಎಲ್ಲರ ಪಾಲಿಗೆ ಕಲ್ಪವೃಕ್ಷವಾಗಿದ್ದ ಐಡಿಬಿಐ ಬ್ಯಾಂಕು ಕೂಡಾ ಈಗ ಇಂಡಸ್ಟ್ರಿಯ ಕೈಬಿಟ್ಟಿದೆ.

ತಮ್ಮ ತಲೆ ಮೇಲೆ ತಾವೇ ಚಪ್ಪಡಿ ಕಲ್ಲು ಎಳೆದುಕೊಳ್ಳುವುದು ಎಂದರೆ ಇದೇ ಅಲ್ಲವೆ?

● ಅರುಣ್‌ಕುಮಾರ್ ಜಿ.
arunodayage@gmail.com


ಸಾರಕ್ಕಿ ನಟರಾಜ್

ಸಾರಕ್ಕಿ ನಟರಾಜ್ ರಬ್ಬರ್ ಸ್ಟಾಂಪ್ ಮೇಯರ್?



ವಿದ್ಯಾವಂತನಲ್ಲ. ಸಭ್ಯನಲ್ಲ. ದೇಶಕ್ಕಾಗಿ ಪ್ರಾಣಕೊಟ್ಟ ಕುಟುಂಬದವನಲ್ಲ. ಬೆಂಗಳೂರಿನ ಒಳಿತಿಗಾಗಿ ನಯಾಪೈಸೆಯ ಕೆಲಸ ಮಾಡಿಲ್ಲ. ಜನತೆಗಾಗಿ ಯಾವತ್ತೂ ಬೀದಿಗಿಳಿದವನಲ್ಲ. ಸೈಟು ದೋಚಿದ್ದು, ಪಾರ್ಕು, ಆಟದ ಮೈದಾನಕ್ಕೆಂದು ಮೀಸಲಿಟ್ಟಿದ್ದ ಜಮೀನು ದೋಚಿದ್ದು ಬಿಟ್ಟರೆ ನಟರಾಜ್‌ಗೆ ಮೇಯರ್ ಆಗುವ ಯಾವ ಅರ್ಹತೆಯಿದೆ?

ಕಟ್ಟಾ ಮಗನೋ ಸಾರಕ್ಕಿ ನಟರಾಜನೊ? ಇವರಿಬ್ಬರನ್ನು ಬಿಟ್ಟು ಕಟ್ಟೆ ಸತ್ಯನೊ? ಇವರ‍್ಯಾರೂ ಸಲ್ಲದೇ ಹೋದರೆ ನಂಜುಂಡಪ್ಪನಾ ಅಥವಾ ಗಂಗಭೈರಯ್ಯನಾ?

ಹೀಗೆ ಸಾಗುತ್ತದೆ ಬಿಜೆಪಿಯ ಭಾವೀ ಮೇಯರ್‌ಗಳ ಜಿಜ್ಞಾಸೆ. ಪ್ರಶ್ನೆ ಮೇಯರ್ ಯಾರಾಗಬೇಕು ಎಂಬುದಕ್ಕಿಂತಲೂ ಬೆಂಗಳೂರನ್ನು ಯಾರು ಆಳಬೇಕು ಎಂಬುದೇ ಅಸಲೀ ಮರ್ಮ. ನಾಯ್ಡುಗಳು ಆಳಬೇಕೆಂದರೆ ಮಂತ್ರಿ ಕಟ್ಟಾ ನಾಯ್ಡು ಕೈಗೆ ಬೆಂಗಳೂರನ್ನೊಪ್ಪಿಸುವುದು ಅಥವಾ ರೆಡ್ಡಿಗಳು ಆಳುವುದಾದರೆ ಸಾರಿಗೆ ಮಂತ್ರಿ ಆರ್. ಅಶೋಕ್ ತೆಕ್ಕೆಗೆ ಬೆಂಗಳೂರನ್ನು ಹಾಕುವುದು ಬಿಜೆಪಿಯ ಹುನ್ನಾರ. ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಬೆಂಗಳೂರನ್ನು ಇಬ್ಭಾಗ ಮಾಡಿ ಅರ್ಧ ಅಶೋಕ್ ಕೈಗೆ ಇನ್ನರ್ಧವನ್ನು ಕಟ್ಟಾ ಮರ್ಜಿಗೆ ಬಿಟ್ಟಂತೆಯೇ ಮೇಯರ್ ಗಿರಿಗೂ ಇದೇ ಸೂತ್ರವನ್ನು ಅಳವಡಿಸಿದೆ ಯಂತೆ ಬಿಜೆಪಿ.



ಅಶೋಕ್ ಹೆಸರಿಗಷ್ಟೇ ಒಕ್ಕಲಿಗ ಮುಖಂಡನಾದರೂ ಅಂತರ್ಯದಲ್ಲಿ ರೆಡ್ಡಿಗಳ ಪಕ್ಷಪಾತಿ. ಹೀಗಾಗಿ ಈ ಬಾರಿ ಒಕ್ಕಲಿಗರ ಸೋಗಿನಲ್ಲಿ ರೆಡ್ಡಿಗಳಿಗೆ ಬೆಂಗಳೂರನ್ನೊಪ್ಪಿಸುವುದು ಅಶೋಕ್ ಕಾರ್ಯತಂತ್ರವಂತೆ. ಈ ನಿಟ್ಟಿನಲ್ಲಿ ಕಟ್ಟಾನದ್ದು ಕಾದು ಕಬಳಿಸುವ ಲೆಕ್ಕಾಚಾರ. ಹೇಗಿದ್ದರೂ ಒಕ್ಕಲಿಗರನ್ನು ಮೊದಲ ಪಂಕ್ತಿಗೆ ಬಿಟ್ಟು ತೃಪ್ತಿಪಡಿಸಿಬಿಟ್ಟರೆ ಮುಂದಿನ ಸರದಿ ನನ್ನದೇ. ಆಗ ಮಗ ಕಟ್ಟಾ ಜಗ್ಗನನ್ನು ಮೇಯರ್ ಮಾಡುತ್ತೇನೆಂದರೆ ಕೇಳುವವರ‍್ಯಾರು?

ಇಂಥ ದೂರಾಲೋಚನೆಗೆ ಬಿದ್ದೇ ಕಟ್ಟಾ ಈ ಬಾರಿ ಅಶೋಕ್‌ರನ್ನು ಮುಂದೆಬಿಟ್ಟಿದ್ದಾರೆ. ಮುಖ್ಯಮಂತ್ರಿ ಯಡ್ಡಿ, ಸಂಸದ ಅನಂತ್‌ಕುಮಾರ್, ಶೋಭಾ, ಸುರೇಶ್‌ಕುಮಾರ್, ರಾಮಚಂದ್ರಗೌಡ; ಇತ್ಯಾದಿ ನಾಯಕರ ಮರ್ಜಿಗಿಂತಲೂ ಮೇಯರ್ ಆಯ್ಕೆಯ ವಿಷಯದಲ್ಲಿ ಅಶೋಕ್ ಕೈಯೇ ಹೆಚ್ಚು ಉದ್ದವಾಗಿದೆ. ಏಕೆಂದರೆ ಸ್ವತಃ ಅಶೋಕ್ ರೆಡ್ಡಿಗಳೂ ಸೇರಿದಂತೆ ಐವತ್ತೊಂದು ಮಂದಿ ಒಕ್ಕಲಿಗ ಕೌನ್ಸಿಲರ್‌ಗಳನ್ನು ಗೆಲ್ಲಿಸಿಕೊಂಡಿದ್ದಾರೆ. ಈ ಐವತ್ತೊಂದು ಮಂದಿ ರೆಡ್ಡಿ ಕಮ್ ಒಕ್ಕಲಿಗ ಕೌನ್ಸಿಲರ್‌ಗಳಲ್ಲದೇ ಅಶೋಕ್ ಜೇಬಿನಲ್ಲಿ ಇನ್ನೂ ಇಪ್ಪತ್ತು ಮಂದಿ ಇತರೇ ಜಾತಿಯ ಬಿಜೆಪಿ ಕೌನ್ಸಿಲರ್‌ಗಳಿದ್ದಾರೆ. ಸಾಲದ್ದಕ್ಕೆ ಬೆಂಗಳೂರಿನ ಶಾಸಕರ ಪೈಕಿ ದಾಸರಹಳ್ಳಿಯ ಮುನಿರಾಜು, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ಕೆ.ಆರ್. ಪುರದ ಸಂದೀಶ್ ರೆಡ್ಡಿ, ಯಲಹಂಕದ ವಿಶ್ವನಾಥ್ ರೆಡ್ಡಿ, ಬೆಂಗಳೂರು ದಕ್ಷಿಣದ ಎಂ. ಶ್ರೀನಿವಾಸ್ ಮತ್ತು ಬೆಂಗಳೂರು ಉತ್ತರದ ಕೃಷ್ಣಪ್ಪ ಇತ್ಯಾದಿ ಎಮ್ಮೆಲ್ಲೆಗಳೆಲ್ಲ ನಿಸ್ಸಂಶಯವಾಗಿ ಅಶೋಕ್ ಬೆನ್ನಿಗೆ ನಿಲ್ಲುತ್ತಾರೆ.

ಇಂಥ ರೆಡ್ಡಿ-ಒಕ್ಕಲಿಗ ಬ್ರಿಗೇಡ್ ಅನ್ನು ಬೆನ್ನಿಗಿಟ್ಟು ಕೊಂಡೇ ಬೆಂಗಳೂರನ್ನು ಆಳುವುದು ಅಶೋಕ್ ರಣತಂತ್ರ. ಅದಕ್ಕೊಬ್ಬ ರಬ್ಬರ್ ಸ್ಟಾಂಪ್ ಮೇಯರ್ ಬೇಕು. ಏಕಾಏಕಿ ಸಾರಕ್ಕಿ ನಟರಾಜ್ ಹೆಸರನ್ನು ತೇಲಿಬಿಟ್ಟರೆ ಆತ ರೆಡ್ಡಿ ಎಂದು ಇನ್ನೆಲ್ಲಿ ತಕರಾರೇಳುತ್ತೋ ಎಂದು ಮೊದಲು ಜೆ.ಪಿ. ಪಾರ್ಕ್‌ನ ಕೌನ್ಸಿಲರ್ ಬಿ.ಆರ್. ನಂಜುಂಡಪ್ಪನನ್ನು ಮುಂದೆ ಬಿಟ್ಟಿದ್ದಾರೆ. ಶೋಭಾ ಕರಂದ್ಲಾಜೆ ಕೂಡ ನಂಜುಂಡಪ್ಪ ಬೆನ್ನಿಗಿರುವುದರಿಂದ ಮೊದಮೊದಲು ನಂಜುಂಡಪ್ಪ ಹೆಸರೇ ಮೇಯರ್ ರೇಸಿನ ಮುಂಚೂಣಿ ಯಲ್ಲಿತ್ತು. ಇನ್ನೇನು ನಂಜುಂಡಪ್ಪ ಪರವಾಗಿ ಒಕ್ಕಲಿಗ ಕೌನ್ಸಿಲರ್‌ಗಳೆಲ್ಲ ಒಗ್ಗಟ್ಟಾಗಿಬಿಟ್ಟರು ಎನ್ನುವಾಗಲೇ 'ನಾನು ಕೂಡ ಮೇಯರ್ ಆಗಬೇಕು ಕಣ್ರೀ....' ಎಂದು ಲಾಬಿಗಿಳಿದವನು ರಾಜ್‌ಕುಮಾರ್ ವಾರ್ಡಿನ ಗಂಗಬೈರಯ್ಯ!



ಗಂಗಬೈರಯ್ಯ ಕೂಡ ಹಳೇ ತಲೆಯೇ. ಆದರೆ ಹುಂಬ. ಸಾರಕ್ಕಿ ನಟರಾಜನಂತೆ ನಾಜೂಕಾಗಿ ಲ್ಯಾಂಡ್ ಡೀಲ್ ನಡೆಸಿ ಗಂಟು ಹೊಡೆಯಲಾರ. ದೇವಸ್ಥಾನದ ದುಡ್ಡು, ದಾಸರ ಹಳ್ಳಿ ಕೆರೆ ಕಬಳಿಸಿದ ದುಡ್ಡು, ಕಾಮಗಾರಿ ಬೋಗಸ್ ಬಿಲ್ಲಿನ ಬಾಬ್ತು ಹೀಗೆ ಸಿಕ್ಕಿಬೀಳುತ್ತೇನೆಂದು ಗೊತ್ತಿದ್ದೂ ಕೈಚಳಕ ತೋರಲು ಹೋಗಿ ಯಡವಟ್ಟು ಮಾಡಿಕೊಂಡ ಗಂಗಭೈರಯ್ಯನಿಗೆ ಪಾರ್ಟಿ ವಲಯದಲ್ಲೇ ಒಳ್ಳೆಯ ಹೆಸರಿಲ್ಲ ಮತ್ತು ಪಕ್ಕಾ ಗಾಡ್‌ಫಾದರ್‌ಗಳೆಂದು ಯಾರೂ ಇಲ್ಲ. ಅಶೋಕ್‌ಗೆ ಬೇಕಿರುವುದು ತನ್ನ ಬೇನಾಮಿಯಂಥ ಮೇಯರ್!

ಒಂದೆಡೆ ಬಿ.ಆರ್. ನಂಜುಂಡಪ್ಪ ಮತ್ತೊಂದೆಡೆ ಗಂಗಭೈರಯ್ಯನಂಥ ಒಕ್ಕಲಿಗ ಕೌನ್ಸಿಲರ್‌ಗಳ ಹೆಸರನ್ನು ತೇಲಿಸಿಬಿಟ್ಟು ಅಂತಿಮವಾಗಿ ಸಾರಕ್ಕಿ ನಟರಾಜ್‌ನನ್ನು ಮೇಯರ್ ಗಾದಿಗೆ ತರುವುದು ಅಶೋಕ್ ಅಸಲೀ ತಂತ್ರ. ಅದಕ್ಕೆಂದೇ 'ಬಿಸಿಎಂ-ಎ' ಕ್ಯಾಟಗರಿಯಾಗಿದ್ದ ಮೇಯರ್ ಮೀಸಲಾತಿ ಯನ್ನು ರಾತ್ರೋರಾತ್ರಿ ಬದಲಿಸಿ ಸಾಮಾನ್ಯ ವರ್ಗವನ್ನಾಗಿ ಬದಲಿಸಿಕೊಂಡರು.

ಸಾರಕ್ಕಿ ನಟರಾಜನನ್ನೇ ಬೆಂಗಳೂರು ಮೇಯರ್‌ಗಿರಿಗೆ ಗುದುಮುಲು ಹೊರಟ ಅಶೋಕ್ ಉದ್ದೇಶದ ಹಿಂದಿರುವುದು ರಿಯಲ್ ಎಸ್ಟೇಟ್ ದಂಧೆ. ನಟರಾಜ್ ಅಶೋಕ್‌ರ ಲ್ಯಾಂಡ್ ಡೀಲ್ ಕಾಯಕದ ಬೇನಾಮಿ. ಈ ಹಿಂದೆ ಉತ್ತರಹಳ್ಳಿಗೆ ಶಾಸಕರಾಗಿದ್ದ ಅಶೋಕ್ ಬೆಂಗಳೂರು ಸುತ್ತಮುತ್ತಲ ಸಹಸ್ರಾರು ಎಕರೆ ಸರ್ಕಾರಿ ಭೂಮಿಯನ್ನು ಬಗರ್‌ಹುಕುಮ್ ಸಾಗುವಳಿಯ ಹೆಸರಲ್ಲಿ ನೆಲಕಂಟಕ ಬಿಜೆಪಿಗಳ ಬಾಯಿಗೆ ಹಾಕಿದರಲ್ಲ; ಈ ಪೈಕಿ ನಟರಾಜ್ ತನ್ನ ಮಾವ ಮತ್ತು ಅತ್ತೆಯ ಹೆಸರಲ್ಲಿ ಒಟ್ಟು ಎಂಟು ಎಕರೆ ಸರ್ಕಾರಿ ಭೂಮಿಯನ್ನು ಕಬಳಿಸಿದ್ದ. ಪಕ್ಕಾ ಅಶೋಕ್ ಭಟ್ಟಂಗಿ. ಆವತ್ತಿನಿಂದ ಇವತ್ತಿನತನಕ ಅಶೋಕ್ ಹಾಕಿದ ಗೆರೆ ದಾಟಿದವನಲ್ಲ.



ಒಂದಲ್ಲ ಎರಡು ಬಾರಿ ಗೆದ್ದು ಕೌನ್ಸಿಲರ್ ಆದ ಮೇಲೂ ನಟರಾಜ್ ತನ್ನ ಲ್ಯಾಂಡ್ ರಾಬರಿ ನಿಲ್ಲಿಸಲಿಲ್ಲ, ಏಕೆಂದರೆ ಸ್ವತಃ ಅಶೋಕ್ ಈತನ ರಿಯಲ್ ಎಸ್ಟೇಟ್ ದಂಧೆಯ ಪಾಲುದಾರ. ತಾನು ರೆಡ್ಡಿ ಅಂತ ಹೇಳಿಕೊಳ್ಳುತ್ತಾನಾದರೂ ಜನ್ಮತಃ ಈತ ರೆಡ್ಡಿಯಲ್ಲ. ಸಾರಕ್ಕಿಯ ಹಳೇ ತಲೆ ಕೃಷ್ಣಾ ರೆಡ್ಡಿ ಮತ್ತು ನಂಜಮ್ಮ ದಂಪತಿಗಳಿಗೆ ನಟರಾಜ್ ಸಾಕುಮಗನಷ್ಟೆ. ಶುರುವಿನಲ್ಲಿ ನಾಲ್ಕು ಹಸುಗಳನ್ನಿಟ್ಟಿದ್ದ. ಮನೆಮನೆಗೆ ಸುತ್ತಿ ಹಾಲು ಹಾಕುತ್ತಿದ್ದ.

ಹೀಗೆ ಹುಟ್ಟಿಕೊಂಡ ನಟರಾಜ ಬನಶಂಕರಿ ಸುತ್ತಮುತ್ತಲ ಖತರ್‌ನಾಕ್ ನೆಲಕಂಟಕನಾದ ಖಾಲಿ ಸೈಟಿಗೆ ಬೇಲಿ ಹಾಕುವ ಕಸುಬಿನ ರಕ್ಷಣೆಗೆಂದೇ ಆಗ ಉತ್ತರಹಳ್ಳಿಗೆ ಶಾಸಕರಾಗಿದ್ದ ಅಶೋಕ್ ಕಾಲಿಗೆ ಬಿದ್ದ ನಟರಾಜ್ ಮುಂದೆ ಅಶೋಕ್ ಮುಂದಿಟ್ಟುಕೊಂಡೇ ಅನಾಹುತಕಾರಿಯಾಗಿ ಬೆಳೆದ. ಸಾರಕ್ಕಿ ಸುತ್ತಮುತ್ತ ಸರಿಸುಮಾರು 45 ಲಿಟಿಗೇಷನ್ ಆಸ್ತಿಗಳಿಗೆ ವಕ್ಕರಿಸಿ ಒಂದೇ ಸೈಟನ್ನು ನಾಲ್ಕಾರು ಜನಕ್ಕೆ ಮಾರಿ ಹಾಕಿದ್ದ.

ಈತನ ರಿಯಲ್ ಎಸ್ಟೇಟ್ ಚಾಕಚಕ್ಯತೆ ಯನ್ನು ಕಂಡೇ ಕೌನ್ಸಿಲರ್‌ಗಿರಿಗೆ ಬಿಜೆಪಿ ಟಿಕೆಟ್ ಕೊಡಿಸಿದ ಅಶೋಕ್ ತಾವೇ ಓಡಾಡಿ ಗೆಲ್ಲಿಸಿಕೊಂಡರು. ಕೌನ್ಸಿಲರ್ ಆಗಿದ್ದೇ ತಡ, ಯಾರ‍್ಯಾರು ಮನೆ ಕಟ್ಟಿಸುತ್ತಾರೋ ಅಂಥವರ ವಿರುದ್ಧ ಪಾಲಿಕೆ ಇಂಜಿನಿಯರ್‌ಗಳನ್ನು ಛೂಬಿಟ್ಟು ರೊಕ್ಕ ವಸೂಲಿ ಮಾಡುತ್ತಿದ್ದ. ಕೊನೆಕೊನೆಗೆ ನಟರಾಜನ ಕಾಟಕ್ಕೆ ಬೇಸತ್ತೇ ಬಂದ ಪಾಲಿಕೆ ಇಂಜಿನಿಯರ್‌ಗಳೆಲ್ಲ ಮೂರೋ ಆರೋ ತಿಂಗಳಲ್ಲೇ ವರ್ಗಾ ಮಾಡಿಸಿಕೊಂಡು ಜಾಗ ಖಾಲಿ ಮಾಡುತ್ತಿದ್ದರು.

ಬನಶಂಕರಿ ದೇವಸ್ಥಾನದ ಎದುರಿಗೇ ತಾರಾ ಮಂಡಲ ಗೃಹನಿರ್ಮಾಣ ಸಹಕಾರ ಸಂಘದ ಐದೆಕರೆ ಜಮೀನಿತ್ತು. ಅದೂ ಕೂಡ ಬಿಡಿಎ ಜಾಗವೇ. ಅದನ್ನು ಸೊಸೈಟಿಯ ಖದೀಮರ ಜೊತೆ ಸೇರಿ ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿದ ನಟರಾಜ್‌ಗೆ ಈ ಒಂದೇ ಡೀಲಿನಿಂದ ಗಿಟ್ಟಿದ್ದು ಹತ್ತು ಕೋಟಿ!

ಇಷ್ಟೆಲ್ಲ ಭೂದಕಾಯಿತಿಗೆ ಮಂತ್ರಿ ಅಶೋಕ್‌ರನ್ನೇ ಮುಂದಿಟ್ಟುಕೊಂಡು ಹಾವಳಿಯಿಟ್ಟ ನಟರಾಜ್ ಗೆದ್ದು ಬಂದದ್ದು ಕೂಡ ಇಂಥ ಲ್ಯಾಂಡ್ ರಾಬರಿಯ ರೊಕ್ಕದಿಂದಲೇ. ವಿಶೇಷವೆಂದರೆ ಹೀಗೆ ದೋಚಿದ್ದನ್ನು ನಟರಾಜ್ ತಾನೊಬ್ಬನೇ ತಿನ್ನಲಿಲ್ಲ. ಅರ್ಧಪಾಲನ್ನು ಪ್ರಾಮಾಣಿಕವಾಗಿ ಅಶೋಕ್‌ಗೆ ಸಲ್ಲಿಸುತ್ತಿದ್ದ. ಇಂಥ ನಿಯತ್ತಿಗಂದೇ ಅಶೋಕ್ ಈಗ ಈತನನ್ನು ಮೇಯರ್ ಮಾಡಲು ಹೊರಟಿದ್ದಾರೆ.

ಹೊಡೆದ ಕೊಳ್ಳೆಯಲ್ಲಿ ನಿಯತ್ತಾಗಿ ಪಾಲನ್ನು ಸಲ್ಲಿಸುತ್ತಾನೆಂಬುದನ್ನು ಬಿಟ್ಟರೆ ನಟರಾಜ್‌ಗೆ ಬೇರೆ ಯಾವ ಯೋಗ್ಯತೆಯಿದೆ?

ವಿದ್ಯಾವಂತನಲ್ಲ, ಸಭ್ಯನಲ್ಲ, ದೇಶಕ್ಕಾಗಿ ಪ್ರಾಣಕೊಟ್ಟ ಕುಟುಂಬದವನಲ್ಲ, ಬೆಂಗಳೂರಿನ ಒಳಿತಿಗಾಗಿ ನಯಾಪೈಸೆಯ ಕೆಲಸ ಮಾಡಿಲ್ಲ, ಜನತೆಗಾಗಿ ಯಾವತ್ತೂ ಬೀದಿಗಿಳಿದವನಲ್ಲ, ಸೈಟು ದೋಚಿದ್ದು, ಪಾರ್ಕು, ಆಟದ ಮೈದಾನಕ್ಕೆಂದು ಮೀಸಲಿಟ್ಟಿದ್ದ ಜಮೀನು ದೋಚಿದ್ದು ಬಿಟ್ಟರೆ ನಟರಾಜ್‌ಗೆ ಮೇಯರ್ ಆಗುವ ಯಾವ ಅರ್ಹತೆಯಿದೆ?

ಇಂಥವನನ್ನು ಮೇಯರ್ ಮಾಡಿ ಅಶೋಕ್ ಇನ್ನಷ್ಟು ದೋಚಬಹುದೇ ಹೊರತು ಬೆಂಗಳೂರಿಗಂತೂ ಕವಡೆಕಾಸಿನ ಪ್ರಯೋಜನವಿಲ್ಲ, ಹಾಗೊಮ್ಮೆ ನಟರಾಜ್ ಮೇಯರ್ ಆಗಿದ್ದೇ ಆದರೆ ಆತ ಬೆಂಗಳೂರಿನ ಮೊಟ್ಟಮೊದಲ ರಿಯಲ್ ಎಸ್ಟೇಟ್ ಮೇಯರ್ ಮಾತ್ರ.

ಬೆಂಗಳೂರಿಗೆ ಉಳಿಗಾಲವುಂಟಾ? ನೆಲಗಳ್ಳ ರೆಡ್ಡಿಗಳ ಕೈಗೆ ಬೆಂಗಳೂರೇನಾದರೂ ಸಿಲುಕಿತೆಂದರೆ ಕೆಂಪೇಗೌಡರ ಆತ್ಮ ನರಳದೇ ಇರುತ್ತಾ?

• ರಾ. ಸೋಮನಾಥ
ra.somanath2010@gmail.com

ಗಾಡ್‌ಮದರ್ ಕರಂದ್ಲಾಜೆ ಮತ್ತು ಹಳೇ ಹುಲಿ ನಂಜುಂಡಪ್ಪ


ಬಿಜೆಪಿಯೊಳಗೇ ರೆಡ್ಡಿ ವರ್ಸಸ್ ಗೌಡ ಎಂಬ ವಿಲಕ್ಷಣ ಲಾಬಿಯೊಂದು ಮೇಯರ್‌ಗಿರಿ ಸುತ್ತ ಹೆಡೆಯೆತ್ತಿದೆ. ಅಶೋಕ್ ರೆಡ್ಡಿಗಳ ಪರವಾದರೆ ಗೌಡರ ಪಾಲಿಗೆ ಶೋಭಾ ಕರಂದ್ಲಾಜೆಯೇ ಗಾಡ್‌ಮದರ್!

ಯಾವತ್ತು ಸಾರಕ್ಕಿ ನಟರಾಜ್ ಬೆನ್ನಿಗೆ ಅಶೋಕ್ ನಿಂತಿದ್ದಾರೆಂಬುದು ಬಟ್ಟಂಬಯಲಾಯಿತೋ ಬಿಜೆಪಿಯ ಪಕ್ಕಾ ಗೌಡರೆಲ್ಲ ಕರಂದ್ಲಾಜೆಯನ್ನು ಮುಂದಿಟ್ಟುಕೊಂಡು ಲಾಬಿಗಿಳಿದಿದ್ದಾರೆ. ಸದ್ಯ ಇಂಥ ಪಕ್ಕಾ ಗೌಡರ ಲಾಬಿಯ ನೇತೃತ್ವ ವಹಿಸಿರುವುದು ಜೆ.ಪಿ. ಪಾರ್ಕ್‌ನ ಕೌನ್ಸಿಲರ್ ಬಿ.ಆರ್. ನಂಜುಂಡಪ್ಪ. ಕರಂದ್ಲಾಜೆ ಕೂಡ ಅಶೋಕ್ ಬಾಲ ಕತ್ತರಿಸಲೆಂದು ನಂಜುಂಡಪ್ಪನವರ ಬೆನ್ನಿಗೆ ನಿಂತಿದ್ದಾರೆ. ಜೊತೆಗೆ ರಾಜರಾಜೇಶ್ವರಿ ಕ್ಷೇತ್ರದ ಎಮ್ಮೆಲ್ಲೆ ಮತ್ತು ಮಾಜಿ ಸಂಸದ ಎಂ. ಶ್ರೀನಿವಾಸ್ ಕೂಡ ನಂಜುಂಡಪ್ಪ ಪರ ಲಾಬಿಗಿಳಿದಿದ್ದಾರೆ. ಏಕೆಂದರೆ ನಂಜುಂಡಪ್ಪ ಪಕ್ಕಾ ಶ್ರೀನಿವಾಸ್ ಅನುಯಾಯಿ. ಅಶೋಕ್ ಕಂಡೊಡನೆ ಮೇಲುನೋಟಕ್ಕಷ್ಟೇ ವಿಶ್ವಾಸ ನಟಿಸುವ ಶ್ರೀನಿವಾಸ್ ಕೂಡ ಒಳಗೊಳಗೇ ಅಶೋಕ್ ಕಡುವೈರಿ. ಬಿಜೆಪಿಯ ಮತ್ತೊಬ್ಬ ನಾಯಕ ರಾಮಚಂದ್ರಗೌಡರಿಗೂ ರೆಡ್ಡಿ ಪಾಳಯದ ನಟರಾಜ್ ಮೇಯರ್ ಆಗುವುದು ಇಷ್ಟವಿಲ್ಲ.

ಇಂಥ ಪಕ್ಕಾ ಗೌಡರ ಸಿಂಡಿಕೇಟನ್ನು ಬಳಸಿಕೊಂಡು ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿಯ ಕಾಲಿಗೆ ಬಿದ್ದು ಮೇಯರ್ ಆಗುವುದು ನಂಜುಂಡಪ್ಪನವರ ಕಾರ್ಯತಂತ್ರ. ಹಾಗೆ ನೋಡಿದರೆ ನಂಜುಂಡಪ್ಪ ಬೇರೆಲ್ಲ ಕೌನ್ಸಿಲರ್‌ಗಳಿಗಿಂತಲೂ ಹಳಬ ಮತ್ತು ಅನುಭವಿ. ಯಶವಂತಪುರದ ಜಮೀನ್ದಾರ ಬಂಡಪ್ಪನ ವಂಶಸ್ಥರ ಪೈಕಿ ಅರ್ಧ ಡಜನ್ನಿನಷ್ಟು ಕೌನ್ಸಿಲರ್‌ಗಳಾಗಿದ್ದಾರೆ. ಇವರ‍್ಯಾರಿಗೂ ಸಿಕ್ಕದ ಗೌರವ ಮತ್ತು ಜನಮನ್ನಣೆ ಗಳಿಸಿಕೊಂಡದ್ದು ನಂಜುಂಡಪ್ಪ ಮಾತ್ರ. ಸಾರಕ್ಕಿ ನಟರಾಜ್ ಥರದ ರಿಯಲ್ ಎಸ್ಟೇಟ್ ಗಿರಾಕಿಗಳಿಗಿಂತ ನಂಜುಂಡಪ್ಪನಂಥ ಸಭ್ಯರು ಮೇಯರ್ ಗಾದಿಗೆ ಗೌರವ ತರಬಲ್ಲರು ನಿಜ. ಆದರೆ ಅಶೋಕ್‌ಗಿದು ಸಮ್ಮತವಾಗಬೇಕಲ್ಲ?

ಅಶೋಕ್‌ಗೇನಿದ್ದರೂ ರಿಯಲ್ ಎಸ್ಟೇಟ್ ಖದೀಮರೇ ಬೇಕು!

ಕಟ್ಟೆ ಸತ್ಯನ ಕೆಟ್ಟ ಗಳಿಗೆ




ಸದ್ಯ ಮೇಯರ್ ಆಕಾಂಕ್ಷಿಗಳ ಪೈಕಿ ಇದ್ದುದರಲ್ಲಿ ನಿರುಪದ್ರವಿಯೆಂದರೆ ಆತ ಬಸವನಗುಡಿಯ ಕೌನ್ಸಿಲರ್ ಕಟ್ಟೆ ಸತ್ಯ!

ಆ ಮಟ್ಟದ ಉಪಟಳಕಾರಿಯಲ್ಲ. ದೊಡ್ಡದೊಡ್ಡ ಡೀಲು ಗೊತ್ತಿಲ್ಲ. ಕೋಟಿ ಗಟ್ಟಲೇ ಸುರಿದು ಕೋಟಿಕೋಟಿ ಎತ್ತುವ ಚಾಲಾಕಿತನ ಕೂಡ ಇಲ್ಲ. ಸತ್ಯನ ದುರಂತವೆಂದರೆ ಇಂಥ ಸಜ್ಜನಿಕೆ, ಸರಳತೆಗಳ‍್ಯಾವುದಕ್ಕೂ ಸದ್ಯ ಬಿಜೆಪಿಯಲ್ಲಿ ಜಾಗವಿಲ್ಲ.

ಬೃಹತ್ ಬೆಂಗಳೂರಿನ ವರ್ಷದ ಬಜೆಟ್ಟೇ ಕನಿಷ್ಠ ಮೂರೂವರೆ ಸಾವಿರ ಕೋಟಿಯಾಗುತ್ತದೆ. ಇದರಲ್ಲಿ ಅರ್ಧಕ್ಕರ್ಧ ಬೋಗಸ್ ಬಿಲ್ ದಂಧೆಕೋರರ ಪಾಲಾಗುತ್ತದೆ. ಒಂದೆಡೆ ಕಟ್ಟಾ ಗ್ಯಾಂಗ್, ಮತ್ತೊಂದೆಡೆ ಅಶೋಕ್ ಪಟಾಲಂ, ಮಗದೊಂದೆಡೆ ಕರಂದ್ಲಾಜೆ, ಅನಂತ್ ಚೆಟಾಲಿಯನ್ನುಗಳನ್ನು ತೃಪ್ತಿಪಡಿಸಿ, ತಾನೂ ತಿಂದು ಕಂಟ್ರಾಕ್ಟರುಗಳನ್ನೂ ತಿನ್ನಲು ಬಿಟ್ಟು ಸಕಲರಿಗೂ ಪಾಲು ಎತ್ತಿಡಬೇಕೆಂದರೆ ಅದಕ್ಕೆ ಸತ್ಯನಂಥವರು ನಾಲಾಯಕ್ಕಾಗುತ್ತಾರೆ. ಜಾತಿಯಲ್ಲಿ ಬ್ರಾಹ್ಮಣ ಬೇರೆ. ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ ಕೂಡ ಸತ್ಯನ ಬೆನ್ನಿಗಿಲ್ಲ. ಸತ್ಯನ ಹೆಸರಷ್ಟೇ ಮೇಯರ್ ರೇಸಿಗೆ ಕೇಳಬರಬಹುದಷ್ಟೇ ಹೊರತು ಯಾವೊಬ್ಬ ನಾಯಕರಿಗೂ ಇಂಥವರು ಬೇಕಿಲ್ಲ.

ಗಂಗಬೈರಯ್ಯನ ಮಂಗಾಟ

ನನ್ನನ್ನು ಬಿಟ್ಟರೆ ಮೇಯರ್ ಆಗೋ ಯೋಗ್ಯತೆ ...ಾರಿಗಿದೆ? ನಾನೇ ಸೀನಿಯರ್ ಮೋಸ್ಟ್. ಜಾತಿಯಲ್ಲಿ ...ಕ್ಕಲಿಗ, ಗೆದ್ದಿರೋದು ರಾಜ್‌ಕುಮಾರ್ ವಾರ್ಡಿನಿಂದ. ...ಪ್ಪ ರಾಜ್‌ಕುಮಾರ್ ಮೇಲಿನ ಗೌರವಕ್ಕಾದರೂ ನನ್ನನ್ನು ...ೇಯರ್ ಮಾಡಲೇಬೇಕು....!


ಗಂಗಬೈರಯ್ಯ

ಇದು ಗಂಗಭೈರಯ್ಯನೆಂಬ ಮುದಿ ಪತಿವ್ರತೆಯ ಪ್ರಲಾಪ. ಆದಿಚುಂಚನಗಿರಿ ಸ್ವಾಮಿ ಕಾಲಿಗೆ ಬಿದ್ದ ಮಾತ್ರಕ್ಕೋ ಅಥವಾ ರಾಜ್‌ಕುಮಾರ್ ಹೆಸರಿನ ವಾರ್ಡಿನಿಂದ ಗೆದ್ದ ...ಬ ಕಾರಣಕ್ಕೋ ಯಾರು ಯಾರನ್ನೂ ಮೇಯರ್ ...ಾಡುವುದಿಲ್ಲ ಎಂಬ ಕಾಮನ್‌ಸೆನ್ಸ್ ಕೂಡ ...ದ್ದಂತಿಲ್ಲ.

ಇಲ್ಲಿಗೆ ಎರಡು ವರ್ಷದ ಹಿಂದಷ್ಟೇ ಜೈಮುನಿರಾವ್ ...ಲ್ಲಿನ ಭಕ್ತ ಆಂಜನೇಯಸ್ವಾಮಿ ದೇವಸ್ಥಾನದ ...ಮುದಾಯ ಭವನ ಕಟ್ಟಿಸುತ್ತೇನೆಂದು ಸಂಸದ ...ನಂತ್‌ಕುಮಾರ್‌ರ ಕ್ಷೇತ್ರ ಅಭಿವೃದ್ಧಿ ನಿಧಿಯಿಂದ ...ಲ್ಲೂಕಾಲು ಲಕ್ಷ ರೂಪಾಯಿ ಮಂಜೂರು ...ಾಡಿಸಿಕೊಂಡ. ಬಂದ ದುಡ್ಡನ್ನೆಲ್ಲ ಕಂಟ್ರಾಕ್ಟರ್ ...ಸಿಂಹಮೂರ್ತಿ ಹೆಸರಲ್ಲಿ ತಾನೇ ನುಂಗಿಬಿಟ್ಟ. ಹೇಗೋ ...ದು ದೇವಸ್ಥಾನದ ಟ್ರಸ್ಟಿಗಳಿಗೆ ಗೊತ್ತಾಯಿತು. ಇನ್ನೆಲ್ಲಿ ...ನ್ನ ವಿರುದ್ಧ ವಂಚನೆ ಕೇಸಾಗಿ ಜೈಲು ...ಲಾಗಬೇಕಾಗುತ್ತೋ ಎಂದು ಹೆದರಿದ ಗಂಗಬೈರಯ್ಯ ...ನೆಗೆ ಟ್ರಸ್ಟಿಗಳೆಲ್ಲರ ಕಾಲಿಗೆ ಬಿದ್ದು ತನ್ನದು ತಪ್ಪಾಯ್ತು ...ಂದು ತಪ್ಪೊಪ್ಪಿಗೆ ಪತ್ರ ಬರಕೊಟ್ಟು ಮಾಡಿದ ತಪ್ಪಿಗೆ ...ಡು ಲಕ್ಷ ರೂಪಾಯಿ ದಂಡವನ್ನೂ ಕಟ್ಟಿದ. ಸದ್ಯ ...ಗಬೈರಯ್ಯ ಬರಕೊಟ್ಟಿದ್ದ ತಪ್ಪೊಪ್ಪಿಗೆ ಪತ್ರದ ಪ್ರತಿಗಳು ...ಸರವಳ್ಳಿಯ ಪ್ರಮುಖರೆಲ್ಲರ ಬಳಿಯೂ ಇಟ್ಟಾಡುತ್ತಿದೆ.


ಇಂಥವನನ್ನು ಮೇಯರ್ ಮಾಡಿದರೆ ಈತ ...ರಕೊಟ್ಟಿದ್ದ ಪತ್ರವೊಂದೇ ಮೇಯರ್ ಗಾದಿಯ ಮಾನ ...ಯುತ್ತದೆ. ಸಾಲದ್ದಕ್ಕೆ ದಾಸರಹಳ್ಳಿ ಕೆರೆ ಭೂಮಿ ...ಳಿಕೆ, ರಹೇಜಾ ಅಪಾರ್ಟ್‌ಮೆಂಟ್ ಹಿಂಭಾಗದ ...ಜಾಕಾಲುವೆ ಸ್ವಾಹಾ ಇತ್ಯಾದಿಗಳಲ್ಲೂ ಗಂಗಬೈರಯ್ಯ ...ಗಳ್ಳರ ಜೊತೆ ಕೈಜೋಡಿಸಿದ್ದು ಇಡೀ ರಾಜಾಜಿನಗರಕ್ಕೆ ...ತ್ತಾಗಿದೆ. ಸ್ವತಃ ಸೋಮಣ್ಣನಿಗೇ ಗಂಗಬೈರಯ್ಯನಿಗೆ ...ಟ್ ಕೊಡುವುದು ಇಷ್ಟವಿರಲಿಲ್ಲ. ಅನಂತ್, ...ಮುಚುಂದ್ರಗೌಡ, ಸುರೇಶ್‌ಕುಮಾರ್ ಇತ್ಯಾದಿ ಯಾವೊಬ್ಬ ...ಜೆಪಿ ನಾಯಕನಿಗೂ ಈತ ಮೇಯರ್ ಆಗುವುದು ...ಕಿಲ್ಲ. ಹಾಗಿದ್ದೂ ತನ್ನನ್ನು ಮೇಯರ್ ಮಾಡುವಂತೆ ...ಬಿಗಿಳಿದ ಗಂಗಬೈರಯ್ಯನ ದುರಾಸೆಗೆ ಏನೆನ್ನಬೇಕು?

ಕಡೂರು: ಅಧಿಕಾರಿಗಳ ಹೊಣೆಗೇಡಿತನಕ್ಕೆ ಹೆಣ್ಣುಮಗಳ ಬಲಿ


ಗೀತಾಬಾಯಿ

ನಿರ್ಲಜ್ಜ ಹೊಣೆಗೇಡಿ ಸರಕಾರಿ ಅಧಿಕಾರಿಗಳ ಕಪಟತನದ ಪರಿಣಾಮ ಹೆಣ್ಣು ಮಗಳೊಬ್ಬಳು ಬಲಿಯಾಗಿದ್ದಾಳೆ. ನೋಡುವುದಕ್ಕದು ಆತ್ಮಹತ್ಯೆಯೇ ಆದರೂ ನಿಜಾರ್ಥದಲ್ಲಿ ಅದೊಂದು ಕಗ್ಗೊಲೆಯೆಂದೇ ಹೇಳಬೇಕು. ಅಮಾಯಕ ಮಹಿಳೆಯೊಬ್ಬಳಿಗೆ ಉಸಿರುಗಟ್ಟಿಸುವ ವಾತಾವರಣ ಸೃಷ್ಟಿಸಿ, ಮೇಲಿಂದ ಮೇಲೆ ಅವಮಾನ ಮಾಡಿ ಬದುಕನ್ನೇ ದುಸ್ತರಗೊಳಿಸಿ ನೇಣಿಗೆ ಕೊರಳೊಡ್ಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರೆ ಅದು ಆತ್ಮಹತ್ಯೆ ಹೇಗಾಗುತ್ತದೆ? ಮೊನ್ನೆ ಕಡೂರಿನಲ್ಲಿ ನಡೆದದ್ದೂ ಇದೆ.

ಆ ಮುಗ್ಧ ಹೆಂಗಸಿನ ಹೆಸರು ನೇತ್ರಾವತಿ ಅಲಿಯಾಸ್ ರತ್ನಮ್ಮ. ದಲಿತ ಮಹಿಳೆ. ಮೂಲತಃ ಕಡೂರು ತಾಲ್ಲೂಕು ಯಗಟಿ ಎಂಬಲ್ಲಿನ ವಡೇರಹಳ್ಳಿ ಗ್ರಾಮದವಳಾದ ಆಕೆ ಕಳೆದ ನಾಲ್ಕು ವರ್ಷಗಳಿಂದ ಬೆಂಗಳೂರಿನಲ್ಲಿ ಯಾವುದೋ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಬೆವರು ಹರಿಸುತ್ತಾ ಬದುಕಿಕೊಂಡಿದ್ದಳು. ಎಷ್ಟೇ ಕಷ್ಟಗಳು ಎದುರಾದರೂ ವಡೇರಹಳ್ಳಿಯಲ್ಲಿ ತನಗೆ ಪಿತ್ರಾರ್ಜಿತವಾಗಿ ದಕ್ಕಿದ್ದ ತುಂಡು ಭೂಮಿಯನ್ನು ಮಾತ್ರ ಆಕೆ ಮಾರಿರಲಿಲ್ಲ. ಆದರೆ, ಇದನ್ನು ಹೇಗಾದರೂ ಮಾಡಿ ನುಂಗಿನೀರುಕುಡಿಯಬೇಕೆಂದು ಸಹೋದರ ಅಶೋಕ್ ಕುಮಾರ್ ಸಂಚು ರೂಪಿಸುತ್ತಲೇ ಇದ್ದ. ಜಲಾನಯನ ಇಲಾಖೆ ಅಧಿಕಾರಿಗಳ ಜೊತೆಗೆ ಶಾಮೀಲಾಗಿ ಆತ ನೇತ್ರಾವತಿಯ ಸುಪರ್ದಿಯಲ್ಲಿದ್ದ ಹೊಲದಲ್ಲಿ ನೀರು ಹರಿಯದಂತೆ ಅಕ್ರಮವಾಗಿ ತಡೆಗೋಡೆ ನಿರ್ಮಿಸಲು ಹೊರಟಿದ್ದ.


ಕೃಷ್ಣಮೂರ್ತಿ

ಇದೇ ವೇಳೆಯಲ್ಲಿ ಅಚಾನಕ್ಕಾಗಿ ಬೆಂಗಳೂರಿನಿಂದ ವಡೇರಹಳ್ಳಿಗೆ ಬಂದ ನೇತ್ರಾವತಿ ಇದನ್ನೆಲ್ಲಾ ನೋಡಿ ದಂಗಾಗಿಹೋದಳು. ನೆರೆಹೊರೆಯವರನ್ನು ವಿಚಾರಿಸಿ ಸತ್ಯಾಂಶ ತಿಳಿದುಕೊಂಡಳು. ಹಾಗೆಯೇ, ನೇರವಾಗಿ ಅಶೋಕ್ ಕುಮಾರ್ ಬಳಿಗೆ ತೆರಳಿ ತನ್ನ ಗಮನಕ್ಕೆ ಬಾರದಂತೆ ಈ ರೀತಿ ಮಾಡುತ್ತಿರುವುದು ಸರಿಯಲ್ಲ ಅಂತ ಧಮಕಿ ಹಾಕಿದಳು. ತನಗೇನೂ ಗೊತ್ತಿಲ್ಲದವನಂತೆ ನಾಟಕವಾಡಿದ ಅಶೋಕ್ ಕುಮಾರ್ 'ತನಗೂ ಅದಕ್ಕೂ ಸಂಬಂಧವಿಲ್ಲ, ಬೇಕಿದ್ದರೆ ಇಲಾಖೆಯ ಅಧಿಕಾರಿಗಳನ್ನು ವಿಚಾರಿಸಿಕೋ' ಅಂದಿದ್ದ. ಮಾತಿಗೆ ಮಾತು ಬೆಳೆದು, ಜಗಳವಾಗಿ ಅದು ಪೋಲಿಸ್ ಠಾಣೆ ಮೆಟ್ಟಲೇರಿತು. ಪಂಚನಹಳ್ಳಿ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಗೀತಾಬಾಯಿ ನೇತ್ರಾವತಿಯ ಮನೆಗೆ ಬಂದವಳೇ ಮನಬಂದಂತೆ ಅವಾಚ್ಯ ಶಬ್ದಗಳನ್ನು ಬಳಸಿ ಯದ್ವಾತದ್ವಾ ಮಾತನಾಡಿ ಬಿಟ್ಟಳು. ತಾಳ್ಮೆ ಕಳೆದುಕೊಂಡ ನೇತ್ರಾವತಿಯೂ ಸಬ್‌ಇನ್ಸ್‌ಪೆಕ್ಟರ್ ಗೀತಾಬಾಯಿಯ ಮೇಲೆಯೂ ಎಗರಾಡಿದಳು. ಅಷ್ಟು ಹೊತ್ತಿಗಾಗಲೇ ಗ್ರಾಮಸ್ಥರು ನೆರೆದರು. ತನಗಿದ್ದ ಪೊಲೀಸ್ ಅಧಿಕಾರವನ್ನು ಬಳಸಿಕೊಂಡ ಗೀತಾಬಾಯಿ ಸಾರ್ವಜನಿಕವಾಗಿಯೇ ನೇತ್ರಾವತಿಗೆ ಲಾಠಿಯಿಂದ ಬಡಿದುಹಾಕಿ, ಠಾಣೆಗೆ ಎಳೆದೊಯ್ದಳು. ಮತ್ತೆ ಅಲ್ಲಿ ಬೆನ್ನಿನ ಮೇಲೆ ಬೆತ್ತದ ರುಚಿ.

ವಾಸ್ತವದಲ್ಲಿ ಸೂಕ್ಷ್ಮ ಮನಸ್ಸಿನ ನೇತ್ರಾವತಿಗೆ ಅಷ್ಟು ಸಾಕಿತ್ತು. ಹೇಳಿಕೇಳಿ ಮಾನಮರ್ಯಾದೆಗೆ ಅವಶ್ಯಕತೆಗಿಂತ ಜಾಸ್ತಿ ಅಂಜುವ ಆಕೆಗೆ ಹೀಗೆ ಸಾರ್ವಜನಿಕವಾಗಿ ಅವಮಾನಗೊಂಡದ್ದನ್ನು ಅರಗಿಸಿಕೊಳ್ಳಲಾಗಲಿಲ್ಲ. ಠಾಣೆಯಿಂದ ಮಂಕು ಮುಖಹೊತ್ತು ಮನೆಯೆಡೆಗೆ ಸಾಗಿದಳು. ಮನೆ ತಲುಪಿ ಭವಿಷ್ಯದ ಬಗ್ಗೆ ಕಿಂಚಿತ್ತೂ ಯೋಚಿಸದೆ ಸೀಮೆಯೆಣ್ಣೆ ಸುರಿದುಕೊಂಡು ಬೆಂಕಿಹಚ್ಚಿಕೊಂಡುಬಿಟ್ಟಳು. ಅಕ್ಕಪಕ್ಕದ ಮನೆಯವರು ಏನಾಗುತ್ತಿದೆ ಎಂದು ಹೊರಬರುವಷ್ಟರಲ್ಲಿ ನೇತ್ರಾವತಿ ಕರಕಲಾಗಿಹೋಗಿದ್ದಳು.

ಗೀತಾಬಾಯಿ ನಾಪತ್ತೆಯಾಗಿದ್ದಳು

ನೇತ್ರಾವತಿ ಸಾವಿಗೀಡಾದ ಕೂಡಲೇ ಸಬ್‌ಇನ್ಸ್‌ಪೆಕ್ಟರ್ ಗೀತಾಬಾಯಿ ನಾಪತ್ತೆಯಾಗಿದ್ದಳು. ಈಕೆ ಪೊಲೀಸ್ ಇಲಾಖೆಗೆ ಸೇರಿ ಎರಡು ಮೂರು ತಿಂಗಳು ಕಳೆದಿತ್ತಷ್ಟೆ. ಇನ್ನೂ ಇಲಾಖೆಯ ಒಳಹೊರಗುಗಳು, ಜನರೊಂದಿಗೆ ವರ್ತಿಸಬೇಕಾದ ವಿಧಾನ, ಸೂಕ್ಷ್ಮ ವಿಚಾರಗಳನ್ನು ನಿಭಾಯಿಸಬೇಕಾದ ಪರಿ - ಯಾವೂ ಗೊತ್ತಿರದ ಬಾಲೆ. ಹೀಗೆ ಇಲಾಖೆಗೆ ಕಾಲಿಡುತ್ತಲೇ ಅವಘಡ ಸೃಷ್ಟಿಸಿಕೊಂಡ ಗೀತಾಬಾಯಿ ಬೇರೆ ದಾರಿಕಾಣದೇ ಭೂಗತಳಾಗಿಬಿಟ್ಟಳು.

ಆದರೆ ಹಿರಿಯ ಪೊಲೀಸ್ ಅಧಿಕಾರಿಗಳು ಮಾತ್ರ ಜನರನ್ನು ದಿಕ್ಕು ತಪ್ಪಿಸಲು ಏನು ಬೇಕೋ ಅದನ್ನು ಮಾಡತೊಡಗಿದ್ದರು. ಒಬ್ಬ ಅಧಿಕಾರಿ ಗೀತಾಬಾಯಿಯನ್ನು ಕಡ್ಡಾಯ ರಜೆ ಮೇಲೆ ಕಳಿಸಲಾಗಿದೆ ಎಂದು ಪುಂಗಿ ಊದಿದರೆ ಇನ್ನೊಬ್ಬ ಅಧಿಕಾರಿ ಆಕೆಯನ್ನು ಅಮಾನತು ಮಾಡಲಾಗಿದೆ ಅಂತ ರೈಲು ಬಿಟ್ಟ. ಆದರೆ, ನೇತ್ರಾವತಿ ಸತ್ತು ಒಂದೇ ವಾರ ಕಳೆಯುವುದರೊಳಗಾಗಿ ಪಂಚನಹಳ್ಳಿ ಪೊಲೀಸ್ ಠಾಣೆಯಲ್ಲಿ ಗೀತಾಬಾಯಿ ಮತ್ತೆ ಪ್ರತ್ಯಕ್ಷವಾದಳು.

ಕಡೂರಿನ ಶಾಸಕ ಕೆ.ಎಂ. ಕೃಷ್ಣಮೂರ್ತಿ ಕೈ ಬಾಯಿ ಚೆನ್ನಾಗಿಟ್ಟಿರುವ ಮನುಷ್ಯ. ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಚಿಡ್ಡಿ ಶಾಸಕರಿಗಿಂತ ಉತ್ತಮನಾಗಿ ಕಾಣಿಸುತ್ತಿದ್ದಾರೆ. ಇವರ ಒಳ್ಳೆತನವನ್ನು ಹರಾಜಿಗಿಟ್ಟಿರುವ ಅಧಿಕಾರಿಗಳು ಮನಬಂದಂತೆ ನಡೆಯುತ್ತಿದ್ದಾರೆ. ಇನ್ನು ಮುಂದಾದರೂ ಅಧಿಕಾರಿಗಳಿಗೆ ಲಗಾಮು ತೊಡಿಸುವ ಕೆಲಸವನ್ನು ಕೃಷ್ಣಮೂರ್ತಿ ಮಾಡಬೇಕಿದೆ. ಗೀತಾಬಾಯಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಯುವಂತೆ ಮಾಡಬೇಕಿದೆ. ಇಲ್ಲದಿದ್ದರೆ ಅಧಿಕಾರಿಗಳಿಗೆ, ಪೊಲೀಸರಿಗೆ ಇದೊಂದು ಕೆಟ್ಟ ಮಾದರಿಯಾಗಿ ನಿಲ್ಲುತ್ತದೆ. ಆಗ ಅವರು ಆಡಿದ್ದೇ ಆಟ, ಮಾಡಿದ್ದೇ ಕಾನೂನು ಎಂಬಂತಾಗಿ ಅರಾಜಕತೆಯಲ್ಲಿ ಸಾಮಾನ್ಯ ಜನ ನರಳಬೇಕಾಗುತ್ತದೆ.

• ಅಜೀಜ್ ಕಿರುಗುಂದ

ಮರಿಗೌಡನೂ ಹೊಣೆಗಾರ

ಅಸಲಿಗೆ ಸಬ್‌ಇನ್ಸ್‌ಪೆಕ್ಟರ್ ಗೀತಾಬಾಯಿ ಎಂಟ್ರಿಯಾಗುವ ಎಷ್ಟೋ ಮೊದಲು ಇಂತಹ ದುರಂತ ಅಂತ್ಯಕ್ಕೆ ಮುನ್ನುಡಿ ಬರೆದವನು ಎಂದರೆ ಜಲಾನಯನ ಇಲಾಖೆಯ ಅಧಿಕಾರಿ ಮರಿಗೌಡ. ಎಲ್ಲಾ ರೀತಿಯ ಕಾನೂನು, ನೀತಿನಿಯಮಗಳನ್ನು ಗಾಳಿಗೆ ತೂರಿ ಕೇವಲ ದುಡ್ಡಿನಾಸೆಗೆ ಏನು ಬೇಕಾದರೂ ಮಾಡುವುದಕ್ಕೆ ಹೇಸದ ಈತ ತನ್ನ ಕುಕೃತ್ಯಗಳಿಂದಾಗಿಯೇ ಹೆಸರುವಾಸಿಯಾಗಿದ್ದಾನೆ. ಆತನ ಸಾಧನೆಗಳ ಕಿರೀಟಕ್ಕೆ ಈಗ ನೇತ್ರಾವತಿಯ ಆತ್ಮಹತ್ಯೆ ಕೂಡ ಸೇರಿಕೊಂಡಿದೆ.

ನೇತ್ರಾವತಿಯ ಹೊಲದಲ್ಲಿ ಕಾಮಗಾರಿ ನಡೆಸುವಾಗ ನಿಯಮದಂತೆ ನಡೆದುಕೊಂಡಿದ್ದರೆ ಆಕೆ ಬಲಿಯಾಗುತ್ತಿರಲಿಲ್ಲ. ಆತ ನೇತ್ರಾವತಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಆಕೆಯ ಗಮನಕ್ಕೆ ತಾರದೆ ಜಮೀನಿನ ದಾಖಲಾತಿ ನೋಡಿಕೊಳ್ಳದೇ ಕಾಮಗಾರಿ ನಡೆಸಿದ್ದ. ವಿಚಾರಿಸಲು ಹೋದವರಿಗೆ ಈ ಧರ್ಮಾತ್ಮ ಅವಿವೇಕಿ ಉಡಾಫೆ ಉತ್ತರ ನೀಡಿಯೇ ಕಳಿಸುತ್ತಿದ್ದ. ಈತ ಎಂತಹ ಅನಾಹುತಕಾರಿ ಮನುಷ್ಯನೆಂದರೆ ಇಡೀ ಜಲಾನಯನ ಇಲಾಖೆಯನ್ನೇ ತಿಂದು ತೇಗತೊಡಗಿದ್ದಾನೆ. ತನಗೆ ಬೇಕಾದವರಿಗೆ ನಿಯಮವನ್ನು ಪಾಲಿಸದೆ ಕಾಮಗಾರಿ ನಡೆಸಿದ್ದಾನೆ. ಇನ್ನು ಕೆಲವೆಡೆ ಕಾಮಗಾರಿ ನಡೆಸದೆ ಬಿಲ್ ಮಾಡಿದ್ದಾನೆ. ಇದರ ಪೂರ್ಣ ತನಿಖೆ ನಡೆದರೆ ಬಹುಶಃ ಮರಿಗೌಡ ಬೇಗ ಮನೆ ಸೇರುವುದರಲ್ಲಿ ಸಂಶಯವೇ ಇಲ್ಲ.



ರಗಳೆ ರಾಘವೇಶನ ನಕಲಿ ಸಿಡಿ ಅಸಲಿಯತ್ತೇನು?

ನಿತ್ಯಾನಂದ ಸ್ವಾಮಿಯ ಸೆಕ್ಸ್ ಸಿಡಿ ಹಗರಣ ಇನ್ನೂ ಆರಿಲ್ಲ, ಆಗಲೇ ರಾಘವೇಶ್ವರ ಸ್ವಾಮಿಯ ಸಿಡಿ ಹಗರಣ ಸ್ಫೋಟಿಸಿದೆ. ಈ ಸಿಡಿ ಕತೆಯನ್ನು ಸ್ವತಃ ಸ್ವಾಮೀಜಿಯೇ ಸೃಷ್ಟಿಸಿ ತನ್ನ ವಿರೋಧಿಗಳನ್ನು ಬಲಿ ಹಾಕಲು ಹೊರಟಿದ್ದಾರಾ ಅಥವಾ ಈ ಸಿಡಿ ನಕಲಿಯೋ, ಅಸಲಿಯೋ ಎಂಬ ಕತೆ ಇದು....

• ನಮೂತ

ಹವ್ಯಕ ಬ್ರಾಹ್ಮಣರ ಸ್ವಾಮಿ ರಾಘವೇಶ್ವರ ಭಾರತಿಯ ರಗಳೆ-ರಂಪಕ್ಕೀಗ ರಸಿಕತೆಯ ಆಯಾಮ ಬಂದುಬಿಟ್ಟದೆ! ಧರ್ಮಾಧಾರಿತ ದಂಧೆಗೆ ಗೋವು-ಗೋಕರ್ಣ ದೇವಸ್ಥಾನ ಬಂಡವಾಳ ಮಾಡಿಕೊಂಡು ಏಕ್‌ದಮ್ ಜಗದ್ವಿಖ್ಯಾತನಾಗಿದ್ದ ಈ ಲೌಕಿಕ ಸನ್ಯಾಸಿ ಈಗ ಸೆಕ್ಸ್ ಸಿಡಿ ಸಂಕಟಕ್ಕೆ ಬಿದ್ದು ಸುಸ್ತಾಗಿ ಹೋಗಿದ್ದಾನೆ. ಸಿಡಿ ಸತ್ಯವೋ? ಮಿಥ್ಯವೋ? ಆ ಮಾತು ಬೇರೆ. ಕಾವಿಧಾರಿಯೊಬ್ಬ ಇಂಥ ಕಾಮನೆಗಳ ಕೊಳಕು ಸಂಶಯ-ಅಪವಾದಕ್ಕೆ ಈಡಾಗುವುದಿದೆಯಲ್ಲ, ಅದು ಸುಮ್ಮನೆ ಮಾತಲ್ಲ! ಬೆಂಕಿಯಿಲ್ಲದೆ ಹೊಗೆ ಬರುತ್ತದಾ?

ರಾಘವೇಶ ಯತಿ ಧರ್ಮಕ್ಕೆ ಎಳ್ಳು ನೀರು ಬಿಟ್ಟು ಅದ್ಯಾವುದೋ ಕಾಲವಾಗಿ ಹೋಗಿದೆ! ಆತನ ಅಷ್ಟೂ ನಡವಳಿಕೆಗಳು ಕಾವಿ ತೊಟ್ಟುಕೊಂಡೇ ಕಾಸು ಕೂಡಿಸುವುದು, ಪುಢಾರಿಯಂತೆ ಪೋಸು ಕೊಡುವುದೇ ಸನ್ಯಾಸಿ ಪ್ರೊಫೈಲ್‌ನಂತಿರುತ್ತದೆ. ಸನ್ಯಾಸಿಯೊಬ್ಬ ಸರ್ಕಾರಿ ಬಲದಿಂದ ಅಸಹಾಯಕರೊಂದಿಗೆ ಮುಖಾಮುಖಿ ನಿಂತು ಆಸ್ತಿ-ಅಂತಸ್ತಿಗಾಗಿ ಗುದುಮುರಿಗೆ ನಡೆಸುವುದು ವಿಪರ್ಯಾಸವೇ ಸರಿ! ಮತ್ತೊಂದೆಡೆ ಈ ಸೋಗಲಾಡಿ ಸ್ವಾಮಿ ಮಲ್ಲಿಕಾ ಶರಾವತ್‌ಳಂಥ ಸೆಕ್ಸ್ ಬಾಂಬ್ ಜೊತೆ ಹಲ್ಲುಕಿಸಿಯುವುದು, ಹೆಂಗಳೆಯರೊಂದಿಗೆ ಶಿಷ್ಟಾಚಾರ-ಮುಜುಗರ ಮಡಿವಂತಿಕೆಯಲ್ಲಿ ಸುತ್ತಿಟ್ಟು ಬೆರೆಯುವುದೇ ಬಹಿರಂಗ ಚರ್ಚಾ ಸಂಗತಿಗಳಾಗಿ ಹೋಗಿವೆ.

ಸಿಎಂ ಯಡ್ಡಿ ಯಾವಾಗ ಹಣವಂತ ಗೋಕರ್ಣ ದೇವಸ್ಥಾನವನ್ನು ರಾಘವೇಶನಿಗೆ ಕಬ್ಜಾ ಮಾಡಿಕೊಟ್ಟರೋ ಆ ಕ್ಷಣವೇ ಮಹಾಬಲೇಶ್ವರ ಜೀವನಾಧಾರವಾಗಿದ್ದ ಸ್ಥಳೀಯ ವೈದಿಕರು ಮತ್ತು ಸ್ವಾಮಿ ಪರಿವಾರದ ನಡುವೆ ಭೀಕರ ಕದನ ಶುರುವಾಗಿ ಹೋಯ್ತು; ಗೋಕರ್ಣ ಅಗ್ರಹಾರ ನಿತ್ಯ ರಣರಂಗವಾಯ್ತು, ಈಗ ಭುಗಿಲೆದ್ದಿರುವ ರಾಘವೇಶನ ಸೆಕ್ಸ್ ಸಿಡಿ ಭಾನ್ಗಡಿಯಿದೆಯಲ್ಲ, ಅದು ಗೋಕರ್ಣ ಸಂಘರ್ಷದ ಮುಂದುವರಿದ ಭಾಗವಷ್ಟೇ!

ಪೊಲೀಸ್ ದಾಳಿ

ಅದು ಮಾರ್ಚ್ 31 ರ ರಾತ್ರಿ. ಗೋಕರ್ಣ ರಥಬೀದಿಯಲ್ಲಿ ಸ್ಥಳೀಯ ಬುಡಕಟ್ಟು ಜನಾಂಗವಾದ ಹಾಲಕ್ಕಿ ಒಕ್ಕಲಿಗರು ಸುಗ್ಗಿ ಹಬ್ಬದ ಸಮಾರೋಪ ಹಮ್ಮಿಕೊಂಡಿದ್ದರು. ಆ 'ಹಗಣ'ಕ್ಕೆ ಬ್ರಾಹ್ಮಣರು-ಶೂದ್ರರೆಲ್ಲ ಸೇರುತ್ತಾರೆ. ಅಣಕ-ವಿಮಿಕ್ರಿ-ಛದ್ಮ ವೇಷಗಳಂಥ ವಿವಿಧ ವಿನೋದಾವಳಿ ಕಾರ್ಯಕ್ರಮವದು. ಗೋಕರ್ಣದ ರಥಬೀದಿ ಸಂಭ್ರಮದಲ್ಲಿದ್ದರೆ, ಇತ್ತ ಪೊಲೀಸರು ರಾಘವೇಶನ ಕೋಳ ಬೇಟೆಗೆ ಸ್ಕೆಚ್ ಹಾಕಿಕೊಂಡು ಗೋಕರ್ಣದಲ್ಲಿ ಓಡಾಡುತ್ತಿದ್ದರು. ಅವರು ಮಂಗಳೂರಿನ ಡಿಸಿಆರ್‌ಬಿ ಪೊಲೀಸರು. ಒಂದು ಮೂಲದ ಪ್ರಕಾರ ಸ್ವತಃ ಡಿಐಜಿ ಗೋಪಾಲ ಹೊಸೂರರೇ ತಮ್ಮ ಹವಾನಿಯಂತ್ರಿತ ಕಾರಲ್ಲಿ ಗೋಕರ್ಣದಲ್ಲಿ ರೌಂಡ್ಸ್ ಹಾಕುತ್ತಿದ್ದರು.

ರಾತ್ರಿ 8.30 ರ ಸುಮಾರಿಗೆ ಕೋಟಿತೀರ್ಥದ ಬಳಿ ರವಿ ಯಾನೆ ಬಾಲಚಂದ್ರ ಕೊಡ್ಲಕೆರೆಯೆಂಬ 'ರಾಘವೇಶನ ತದ್ರೂಪಿ'ಯನ್ನು ಪೊಲೀಸರು ಎತ್ತಾಕಿಕೊಂಡು ಹೋಗುತ್ತಾರೆ. ರಾತ್ರಿ 2.30 ರ ಹೊತ್ತಿಗೆ ಪೊಲೀಸರ ಪ್ರವರ ಜೋರಾಗುತ್ತದೆ. ಆ ವೇಳೆಗೆ 'ಹಗಣ'ವೂ ಮುಗಿದಿತ್ತು, ಗೋಕರ್ಣ ದೇವಸ್ಥಾನ 'ಹಸ್ತಾಂತರ'ದ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೈಕೋರ್ಟ್‌ನಲ್ಲಿ ಹಾಕಿರುವ ಗಜಾನನ ಉಪಾಧ್ಯಾಯ ಮತ್ತು ಶಿವರಾಮ ಅಡಿ ಎಂಬಿಬ್ಬರನ್ನು ಪೊಲೀಸರು ಎಳೆದುಕೊಂಡು ಹೋಗುತ್ತಾರೆ. ಆ ನಟ್ಟ ನಡುರಾತ್ರಿ ಬೂಟುಕಾಲಿಂದ ಮನೆಗೆ ನುಗ್ಗಿ ಸಾಮಾನುಗಳೆಲ್ಲ ಚೆಲ್ಲಾಡಿ, ಕಂಪ್ಯೂಟರ್, ಲ್ಯಾಪ್‌ಟ್ಯಾಪ್‌ಗಳನ್ನೆಲ್ಲ ಒಯ್ಯುತ್ತಾರೆ. ಜೊತೆಗೆ ಗಣೇಶ್ ಜೋಗಳೇಕರ್ ಎಂಬಾತನ ಕಂಪ್ಯೂಟರ್, ಒಂದಿಷ್ಟು ಯಹಾವ್ಯಾವುದೋ ಸಿಡಿ, ಪೆನ್‌ಡ್ರೈವ್‌ಗಳನ್ನೆಲ್ಲಾ ತುಂಬಿಕೊಂಡು ಹೋಗುತ್ತಾರೆ.

ಆ ರಾತ್ರಿ ಪೊಲೀಸರೆಂದು ಹೇಳಿಕೊಂಡು ಮನೆಗೆ ನುಗ್ಗಿ ಬರ್ಬರ-ಹೇಯ ದಾಳಿ ಮಾಡಿದ ಮಂದಿ ಗಜಾನನ, ಶಿವರಾಮ ಮತ್ತು ರವಿ ಕೊಡ್ಲಕೆರೆಯನ್ನು ಎಲ್ಲಿ ಒಯ್ದರು-ಏನು ಮಾಡಿದರೆಂಬುದು ಮರುದಿನ ರಾತ್ರಿ (1.4.10)ವರೆಗೂ ಯಾರಿಗೂ ಗೊತ್ತೇ ಆಗುವುದಿಲ್ಲ. ಅವರ ಮನೆಗಳಲ್ಲಿ ಆಕ್ರಂದನ-ಭಯ ಮಡುಗಟ್ಟಿಹೋಗುತ್ತದೆ. ಏಪ್ರಿಲ್ ಒಂದರ ರಾತ್ರಿ ಕುಮಟಾ ನ್ಯಾಯಾಧೀಶರ ಮನೆಯಲ್ಲಿ 'ಆರೋಪಿ'ಗಳನ್ನು ಪೊಲೀಸರು ಹಾಜರುಪಡಿಸುತ್ತಾರೆ. ಅವರಿಗೆ ನ್ಯಾಯಾಂಗ ಬಂಧನವಾಗುತ್ತದೆ. ಮರುದಿನ ಗುಡ್‌ಫ್ರೈಡೇ ರಜೆ. ಶನಿವಾರ ಕಳೆದರೆ ಮತ್ತೆ ರವಿವಾರದ ರಜೆ. ಒಟ್ಟಿನಲ್ಲಿ ಬೇಲ್ ಸಿಗದೆ ಸ್ವಾಮಿ ಶತ್ರುಗಳು ಜೈಲಲ್ಲಿ ಕೊಳೆಸುವಂಥ ಸ್ಕೆಚ್ ಇದು.

ರಾಘವೇಶ್ವರ ಭಾರತಿ ಗೋಕರ್ಣ ದೇವಾಲಯದ ಪಾರುಪತ್ಯ ವಹಿಸಿಕೊಂಡ ನಂತರ ಇಂಥ ಪೊಲೀಸ್ ಪಾತಕ ಗೋಕರ್ಣದಲ್ಲಿ ಹಲವು ಬಾರಿಯಾಗಿದೆ. ಆಳುವವರ ನೇರ ನಿರ್ದೇಶನದಂತೆ ಪೊಲೀಸರು ಸ್ವಾಮಿ ವಿರೋಧಿಗಳ ಹುಟ್ಟಡಗಿಸಲು ಲಾಠಿ-ಬೂಟು-ಕಾನೂನು ಕಲಂ ಬೇಕಾಬಿಟ್ಟಿಯಾಗಿ ಪ್ರಯೋಗಿಸಿ ಕಣ್ಣೀರ ಕೋಡಿಯೇ ಹರಿಸಿದ್ದಾರೆ. ಇದೆಲ್ಲ ಕಾವಿ-ಖಾಕಿ-ಖಾದಿ ಜಂಟಿ ಪಾತಕ!

ಸೆಕ್ಸ್ ಸಿಡಿ ಗುಮ್ಮ

ರಾಘವೇಶನ ವಿರೋಧಿಗಳ ಬಂಧನಕ್ಕೆ ಪೊಲೀಸರಿಗೆ ನೆಪವಾಗಿದ್ದು ಒಂದು ವಿಚಿತ್ರ ಕಂಪ್ಲೇಂಟು! ದೇವಸ್ಥಾನ ಪಾರುಪತ್ಯಗಾರ ಜಿ.ಕೆ. ಹೆಗಡೆ ಎಂಬ ಸ್ವಾಮಿ ಗುಲಾಮ ಗಜಾನನ ಉಪಾಧ್ಯಾಯ ಮತ್ತಿತರ ಆರೆಂಟು ಮಂದಿ ಸ್ವಾಮಿಯನ್ನು ಅವಹೇಳನ ಮಾಡುವ ಕರಪತ್ರ ಮತ್ತು ನಕಲಿ ಸೆಕ್ಸ್ ಸಿಡಿ 'ಹಗಣ'ದಲ್ಲಿ ಹಂಚಿದ್ದಾರೆಂದು ಕಂಪ್ಲೇಂಟು ಕೊಟ್ಟಿದ್ದ. ವಿಚಿತ್ರವೆಂದರೆ ಈ ಜಿ.ಕೆ. ಹೆಗಡೆ ಎಂಬ ಸ್ವಾಮಿ ನಿಷ್ಠ ಕಂಪ್ಲೇಂಟು ಕೊಟ್ಟಿದ್ದು 1.4.10 ರ ಮುಂಜಾನೆ 10.30 ರ ಸುಮಾರಿಗೆ. ಆದರೆ ಅರೆಸ್ಟ್ ಮಾಡಿದ್ದು ಕಂಪ್ಲೇಂಟ್ ಕೊಡುವ ಮೊದಲೇ! ಎಂಥ ಸ್ವಾಮಿ ಮಹಿಮೆ, ಅಲ್ಲವೆ

ಈ ಸೆಕ್ಸ್ ಸಿಡಿ ಸೃಷ್ಟಿಯೆಂಬುದರಲ್ಲೆ ವಿರೋಧಾಭಾಸವಿದೆ. ಮಂಗಳೂರಲ್ಲಿ ಪೊಲೀಸರು ಹೇಳಿರುವಂತೆ ರಾಘವೇಶನಂತೆ ಕಾಣಿಸುವ ರವಿ ಕೊಡ್ಲಕೆರೆಗೆ ಕಾವಿ ತೊಡಿಸಿ ಸೆಕ್ಸ್ ಸಿಡಿ ತಯಾರಿಸುವ ತಯಾರಿ ಗೋಕರ್ಣದ ವೈದಿಕ ತಂಡ ನಡೆಸಿತ್ತು. ಆದರೆ ಇ[...] ಗೋಕರ್ಣದಲ್ಲಿ ರಾಮಚಂದ್ರಾಪುರ ಮಠದ ಮುಖವಾಣಿಗಳು ಅದಾಗಲೇ ರಾಘವೇಶ[...] ಚಾರಿತ್ರ್ಯವಧೆ ಮಾಡುವಂಥ ಸಿಡಿ ತಯಾರಾ[...] ವಿತರಣೆಯೂ ಮುಗಿದಿದೆ. ಆದರೆ ಅಂಥ ಸಿ[...] ಯಾರಿಗೂ ಸಿಕ್ಕಿಲ್ಲ.

ಪೊಲೀಸರು ಹೇಳುವ ಪ್ರಕಾರ, ಸಾಂಗ್ಲಿಯ[...] ಈ ನಕಲಿ ಸಿಡಿ ತಯಾರಿಸುವ ಷಡ್ಯಂತ್ರವನ್ನು ಸ್ವಾಮಿ ವಿರೋಧಿ ವೈದಿಕರು ಹೆಣೆದಿದ್ದರು. ಅಲ್ಲಿ ರಾಘವೇಶನ ಹಲವು ಹೋಲಿಕೆಗಳಿರು[...] ರವಿ ಕೊಡ್ಲಕೆರೆಗೆ ಕಾವಿ ತೊಡಿಸಿ, ರುದ್ರಾಕ್ಷಿ ಮಾಲೆ ಹಾಕಿ ಆತ ಆಕಳ ಕರುವನ್ನು ಮುದ್ದಿಸುವಂತೆ ಮತ್ತು ಬೇರೆ-ಬೇರೆ ಭಂಗಿಯ[...] ಶೂಟ್ ಮಾಡಲಾಗಿತ್ತು. ಹಾಗೆಯೇ 'ಶು[...]



ಮಲ್ಲಿಕಾ ಶೆರಾವತ್ ಜೊತೆ ಕೌಬಾಯ್



ಭಕ್ತ ಹೆಣ್ಣುಮಗಳತ್ತ ಸ್ವಾಮಿಯ ವಿಕೃತ ಚಿತ್ತ



ಇದೆಂಥ ಅಪ್ಪುಗೆ?

ನಕಲಿ ನಖರಾ!


ರಾಮಚಂದ್ರಾಪುರ ಮಠದ ಸುಪ್ರಸಿದ್ಧ ಸ್ವಾಮಿ ಶ್ರೀ ಶ್ರೀ ಶ್ರೀ ರಾಘವೇಶ್ವರ ಭಾರತಿಯ ನಕಲಿ ಸಿಡಿ ಕತೆಯೇಕೋ ನಂಬಿಕೆಯೇ ಮೂಡಿಸುತ್ತಿಲ್ಲ, ಇದಕ್ಕೆ ಸ್ವಾಮಿಯ ಚರಿತ್ರೆಯೇ ಕಾರಣ ಬಿಡಿ. ಆದರೆ ಈ ನಕಲಿ ನಖರಾದಿಂದ ರಾಘವನ ಬಳಗದ ಹಿಡನ್ ಉದ್ದೇಶ ಈಡೇರಿದೆ. ಈಗ ಕರಾವಳಿ-ಮಲೆನಾಡಿನ ಹವ್ಯಕರಲ್ಲಿ ಬರೋಬ್ಬರಿ ಎರಡು ಬಣಗಳಾಗಿವೆ. ಗೋಕರ್ಣವಂತೂ ಕುಸ್ತಿ ಅಖಾಡದಂತಾಗಿ ಹೋಗಿದೆ.


ರಾಘವನ ಬೆಂಬಲಿಗರು "ಗುರುದ್ರೋಹಿಗಳಿಗೆ ಶಿಕ್ಷೆಯಾಗಲಿ... ಇನ್ನೂ ಕೆಲವು ಸಂಚುಗಾರರ ಬಂಧನವಾಗಲಿ... ಪೊಲೀಸರು ಪ್ರಶಂಸಾರ್ಹ... " ಎಂದು ಪ್ರೊಸೇಶನ್ ಮೇಲೆ ಪ್ರೊಸೇಶನ್ ತೆಗೆಯುತ್ತಿದೆ. ಇದಕ್ಕೆ ಎದುರಾಗಿ "ನಡುರಾತ್ರಿ ಮನೆ ಹೊಕ್ಕು ವಾರೆಂಟ್ ಇಲ್ಲದೆ ಅಮಾಯಕರ ಬಂಧಿಸಿರುವ ಪೊಲೀಸರು ರಾಘವೇಶನ ಏಜೆಂಟರು... ಇದು ಮಠದ ಗೂಂಡಾಗಿರಿ..." ಎಂದು ಗೋಕರ್ಣ ವೈದಿಕರು ಪ್ರತಿಭಟನೆಗೆ ಇಳಿದಿದ್ದಾರೆ. ಹೇಗಾದರೂ ಮಾಡಿ ವಿರೋಧಿಗಳ ಬಾಯಿ ಮುಚ್ಚಿಸಲು ಮಠದ ಪಟಾಲಮ್ಮು ಪಾಪದವರನ್ನೆಲ್ಲಾ ನಕಲಿ ಸಿಡಿ ಕೇಸಲ್ಲಿ ಫಿಕ್ಸ್ ಮಾಡುತ್ತಿದೆ.

ರಾಘವನ ಪೊಲೀಸರ ಕಾರ್ಯಾಚರಣೆಗೆ ಅದೆಷ್ಟು ಕ್ರೂರವಾಗಿದೆಯೆಂದರೆ, ಗೋಕರ್ಣದ ಹಸ್ತಾಂತರ ವಿರೋಧಿಗಳಲ್ಲೇ ತಲೆಮರೆಸಿಕೊಂಡು ಓಡಾಡುತ್ತಿದ್ದಾರೆ. ಅರವತ್ತೈದು ವರ್ಷದ ವೃದ್ಧ ಫಣಿ ಭಟ್ಟರಂತವರು ಎಲ್ಲೆಲ್ಲೋ ಅಂಡಲೆಯುತ್ತಿದ್ದಾರೆ. ಈತ ಬಿಪಿ-ಶುಗರ್ ಪೇಶಂಟ್ ಬೇರೆ. ಚಾರಿತ್ರ್ಯ ದಹನ, ಕೊಲೆಗಿಂತಲೂ ಹೇಯ ಎನ್ನುತ್ತಿರುವ ರಾಘವೇಶನಿಗೆ ಹೀಗೆ ನಿರಪರಾಧಿಗಳಿಗೆಲ್ಲ ಚಿತ್ರಹಿಂಸೆ ನೀಡಿದರೆ ರೌರವ ನರಕ ಪ್ರಾಪ್ತಿಯಾಗುತ್ತದೆಂಬ 'ಧರ್ಮಶಾಸ್ತ್ರ' ಗೊತ್ತಿಲ್ಲವೇ?

ರಾಘವೇಶನ ಸೋಗಲಾಡಿತನದಿಂದ ಎರಡೂ ಬಣದ ನಡುವೆ ದೊಡ್ಡ ಸಂಘರ್ಷವಾಗುವ ಆತಂಕ ಮೂಡಿದೆ. ಹೀಗೆ ಅಮಾಯಕರನ್ನೂ ಎತ್ತಿ ಕಟ್ಟಿ ಬೇಳೆ ಬೇಯಿಸಿಕೊಳ್ಳುವ ಸ್ವಾಮಿ ಚಪಲಕ್ಕೆ ಬುದ್ಧಿವಂತ ಹವ್ಯಕರು ಬಲಿಯಾಗುತ್ತಿರುವುದು ದುರಂತ. ಇಂಥ ಪಾತಕ ಯಾವ ಸ್ವಾಮಿ-ಮಠ- ಜನಾಂಗಕ್ಕೂ ಶ್ರೇಯಸ್ಕರವಲ್ಲ. ಇನ್ನಾದರೂ ಸ್ವಾಮಿ ಮತ್ತು ಸರ್ಕಾರ ಕಾನೂನಿನ ಮಾರ್ಗದಲ್ಲೇ ಟೀಕೆ-ಪ್ರತಿಭಟನೆ ಎದುರಿಸಲಿ. ನ್ಯಾಯದ ಹೋರಾಟ ನಡೆಸಲಿ.

ಸಾತ್ವಿಕ ಸಿಟ್ಟಿನ ಜನ ಸಿಡಿದೆದ್ದರೆ ಯಾವ ಪೊಲೀಸು, ಸರ್ಕಾರವೂ ಬಚಾವಾಗಿಸಲು ಸಾಧ್ಯವಿಲ್ಲ, ಹಿಂದೆಯೂ ಇದೇ ಥರ ರಾಜಗೋಪಾಲ ಅಡಿಯಂಥ ನಿರಪರಾಧಿಗಳನ್ನು ವಾರಗಟ್ಟಲೇ ಜೈಲಲ್ಲಿಟ್ಟು ಸ್ವಾಮಿ ಸತಾಯಿಸಿದ್ದರು. ಗೋಕರ್ಣದಲ್ಲಿ ಗಲಾಟೆಯಾಗುವ ಮೊದಲೇ ಸ್ವಾಮಿ ರಾಗ-ದ್ವೇಷ- ಅಸೂಯೆ ಬಿಟ್ಟು 'ಸಾಧು' ಆಗುವರೇ?





ನಿತ್ಯಾನಂದನ ಪ್ರಣಯ ಪ್ರಸಂಗ

ಸ್ವಾಮಿ ರಾಘವೇಶ ಮಠದ ಸ್ತ್ರೀ ಭಕ್ತರ ಜೊತೆ ನಡೆಸುವಾಗಿನ ಸಂದರ್ಭದ ಕ್ಲಿಪಿಂಗ್ ಬೆರೆಸಿ ಡಿ ತಯಾರಿಸುವ ಪ್ಲಾನ್ ಹಾಕಲಾಗಿತ್ತು. ಇದರಲ್ಲಿ ದೇ ಕೇರಳದ ಪೊನ್ನುಮುಡಿ ಗೆಸ್ಟ್‌ಹೌಸ್‌ನ ರೂಮ್ 24ರಲ್ಲಿ ಬ್ಲೂ ಫಿಲ್ಮ್ ಶೂಟ್ ಮಾಡಿಕೊಳ್ಳಲಾಗಿತ್ತು. ಪುರುಷನ ಮುಖ ಮರೆಮಾಚಿ ಹುಡುಗಿಯನ್ನಷ್ಟೇ ಗಿ ತೋರಿಸಲಾಗಿತ್ತಂತೆ. ಇದೆಲ್ಲ ಸೇರಿಸಿ ರಾಘವೇಶನ ಸರಾಜು ಹಾಕುವ 'ಸೆಕ್ಸ್ ಸಿಡಿ' ತಯಾರಿಸುವ ರೂಪಿತವಾಗಿತ್ತಂತೆ. ಇದು ಪೊಲೀಸರು ಹೇಳುವ ಬಚ್ಚಿ ಕತೆ. ಇತ್ತ ಗೋಕರ್ಣ-ಶಿವಮೊಗ್ಗೆಯ ಮಠದ ಯಿಗಳ ನಡುವೆ ಇಂಥದೊಂದು ಸಿಡಿ ಈಗಾಗಲೇ ಆಗಿಹೋಗಿದೆ ಎಂಬ ಸುದ್ದಿ ಹಬ್ಬದೆ.

ೀಸರ ಕತೆಯಲ್ಲಿ ಇನ್ನೊಂದು ಸುಳ್ಳು ಸೋಜಿಗವೂ ಮಾರು 20 ನಿಮಿಷಗಳ ನಕಲಿ ರಾಘವೇಶನ ಯಲ್ಲಿ ಆತನ ವಿರುದ್ಧ ಪತ್ರಿಕೆಗಳಲ್ಲಿ ಬಂದಿರುವ ವರದಿ-ಕರಪತ್ರ ಇತ್ಯಾದಿ ಕಟ್ ಅಂಡ್ ಪೇಸ್ಟ್ ಗಿದೆ. ಕೊನೆಯಲ್ಲಿ 'ಲಂಕೇಶ್' ಸಂಪಾದಕಿ ಗೌರಿ ರದೊಂದು ಸಂದರ್ಶನ ಇದೆಯಂತೆ. ನ್-ಡಿಬಿಎಸ್ ಚಾಲನೆಗೆ ಈ ಸ್ವಾಮಿಯು ಾರಗಳನ್ನು ಕುರಿತು ನೀಡಿದ ಹೇಳಿಕೆಯನ್ನು ಬಹುದು. ಆದರೆ ಅದೇನು ಗೌಪ್ಯ ಸಂದರ್ಶನವಲ್ಲ, ಅವರು ಸಿಎನ್‌ಎನ್-ಐಬಿಎನ್ ಹೇಳಿದ್ದನ್ನೇ ಮತ್ತೇ ಬಾರಿ ಹೇಳಲು ಸಿದ್ದರು. ಇದೊಂದೇ ಸಾಕು ಈ ಡಿ ಕತೆಯೇ ಖೋಟಾ ಎಂಬುದಕ್ಕೆ!!

ಸ್ವಾಮಿ ಸೃಷ್ಟಿಯಾ?!

ನಕಲಿ ಸಿಡಿಯನ್ನು ರಾಷ್ಟ್ರೀಯ ಮಟ್ಟದ ಇಂಗ್ಲಿಷ್ ಚಾನೆಲ್‌ಗಳಿಗೆ ಕೊಡುವ ಸಿದ್ಧತೆಯಾಗಿತ್ತೆಂದು ರು ಹೇಳುತ್ತಾರೆ. ಆ ಬಗ್ಗೆ ಟಿವಿ ರಿಪೋರ್ಟ್‌ಗಳಿಗೆ ಗಿತ್ತಂತೆ. ಇದನ್ನು ಒಬ್ಬ ಟಿವಿ ವರದಿಗಾರ ಮಠಕ್ಕೆ ಆಪ್ತನಾದ ಭಟ್ಟನೆಂಬ ಸಂಪಾದಕನಿಗೆ ತಿಳಿಸಿದನಂತೆ. ್ವಮಿಗೆ ಈ ಸಂಚು ಅರುಹಿ-ಪೊಲೀಸರಿಗೆ ಕೊಟ್ಟಿದ್ದರಿಂದ 'ಅನಾಹುತ' ತಪ್ಪಿತ್ತಂತೆ. ಇದು ವಲಯದಲ್ಲಿರುವ ಸುದ್ದಿ. ಇದರಲ್ಲಿ ಯಾವುದು ಾವುದು ಸುಳ್ಳು ಎಂಬುದು ಆ ಗೋಕರ್ಣ ಬಲೇಶ್ವರ ಮಂತ್ತವನನ್ನು ತನ್ನ ಯಲ್ಲಿಟ್ಟುಕೊಂಡಿರುವ ರಾಘವೇಶನಿಗೆ ಮಾತ್ರ

ನಂತೂ ಖರೆ. ಏಳು ತಿಂಗಳ ಹಿಂದೆ ಸಾಂಗ್ಲಿಗೆ ದಯ' ಎಂಬ ಯಾಗ ನಡೆಸಲು ಗೋಕರ್ಣದಿಂದ ಪುರೋಹಿತರಿದ್ದ ತಂಡವೊಂದು ಹೋಗಿತ್ತು. ಸ್ವಾಮಿ ನಿಷ್ಠನೂ ಆತನ ಸಹಪಾಠಿಯೂ ಆದ ರಮಣಿ ಎಂಬಾತನೂ ಇದ್ದ. ಉಳಿದೆಲ್ಲರೂ ಹಸ್ತಾಂತರದ-ಹರಾಕಿರಿಯ ವಿರುದ್ಧ ಬಂಡೆದ್ದ . ಸಂಜೆ ನಾಲ್ಕರ ನಂತರ ಈ ವೈದಿಕರಿಗೆ ಎತ್ತಿತ್ತು. ಆ ವೇಳೆ ರಾಘವೇಶನಂತೆಯೇ ಕಾಣುವ ಡ್ಲಕೆರೆ ಎಂಬಾತನಿಗೆ ಕಾವಿ ತೊಡಿಸಿ-ರುದ್ರಾಕ್ಷಿ ಹಾಕಿ, ಟೈಮ್‌ಪಾಸ್ ವಿನೋದ ಈ ವೈದಿಕರು ಸಿ. ಅಲ್ಲಿಯೇ ಇದ್ದ ಆಕಳ ಕರುವನ್ನು ರಾಘವೇಶನ ಸ್ಟೈಲಲ್ಲಿ ರವಿ ಮುದ್ದಿಸುವಾಗಲೂ ಫೋಟೋ ತ್ತು, ಸ್ವಾಮಿ ಗೆಳೆಯ ವಿನಾಯಕ ರಮಣಿಯೂ ಮ್ ಪಾಸ್ ಕಾರ್ಯಕ್ರಮದ ಫೋಟೋ ತನ್ನ ಕ್ಯಾಮರಾದಲ್ಲಿ ಹೊಡೆದಿಟ್ಟುಕೊಂಡಿದ್ದ

ರಿಗೆ ಬಂದಾಗ ಈ ಫೋಟೋಗಳನ್ನೆಲ್ಲ ಆತ ಕಮ್ ಗುರು ರಾಘವೇಶನಿಗೂ ತೋರಿಸಿ ಚಾಟ್ ನ್ನಾನೆ. ಈ ನಕಲಿ ಸ್ವಾಮಿ ವೀಡಿಯೋ ನನ್ನೇನಾದರೂ ಅಸಲಿ ಸ್ವಾಮಿ ಬಳಗ ಬಳಸಿಕೊಂಡು ಸದೆ ಬಡಿಯಲು ಹವಣಿಸಿದರೇ? ಹಾಗಂತ ಕರಾವಳಿ-ಮಲೆನಾಡಿನ ಬ್ರಾಹ್ಮಣರ ಕೇರಿಗಳಲ್ಲಿ ದ್ದಿದೆ. ಅತ್ತ ಹೊಸನಗರದ ಮಠದ ಗುರುಕುಲದಲ್ಲಿ

12

ಸಾನಿಯಾ ಸೂಪರ್ ಸೇಲ್!

ತನ್ನ ಟೆನ್ನಿಸ್ ಕರಿಯರ್ ಪೂರ್ತಿ 1ನೇ ಸುತ್ತಿಗೆ ಆಗಮಿಸಿ 2ನೇ ಸುತ್ತಿನಲ್ಲೇ ನಿರ್ಗಮಿಸುವ ಅಮೋಘ ಆಟವಾಡುತ್ತಿದ್ದ ಸಾನಿಯಾ ಮಿರ್ಜಾ ಕಳೆದ ಒಂದು ವಾರ ಪೂರ್ತಿ ಸುದ್ದಿಯಲ್ಲಿದ್ದಳು. ಈ ಸುದ್ದಿ ಎಂದಿನಂತೆ ಅವಳ ಟೆನ್ನಿಸ್ ಸಾಧನೆಯದ್ದೇನೂ ಆಗಿರಲಿಲ್ಲ. ಕಾಕ ತಾಳೀಯ ಎಂಬಂತೆ ಸಾನಿಯಾಳ ಮದುವೆ ಕೂಡಾ ಟೆನ್ನಿಸ್ ಮ್ಯಾಚ್‌ನಂತೆ ಒಂದನೇ ಸುತ್ತಿನಿಂದ ಆಗಮಿಸಿ 2ನೇ ಸುತ್ತಿನಲ್ಲೇ ಕೊನೆಗೊಂಡಿದೆ. ಪಾಪ ಅವಳ ಪತಿಯಾಗಲಿರುವ ಶೋಯೆಬ್ ಮಲ್ಲಿಕ್ ಈ ಹಿಂದೆ ಆಯಿಷಾ ಸಿದ್ದಿಕಿ ಜೊತೆಗಿನ ತನ್ನ ಟೆಲಿಫೋನ್ ಮ್ಯಾರೇಜ್ ನಿಜ ಎಂದು ಒಪ್ಪಿಕೊಂಡಿದ್ದರಿಂದ ಈಗ ಈ ವಿವಾಹ ವಿವಾದ ಅಂತೂ ಕೊನೆಯಾಗಿದೆ. ಹುಡುಗರ ಟ್ವೆಂಟಿ-20 ಕ್ರಿಕೆಟ್ ಮ್ಯಾಚನ್ನೋ ಇಲ್ಲ ಹುಡುಗಿಯರ ಟೆನ್ನಿಸ್ ಆನ್ನೋ ಟೆಲಿಕಾಸ್ಟ್ ಮಾಡುವಷ್ಟೇ ಆಸೆ, ಆಸಕ್ತಿಯಿಂದ ನಮ್ಮ ನ್ಯಾಷನಲ್ ಮೀಡಿಯಾಗಳು ಇದನ್ನೆಲ್ಲಾ ದಿನಗಟ್ಟಲೇ ತೋರಿಸಿ ಪುಣ್ಯ ಕಟ್ಟಿಕೊಂಡಿದ್ದಾರೆ. ಸರಿಯಾಗಿ ಹೇಳಬೇಕೆಂದರೆ 'ಸಾನಿಯಾ' ಭರ್ಜರಿ ಮಾರಾಟವಾಗಿದ್ದಾಳೆ. ಮೀಡಿಯಾಗಳು ಜಾಹೀರಾತು ಆದಾಯದಿಂದ ಕೋಟ್ಯಾಂತರ ರೂಪಾಯಿಗಳ ಭರ್ಜರಿ ಲಾಭ ಮಾಡಿಕೊಂಡಿವೆ. ಸಾನಿಯಾ-ಶೋಯೆಬ್‌ರ ಮದುವೆ ನಡೆಯುತ್ತದೋ ಇಲ್ಲವೋ ಎಂದು ಬೆಟ್ ನಡೆಸಿದ ಬೆಟ್ಟಿಂಗ್ ಮಾಫಿಯಾಗಳು ಸಾಕಷ್ಟು ಹಣ ದೋಚಿದ್ದಾರೆ. ಮೊಬೈಲ್ ಕಂಪೆನಿಗಳೂ ಎಸ್ಸೆಮ್ಮೆಸ್ ಇತ್ಯಾದಿಗಳಿಂದ ಕೋಟಿಗಟ್ಟಲೇ ಬಾಚಿಕೊಂಡಿವೆ. ಆದರೆ ಈ ಪ್ರಕರಣದ ಬಲಿಪಶು ಆಯಿಷಾ ಸಿದ್ದಿಕಿಗೆ ಮಾತ್ರ ಸಿಕ್ಕಿರುವುದು 15 ಸಾವಿರ ರೂಪಾಯಿಗಳು! ಅವಳಿಗೆ ತಲಾಖ್ ನೀಡಿರುವ ಶೋಯೆಬ್ ಮಲಿಕ್ ತಿಂಗಳಿಗೆ 5 ಸಾವಿರದಂತೆ 3 ತಿಂಗಳ ಪರಿಹಾರ ಧನವನ್ನು ಒಟ್ಟಿಗೆ ನೀಡಿ ಸಾನಿಯಾ ಜೊತೆಗಿನ ತನ್ನ ಮದುವೆಗಿದ್ದ ಅಡೆತಡೆಗಳನ್ನು ಬಗೆಹರಿಸಿಕೊಂಡಿದ್ದಾನೆ.

ಈ ವಿವಾಹ ವಿವಾದ ಕುರಿತು ಇನ್ನೂ ಹಲವಾರು ಆಸಕ್ತಿದಾಯಕ ಅಂಕಿ ಅಂಶಗಳಿವೆ. ಏಪ್ರಿಲ್ ಮೊದಲ ವಾರ ಪೂರ್ತಿ ಸಾನಿಯಾಳನ್ನು ಚಲಾವಣೆಯಲ್ಲಿಟ್ಟಿದ್ದ ಎಲ್ಲಾ ಮೀಡಿಯಾಗಳು ಅಂದಾಜು ಒಟ್ಟಾರೆ 2 ಸಾವಿರ ಗಂಟೆಗಳಷ್ಟು ಟೆಲಿಕಾಸ್ಟ್ ಸಮಯವನ್ನು ಬಳಸಿದ್ದಾವಂತೆ. 20 ಲಕ್ಷಕ್ಕೂ ಹೆಚ್ಚು ಎಸ್ಸೆಮ್ಮೆಸ್‌ಗಳು ಹರಿದಾಡಿವೆಯಂತೆ...

ನಿಜಕ್ಕೂ 'ಸಾನಿಯಾ' ಗ್ರೇಟ್ ಅಲ್ಲವಾ?

ಇದೇ ಅವಧಿಯಲ್ಲಿ ಬಜೆಟ್ ವಿಚಾರವಿತ್ತು. ಮಹಿಳಾ ಮೀಸಲಾತಿ ವಿವಾದ ಹಬೆಯಾಡುತ್ತಿತ್ತು. ಬೆಲೆ ಏರಿಕೆ ಸಮಸ್ಯೆ ಸುಡುತ್ತಿತ್ತು. ಆಪರೇಷನ್ ಗ್ರೀನ್ ಹಂಟ್‌ನಲ್ಲಿ ನೂರಾರು ಜನರ ಹೆಣ ಬೀಳುತ್ತಿತ್ತು. ಆದರೇನು? 'ಸಾನಿಯಾ' ಸೆಷನ್‌ನಲ್ಲಿ ಅವೆಲ್ಲವನ್ನು ಮೂಲೆಗೆ ತಳ್ಳಲಾಯಿತು. ಇದೊಂದು ದೇಶದ ಪ್ರಮುಖ ವಿಚಾರವೆಂಬಂತೆ ಬಿಂಬಿತವಾಯಿತು.

ದೇಶಭಕ್ತರ ನೋವು

ಇಂಡಿಯಾದಲ್ಲಿ ನಮಗೆ ಅನೇಕ ದೇಶಭಕ್ತರು ಕಾಣಸಿಗುತ್ತಾರೆ. ಅವರೆಲ್ಲಾ ಈ ಟೆನ್ನಿಸ್ ಬಾಲಕಿ ಸಾನಿಯಾಳು ಪಾಕಿಸ್ತಾನದ ಹುಡುಗನನ್ನು ಮದುವೆಯಾಗಲು ತಯಾರಾಗಿದ್ದನ್ನು ಕೇಳಿ ಹಾರ್ಟ್ ಅಟ್ಯಾಕ್ ಆದವರಂತೆ ಅಪಾರ ನೋವು ಅನುಭವಿಸುತ್ತಿದ್ದಾರೆ. 'ನೂರು ಕೋಟಿ ಜನಸಂಖ್ಯೆಯಿರುವ ಇಂಡಿಯಾದಲ್ಲಿ ಸಾನಿಯಾಗೆ ಒಬ್ಬನೇ ಒಬ್ಬ ಸೂಕ್ತ ವರ ಸಿಗಲಿಲ್ಲವೇ?' ಎಂದು ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ಎಂಬ ಏಕ ವ್ಯಕ್ತಿ ಸಂಘಟನೆಯ ನಾಯಕನ ಪ್ರಶ್ನೆಯನ್ನು ದೊಡ್ಡ ದೊಡ್ಡ ಪತ್ರಿಕೆಗಳೂ ಪ್ರಕಟಿಸಿದವು. ಶಿವಸೇನೆಯ ಭಾಳಾ ಠಾಕ್ರೆಯಂತೂ 'ಇದು ದೇಶದ್ರೋಹ' ಎಂದು ಜಡ್ಜ್‌ಮೆಂಟ್ ಕೊಟ್ಟುಬಿಟ್ಟ.

ಕನ್ನಡದ ಒಬ್ಬ ಪತ್ರಕರ್ತ "ಸಾನಿಯಾ ಮುಸ್ಲಿಂ ಎಂಬುದು ಗೊತ್ತಿದ್ದರೂ ಭಾರತದ ಜನ ಅವಳಿಗೆ ಪ್ರೋತ್ಸಾಹ ಕೊಟ್ಟಿದ್ದರು. ಈಗವಳು ಕೋಟ್ಯಾಂತರ ಜನರ ಭಾವನೆಗಳಿಗೆ ಮೋಸ ಮಾಡಿದ್ದಾಳೆ" ಎಂದು ಬರೆದರು. ಇನ್ನೊಬ್ಬ ಪ್ರವೃತ್ತಿಯಂತೂ "ಅಲ್ಲಾ ನಾಳೆ ಇಂಡಿಯಾ-ಪಾಕಿಸ್ತಾನ ಮ್ಯಾಚ್ ನಡೆದರೆ ಸಾನಿಯಾ ಯಾರನ್ನು ಸಪೋರ್ಟ್ ಮಾಡಬೇಕೆಂಬ ಬಿಕ್ಕಟ್ಟು ಬರುವುದಿಲ್ಲವೇ? ಈ ಹುಡುಗಿ ಎಂತಹ ಇಕ್ಕಟ್ಟು ತಂದುಕೊಳ್ಳುತ್ತಿದ್ದಾಳೆ ನೋಡಿ" ಎಂದು ಮರುಗಿದ್ದಾರೆ.


ಅವರಿಗೆ ಇದು ಮಿಲಿಯನ್ ಡಾಲರ್ ಪ್ರಶ್ನೆಯಾಗಿ ಕಾಡಿದೆ ಪಾಪ. ಆದರೆ ಇಂಡಿಯಾದ ಕ್ರಿಕೆಟ್ ಆಟಗಾರರು ಇದ್ಯಾವುದನ್ನೂ ಕೇರ್ ಮಾಡದೇ "ನಾವು ಅಮೆರಿಕಾದ ಕೋಕಾಕೋಲಾ, ಪೆಪ್ಸಿ ಕೋಲಾ ಮಾತ್ರ ಕುಡಿಯುತ್ತೇವೆ, ನೀವೂ ಅದನ್ನೇ ಕುಡಿಯಿರಿ" ಎನ್ನುತ್ತಿರುವುದು ಇವರಿಗೆ ದೇಶದ್ರೋಹವಾಗಿ ಕಾಣಿಸದೆ ಇರುವುದೇ ಆಶ್ಚರ್ಯ ಅಲ್ಲವೇ?

ಯಾರು ಈ ಸಾನಿಯಾ?


ಈ ಸಾನಿಯಾಳ ಟೆನ್ನಿಸ್ ಕರಿಯರ್ ಹಾಗೂ ಸಾಧನೆಗಳು ಮತ್ತದಕ್ಕೆ ಸಿಕ್ಕ ಪ್ರಚಾರಗಳನ್ನೂ ಗಮನಿಸಿದರೆ ಅದು improportanate ಆಗಿರುವುದು ಕಾಣುತ್ತಿದೆ. ಸಾನಿಯಾಳನ್ನು ನಮ್ಮ ಮೀಡಿಯಾಗಳು ಎಷ್ಟೊಂದು ಮುದ್ದು ಮಾಡಿ ಪ್ರಚಾರ ಕೊಟ್ಟವೆಂದು ನೋಡಿದರೆ ಅಚ್ಚರಿಯಾಗುತ್ತದೆ.

ಹೈದರಾಬಾದಿನ ಮುಸ್ಲಿಮ್ ಸಾಹುಕಾರರ ಕುಟುಂಬದಲ್ಲಿ 1986ರಲ್ಲಿ ಹುಟ್ಟಿದ ಸಾನಿಯಾ ಅಂತರರಾಷ್ಟ್ರೀಯ ಮಟ್ಟದ ಟೆನ್ನಿಸ್‌ಗೆ ಕಾಲಿಟ್ಟದ್ದು 2003ರಲ್ಲಿ. ಅಂದರೆ ಆಗ ಅವಳಿಗಿನ್ನೂ ಹದಿನೇಳು ವರ್ಷ ಆಗಿತ್ತಷ್ಟೇ. ಅವಳ ಚರ್ಮದ ಬಣ್ಣ ಬಿಳಿಯಾಗಿತ್ತು, ಸುಂದರವಾಗೂ ಇದ್ದಳು. ಜೊತೆಗೆ ಜಂಕ್ ಇಂಗ್ಲಿಷ್ ಭಾಷೆಯಲ್ಲೂ ಮಾತನಾಡುವುದು ಗೊತ್ತಿತ್ತು ಆಗ ಇಂಡಿಯಾದ ಯಾವ ಆಟದ ಮೈದಾನಗಳಲ್ಲೂ ಸಾನಿಯಾ ತರಹದ ಗ್ಲಾಮರಸ್ ಹೆಣ್ಣು ಇರಲಿಲ್ಲ.

ಇದೆಲ್ಲಾ ಒಟ್ಟು ಸೇರಿ ಸಾನಿಯಾ ಟೆನ್ನಿಸ್ ರಾಕೆಟ್ ಕೈಲಿಡಿದು ವಯ್ಯಾರದಿಂದ ಕಾಣಿಸಿಕೊಂಡ ತಕ್ಷಣ ಮೀಡಿಯಾ ಡಾರ್ಲಿಂಗ್ ಆಗಿಬಿಟ್ಟಳು. ರಾತ್ರೋರಾತ್ರಿ ಸ್ಟಾರ್, ಸೆಲೆಬ್ರಿಟಿ ಎನಿಸಿಕೊಂಡುಬಿಟ್ಟಳು. ಈ ಮೀಡಿಯಾಗಳ ಚಿತಾವಣೆಯ ಪ್ರಭಾವ ಯಾವ ಮಟ್ಟಕ್ಕಿತ್ತೆಂದರೆ 2003ರಲ್ಲಿ ಟೆನ್ನಿಸ್ ಶುರು ಮಾಡಿದ ಸಾನಿಯಾಗೆ 2004ರಲ್ಲೇ ಅರ್ಜುನ ಪ್ರಶಸ್ತಿ ದಕ್ಕಿಬಿಟ್ಟಿತು. ಅಂದರೆ ಆಟ ಶುರು ಮಾಡಿದ ಕೇವಲ ಒಂದೇ ವರ್ಷದಲ್ಲಿ ಸಾನಿಯಾಗೆ ಇಂಡಿಯಾ ಸರ್ಕಾರ ಶ್ರೇಷ್ಠ ಕ್ರೀಡಾಪಟುವಿಗೆ ಕೊಡುವ ಅರ್ಜುನ ಪ್ರಶಸ್ತಿ ಸಿಕ್ಕಿತ್ತು. ಇದನ್ನು ಬೇರೆ ರೀತಿಯಲ್ಲೂ ಹೇಳಬಹುದು. ಉದಾಹರಣೆಗೆ ಪಿ.ಟಿ.ಉಷಾ.



ಸೈನಾ



ಪಿ.ಟಿ. ಉಷಾ

ಭಾರತದ ಈ ಹೆಮ್ಮೆಯ ಕ್ರೀಡಾಪಟು 1980ರಲ್ಲಿ ಅಂತರರಾಷ್ಟ್ರೀಯ ರನ್ನಿಂಗ್ ರೇಸ್‌ಗೆ ಕಾಲಿಟ್ಟು ಮಾಸ್ಕೋ ಒಲಂಪಿಕ್ಸ್‌ನಲ್ಲಿ ಭಾಗವಹಿಸಿ ಎಲ್ಲರ ಗಮನ ಸೆಳೆದಿದ್ದಳು. 1982ರಲ್ಲಿ ದೆಹಲಿಯಲ್ಲಿ ನಡೆದ ಏಷ್ಯಾಡ್‌ನಲ್ಲಿ ಚಿನ್ನದ ಪದಕ ಗೆದ್ದು ಭಾರತದ ಮಾನ ಕಾಪಾಡಿದಳು. ಆದರೂ ಉಷಾಗೆ ಅರ್ಜುನ ಪ್ರಶಸ್ತಿ ಸಿಕ್ಕಿದ್ದು 1984ರಲ್ಲಿ. ಅಂದರೆ ಐದು ವರ್ಷಗಳ ನಂತರ. ಅದೇರೀತಿ ಸಾನಿಯಾ ಎದುರು ಸಚಿನ್ ತೆಂಡೂಲ್ಕರ್ ಸಹ ಹಿಂದೆ ಬಿದ್ದವನೇ ಆಗಿದ್ದಾನೆ. 1989ರಲ್ಲಿ ಇಂಟರ್‌ನ್ಯಾಷನಲ್ ಕ್ರಿಕೆಟ್‌ಗೆ ಬಂದ ಸಚಿನ್ ಕೂಡಾ ಅರ್ಜುನ ಪ್ರಶಸ್ತಿ ಪಡೆಯಲು 1994ರ ತನಕ ಕಾಯಬೇಕಾಯಿತು. ಅಂದರೆ ಐದು ವರ್ಷ.

ಇನ್ನು ಪದ್ಮಶ್ರೀ ಪ್ರಶಸ್ತಿಯ ಕತೆಯೂ ಇದಕ್ಕಿಂತಾ ಭಿನ್ನವಾಗಿಲ್ಲ. ಸಾನಿಯಾಗೆ ಇದು 2006ರಲ್ಲೇ ಸಿಕ್ಕಿದರೆ ಪಿ.ಟಿ.ಉಷಾಗೆ ಐದು ವರ್ಷಗಳ ನಂತರ ಹಾಗೂ ಸಚಿನ್‌ಗೆ ಹತ್ತು ವರ್ಷ ಆಡಿದ ಮೇಲೆ ಬಂತು. ನಾವು ಯಾವ ಮಾನದಂಡದಲ್ಲಿ ಅಳತೆ ಹಾಕಿದರೂ ಕೂಡಾ ಉಷಾ ಹಾಗೂ ಸಚಿನ್ ಸಾನಿಯಾಳಿಗಿಂತಾ ದೊಡ್ಡ ಸಾಧಕರು. ಹಾಗಿದ್ದಾಗಲೂ ಸಾನಿಯಾಳ ಗ್ಲಾಮರ್ ಹಾಗೂ ಮೀಡಿಯಾ ಮುದ್ದುಗಳೇ ಸಾನಿಯಾಳನ್ನು ಸ್ಟಾರ್ ಆಗಿಸಿದ್ದವು.

ಹಾಗೆಂದು ಸಾನಿಯಾ ತೀರಾ ಕಳಪೆ ಆಟಗಾರ್ತಿ ಏನಾಗಿರಲಿಲ್ಲ. 2003ರಲ್ಲಿ ವಿಂಬಲ್ಡನ್ ಮಹಿಳಾ ಡಬಲ್ಸ್‌ನಲ್ಲಿ ಅಲಿಸಾ ಜೊತೆ ಆಡಿ ಪದಕ ಗೆದ್ದಿದ್ದಳು. ಇತ್ತೀಚೆಗೆ 2009ರಲ್ಲಿ ಮಹೇಶ್ ಭೂಪತಿ ಜೊತೆ ಮಿಕ್ಸೆಡ್ ಡಬಲ್ಸ್ ಆಡಿ ಆಸ್ಟ್ರೇಲಿಯಾದ ಓಪನ್ ಗೆದ್ದಿದ್ದಳು. ಇದನ್ನು ಬಿಟ್ಟರೆ ಇನ್ನೂ ಒಂದೆರಡು ಲೋಕಲ್ ಟೂರ್ನಿಗಳನ್ನು ಗೆದ್ದಿದ್ದಾಳೆ. ಆದರೆ ಟೆನ್ನಿಸ್‌ನ ಮಹೋನ್ನತ ಗ್ರಾಂಡ್‌ಸ್ಲಾಮ್ ಪ್ರಶಸ್ತಿಗಳ ಎದುರು ಇವೆಲ್ಲಾ ಗಲ್ಲಿ ಪ್ರಶಸ್ತಿಗೆ ಸಮ ಅಷ್ಟೆ.

ಉಳಿದಂತೆ ಸಾನಿಯಾಳ ಟೆನಿಸ್ ಕೆರಿಯರ್ ಪೂರ್ತಿ 1ನೇ ಸುತ್ತಿಗೆ ಆಗಮನ, 2ನೇ ಸುತ್ತಿನಲ್ಲಿ ನಿರ್ಗಮನದಲ್ಲೇ ಮುಗಿದುಹೋಗಿದೆ. ಅವಳೊಮ್ಮೆ 27ನೇ ರ್‍ಯಾಂಕಿನಲ್ಲಿದ್ದಳೆಂಬುದೇ ದೊಡ್ಡ ಸಾಧನೆ. 2005 ಹಾಗೂ 2009ರ ಆಸ್ಟ್ರೇಲಿಯಾದ ಓಪನ್, 2007ರ ಫ್ರೆಂಚ್ ಓಪನ್, 2005, 07, 08, 09ರ ವಿಂಬಲ್ಡನ್‌ನಲ್ಲಿ ಸಾನಿಯಾ 2ನೇ ಸುತ್ತು ದಾಟಿ ಮುಂದಕ್ಕೆ ಹೋಗಲೇ ಇಲ್ಲ. ಇವಳು ಚೆನ್ನಾಗಿ ಅಲಂಕಾರ ಮಾಡಿಕೊಂಡು ಟೆನ್ನಿಸ್ ಕೋರ್ಟ್‌ಗೆ ಬಂದು ನಿಂತ ತಕ್ಷಣ ಪ್ರತಿಸ್ಪರ್ಧಿ ಆಟಗಾರ್ತಿಯರು ಮುಖಮೂತಿ ನೋಡದೆ ಚಚ್ಚಿ ಬಾರಿಸಿ ಮನೆಗೆ ಕಳಿಸುತ್ತಿದ್ದರು. ಹೀಗೆ ಸಾನಿಯಾಳನ್ನು ಸೋಲಿಸಿರುವ ಅನೇಕರು ಈಗ ವಿಶ್ವ ಟೆನ್ನಿಸ್‌ನಲ್ಲಿ ಅಡ್ರೆಸ್ ಇರದಂತವರಾಗಿದ್ದಾರೆಂದರೆ ಅಲ್ಲಿ ಅದಿನ್ನೆಷ್ಟು ಕಠಿಣ ಪೈಪೋಟಿ ಇರಬಹುದು ಯೋಚಿಸಿ?

ಸಾನಿಯಾ ಒಂದು ರೀತಿ ಭಾರತದ ಅನ್ನಾ ಕಾರ್ನಿಕೋವ ಇದ್ದಂತೆ. ತನ್ನ ಆಟದ ಪ್ರತಿಭೆಗಿಂತ ಅಂದಚೆಂದಗಳನ್ನೇ ಬಂಡವಾಳ ಮಾಡಿಕೊಂಡು ಮೆರೆಯುವ ಪೈಕಿ. ಅಂಥವರು ಬೇಗನೆ ಮೀಡಿಯಾಗಳ ಮುದ್ದಿನ ಮರಿಗಳಾಗಿ ಬಿಡುತ್ತಾರೆ. ನಮ್ಮ ಮೀಡಿಯಾಗಳು ಎಂದಾದರೂ ಪಿ.ಟಿ.ಉಷಾ, ಕರ್ಣಂ ಮಲ್ಲೇಶ್ವರಿಯರನ್ನು ಹುಡುಕಿಕೊಂಡು ಹೋಗಿ ಮಾತನಾಡಿಸಿದ ಉದಾಹರಣೆ ಇದೆಯಾ ಹೇಳಿ? ಇನ್ನೊಂದು ವಾಸ್ತವ ಏನೆಂದರೆ ಭಾರತದ ಇವತ್ತಿನ ನಿಜವಾದ ಕ್ರೀಡಾತಾರೆ ಅಂದರೆ ಬ್ಯಾಡ್ಮಿಂಟನ್ ಆಡುವ ಸೈನಾ ನೆಹ್ವಾಲ್. ಈಕೆ ಅನೇಕ ಚಾಂಪಿಯನ್‌ಶಿಪ್ ಗೆದ್ದಿದ್ದಾಳೆ. ಮೀಡಿಯಾಗಳು ಬಯಸುವಷ್ಟು ಬೆಳ್ಳಗೂ ಇದ್ದಾಳೆ, ಇಂಗ್ಲಿಷೂ ಮಾತಾಡುತ್ತಾಳೆ. ಆದರೆ ಶ್ರೀಮಂತಳಾ? ಗೊತ್ತಿಲ್ಲ!

ಆದರೆ ಸೈನಾಗೆ ತನ್ನ ಆಟ ಬಿಟ್ಟು ಅನ್ಯ ವಿಷಯಗಳತ್ತ ಡೈವರ್ಷನ್ ಇಲ್ಲ. ಅವಳು ಸಾನಿಯಾ ತರ ಒಂದು ಮ್ಯಾಚ್ ಗೆದ್ದು ಹತ್ತು ಮಾತಾಡುವ ಪೈಕಿಯಲ್ಲ. ಬದಲಾಗಿ ಹತ್ತು ಮ್ಯಾಚ್ ಗೆದ್ದಾಗಲೂ ಒಂದೂ ಮಾತಾಡದ ಆಟಗಾರ್ತಿ. ಚೀಪ್ ಪಬ್ಲಿಸಿಟಿ ಬಯಸದವಳು. ಇವರೆಲ್ಲರಿಗೂ ಹೋಲಿಸಿದರೆ ಈ ಸಾನಿಯಾ ಮೀಡಿಯೋಕರ್ ಕ್ರೀಡಾಪಟು ಮಾತ್ರ. ಅವಳ ಮದುವೆ ಈಗ ಅವಳ ಇಷ್ಟದಂತೆಯೇ ನಡೆಯುತ್ತಿದೆ. ಶೋಯೆಬ್ ಮಲ್ಲಿಕ್‌ನ ಅವಿವೇಕ ಕೊನೆಗೊಂಡಿದೆ. ಜಗಳ ತೆಗೆದಿದ್ದ ಆಯಿಷಾ ಸಿದ್ದಿಕಿ ತನ್ನ ಸ್ವಾಭಿಮಾನದ ಹೋರಾಟದಲ್ಲಿ ಜಯಗಳಿಸಿದ್ದಾಳೆ. ಆಯಿಷಾಳ ಅಮ್ಮ ಅದೆಷ್ಟು ದೊಡ್ಡ ಗುಣದ ಹೆಣ್ಣೆಂದರೆ "ವಿವಾದ ಮುಗಿದಿದೆ. ಸಾನಿಯಾ ಶೋಯೆಬ್ ಮದುವೆಯಾಗಿ ಚೆನ್ನಾಗಿರಲಿ" ಅಂತ ಹರಸಿದ್ದಾರೆ.

ಅಂದಹಾಗೆ, ಈ ಜೋಡಿ ಮದುವೆ ನಂತರ ದುಬಾಯ್‌ನಲ್ಲಿ ನೆಲೆಸುತ್ತಿದ್ದಾರೆ.

ಯಾಕೆ ಗೊತ್ತಾ?

ದುಬಾಯ್‌ನಲ್ಲಿ ಹಣ ಇದೆ. ಶ್ರೀಮಂತ ಕ್ರೀಡಾಪ್ರೇಮಿಗಳಿದ್ದಾರೆ. ಆಟದ ಮಜಾ ಬೇಕಿರುವ ಜನರೂ ಇದ್ದಾರೆ. ಆದರೆ ಅಲ್ಲಿ ಯಾವ ಕ್ರೀಡಾಪಟುಗಳೂ ಇಲ್ಲ.

ಈ ಕ್ರಿಕೆಟರ್ ಶೋಯೆಬ್‌ಗೆ ಹಾಗೂ ಟೆನ್ನಿಸ್‌ನ 1ನೇ ಸುತ್ತಿನ ಆಟಗಾರ್ತಿ ಸಾನಿಯಾಗೆ, ದುಬಾಯ್‌ಗೆ ಹೋದರೆ ಚೆನ್ನಾಗಿ ಹಣ ಮಾಡಬಹುದೆಂಬುದು ಗೊತ್ತಾಗಿದೆ.

ಸ್ವಾಮಿ....

ಸಾನಿಯಾ ಬದಲಾಗಲ್ಲ.

ಸಾನಿಯಾ ಸೂಪರ್ ಸೇಲ್ ಆಗುತ್ತಾಳೆ.

● ಪಾರ್ವತೀಶ



ರಾಘವೇಶನ ನಕಲಿ ಸಿಡಿ ಅಸಲಿಯತ್ತೇನು?

▸▸ 10

ಅಮಾಯಕ ವಿದ್ಯಾರ್ಥಿನಿಗಾದ ಲೈಂಗಿಕ ಕಿರುಕುಳದಿಂದ ಸ್ವಾಮೀಜಿಯ ಇಮೇಜು ನೆಲಕಚ್ಚಿ ಹೋಗಿತ್ತು. ಹೀಗೆ ಹುಡುಗಿಯನ್ನು ಸತಾಯಿಸಿದವನು ರಾಘವೇಶನ ಪೂರ್ವಾಶ್ರಮದ ಭಾವನೂ, ಹಾಲಿ ಆಶ್ರಮದ ಆಪ್ತ ಮಿತ್ರನೂ ಆದ ಶರ್ಮನೇ ಆಗಿರುವುದು ರಾಘವೇಶನ ಹೈರಾಣಾಗಿಸಿಬಿಟ್ಟಿದೆ. ಹವ್ಯಕರೆ ಆತನ ಛೀ-ಥೂ ಎಂದು ಮೂದಲಿಸುತ್ತಿದ್ದಾರೆ.

ಇತ್ತ ಗೋಕರ್ಣದಲ್ಲಂತೂ ರಾಘವೇಶನಿಗೆ ಕವಡೆ ಕಿಮ್ಮತ್ತು ಇಲ್ಲವಾಗಿದೆ. ಸ್ಥಳೀಯ ಶೂದ್ರರು-ಬ್ರಾಹ್ಮಣರು ಒಟ್ಟಾಗಿಯೇ ತಿರುಗಿಬಿದ್ದಿದ್ದಾರೆ. ಕೋರ್ಟುಗಳಲ್ಲಂತೂ ಒಂದರಮೇಲೊಂದರಂತೆ ಹಿನ್ನಡೆ-ಮುಖಭಂಗಗಳಾಗುತ್ತಿವೆ. ಮೊನ್ನೆ-ಮೊನ್ನೆಯಷ್ಟೇ ಹೈಕೋರ್ಟ್‌ನ ಧಾರವಾಡ ವಿಭಾಗೀಯ ಪೀಠ ಗೋಕರ್ಣ ದೇವಸ್ಥಾನ ಹಸ್ತಾಂತರದ ವಿರುದ್ಧದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ವಿಚಾರಣೆಗೆ ಅಂಗೀಕರಿಸಿದೆ. ಇದೊಂದು ಸಾರ್ವಜನಿಕ ಹಿತಾಸಕ್ತಿ ಕೇಸ್ ಅಲ್ಲವೆಂದು ಬಿಂಬಿಸಲು ಸ್ವಾಮಿ, ಮಠ ಮತ್ತು ಯಡ್ಡಿ ಸರ್ಕಾರ ತಿಪ್ಪರಲಾಗ ಹಾಕಿತ್ತು.

ಅಡಿಕೆ ಕದ್ದ ಮಾನ

ಇದರಿಂದ ಕಂಗೆಟ್ಟಿರುವ ರಾಘವೇಶ್ವರ ಸ್ವಾಮಿ ಬಳಗವೇನಾದರೂ ಸಾರ್ವಜನಿಕ ಸಿಂಪಥಿ ಪಡೆಯಲು ನಕಲಿ ಸಿಡಿ ತಯಾರಿಕೆಗೆ ಕೈಹಾಕಿತ್ತೇ? ರಾಘವೇಶ ತನ್ನ ಖೋಟಾ ಗೋಸತ್ರ, ಗೋಕರ್ಣ ದೇವಾಲಯ ಗುಳುಂ, ಅರಣ್ಯ ಅತಿಕ್ರಮಣ ಮತ್ತು ಗುರುಕುಲದ ಲೈಂಗಿಕ ಹಗರಣ, ಮಲ್ಲಿಕಾ ಶೆರಾವತ್ ಎಂಬ ಸೆಕ್ಸ್ ಐಟಂ ಬೆಡಗಿಯ ಜತೆಗಿನ ದೋಸ್ತಿ, ಒಂದು ಕೋಟಿ ಎಲ್‌ಐಸಿ ವಿಮೆ ಮಹಿಳಾ ಏಜೆಂಟಳಿಗೆ ಕೊಟ್ಟದ್ದು, ಅಸ್ಸಾಮ್ ಕಡೆಯ ಅನಾಥ ಹರೆಯದ ಹುಡುಗೀರನ್ನು ರಕ್ಷಿಸುತ್ತಿರುವುದು, ಇಂಟರ್‌ನೆಟ್ ಚಾಟಿಂಗ್, ಬಡಕಲು ದನಗಳನ್ನು 'ಕಟುಕರಿಗೆ' ಕೊಡುತ್ತಿರುವುದೆಲ್ಲ ರಾಘವೇಶನ ಬಣ್ಣ ಬಯಲಾಗಿಸಿದೆ. ಇದೆಲ್ಲದರಿಂದ ಬಚಾವಾಗಿ 'ಸುಜನ'ನೆಂಬ ಪೋಸು ಕೊಡಲು ಪೊಲೀಸರ, ಸರ್ಕಾರ ಬಳಸಿಕೊಂಡು ಸಿಡಿ ನಾಟಕ ನಡೆಸಿದರೆ?

ಇನ್ನೊಂದು ವಾದವೂ ಇದೆ. ನಿತ್ಯಾನಂದನ ರಾಸಲೀಲಾ ವಿನೋದರ ಸಿಡಿ ಬಂದಬಳಿಕ ರಾಘವೇಶನ ವಿರೋಧಿ ವೈದಿಕ ಬಳಗಕ್ಕೆ ಅಂಥದೇ ಒಂದು ವಿಡಿಯೋ ಕ್ಲಿಪಿಂಗ್ ತರುವ ಪ್ರೇರಣೆ ಆಯಿತಾ ಎಂಬುದು ಜಿಜ್ಞಾಸೆಯ ವಿಷಯ.


ಈ ವಿಡಿಯೋ ಕ್ಲಿಪಿಂಗ್‌ನಲ್ಲಿ ಸೆಕ್ಸ್ ಚಿತ್ರಗಳೇನೂ ಇರಲಿಲ್ಲವಂತೆ. ರಾಘವೇಶ ಮಠದ ಭಕ್ತೆಯರ ಜತೆ ಮುಕ್ತವಾಗಿ ಬೆರೆತಿರುವ ತುಣುಕು, ವಿದೇಶಿಯೊಬ್ಬ ರಾಘವೇಶ ಗೋಕರ್ಣ ಬೀಚಲ್ಲಿ ಚೆಂದದ ಚೆಲುವೆಯೊಬ್ಬಳ ಜತೆ ಮಾತಾಡುತ್ತ ನಡೆದಾಡುತ್ತಿದ್ದಾಗ ಚಿತ್ರಿಸಿದ್ದನ್ನು ಯೂ-ಟ್ಯೂಬ್‌ಗೆ "Raghveshwar walks with A Beautiful Girl" ಎಂಬ ಟಾರ್ಗೆಟ್‌ನಲ್ಲಿ ಸೇರಿಸಿದ್ದನ್ನು ನಟಿ ಮಲ್ಲಿಕಾ ಶೆರಾವತ್ ಜತೆ ರಾಘವೇಶ ಒಡನಾಡಿದ್ದು ಮುಂತಾದ ಮಠದ ವೆಬ್‌ಸೈಟ್‌ನಲ್ಲಿರುವುದಕ್ಕೆ ಹಲವು ರಸಿಕ ಗಳಿಗೆಗಳನ್ನು ಸೇರಿಸಿ ಸಿಡಿ ಮಾಡಲು ಗೋಕರ್ಣದ ವೈದಿಕ ಪಡೆ ಪ್ಲಾನ್ ಮಾಡಿರುವ ಸಾಧ್ಯತೆ ಇದೆ.

ಇದ್ಯೆಗೋ ರಾಘವನ ಪಟಾಲಮ್ಮಿಗೆ ಗೊತ್ತಾಗಿದೆ. ಈ ಗುಟ್ಟು ರಟ್ಟಾಗುವ ಮೊದಲೇ ವಿರೋಧಿಗಳ ಮೇಲೆ ರೇಡು ಹಾಕಿಸಿ, ಹೆಡೆಮುರಿಕಟ್ಟಿ ಹೈರಾಣಾಗಿಸಲು ರಾಘವ ಸರ್ಕಾರಿಯಂತ್ರ, ದುರುಪಯೋಗಿಸಿಕೊಂಡಿರುವ ಗುಮಾನಿಗಳಿವೆ. ಸಾಕ್ಷಾತ್ ಸಿಎಮ್ಮೇ ಬೆನ್ನಿಗಿರುವಾಗ ಇಂಥ ದಮನ-ದಾಳಿ ವೈರಿಗಳ ಮೇಲೆ ಮೂಡಿಸುವುದು ರಾಘವನಿಗೆ ಯಾವ ಲೆಕ್ಕಾ? ಅದೇನೆ ಇರಲಿ, ಸ್ವಾಮಿ ರಾಘವ ಡಿಮೊರಲೈಸ್ ಆಗಿರುವುದಂತೂ ದಿಟ. ಆ ನಕಲಿ ಸಿಡಿ ಬಂದಿರಲಿ, ಅಥವಾ ಜನರ ದಿಕ್ಕು ತಪ್ಪಿಸಲು ಮಠದವರೇ ಬೋಗಸ್ ಸಿಡಿ ಸುದ್ದಿಯ ಗೊಂದಲ-ಗಲಾಟೆ ಸೃಷ್ಟಿಸಿರಲಿ ಹವ್ಯಕರ ಗುರುಪೀಠದ ಸ್ವಾಮಿಯ ಮಾನ-ಮರ್ಯಾದೆ ಹರಾಜಾಗಿ ಹೋಗಿದೆ. ರಾಘವನ ಆಚಾರ-ವಿಚಾರಗಳು ಹಲವು ಅನುಮಾನ-ಆತಂಕ ಮೂಡಿಸಿದೆ.

ಅಡಿಕೆ ಕದ್ದ ಮಾನ ಆನೆ ಕೊಟ್ಟರೆ ಬರುವುದೇ? ●


ಗುಲಬರ್ಗಾ: ಅಮಾಯಕರ ಮೇಲೆ ಪೊಲೀಸ್ ಕ್ರೌರ್ಯ!

ನರ್ಸ್ ರೇಣುಕಾನ ಸಾಂತ್ವನ



ಎಸ್ಪಿ ಪದ್ಮನಾಭನ್ ಇರೋತನಕ ಗುಲ್ಬರ್ಗಾ ಜನತೆಗೆ ಪೊಲೀಸ್ ಕಿರುಕುಳ ತಪ್ಪಿದ್ದಲ್ಲ ಅನ್ನಿಸುತ್ತದೆ. ಮೊನ್ನೇ ಈತ ತನ್ನ ಪೊಲೀಸ್ ಎಂಬ ಗೂಂಡಾಪಡೆಯನ್ನು ಕಟ್ಟಿಕೊಂಡು ದಲಿತರ ಮೇಲೆ ಮಾಡಿದ ದೌರ್ಜನ್ಯ ಎಂಥವರನ್ನೂ ಮೈನಡುಗಿಸುತ್ತದೆ.

17-2-2009 ರಂದು ಜಿಲ್ಲೆಯ ಸಾವಳಗಿಯಲ್ಲಿ ಗುಲಬರ್ಗಾದ ರೈಲ್ವೆ ನಿಲ್ದಾಣದಲ್ಲಿ ಚಹಾವನ್ನು ಮಾರಿ ಜೀವನ ನಡೆಸುತ್ತಿದ್ದ ಶಂಕರ ಹಣಮಂತ ನಾಟೇಕಾರ ಎಂಬ ಹದಿಹರೆಯದ ಯುವಕ ಕೊಲೆಯಾಗಿ ಹೋದ. ಈ ಬರ್ಬರ ಕೊಲೆಗೆ ಕಾರಣರ್ಯಾರು ಎಂದು ಸ್ಪಷ್ಟವಾಗಿ ಗೊತ್ತಿದ್ದರೂ ಪೋಲಿಸರು ಕೈಚೆಲ್ಲಿ ಕುಳಿತುಕೊಂಡರು. ಕಾಟಾಚಾರಕ್ಕೆಂಬಂತೆ ಮಲಂಗ, ಅನಿಫ, ಜಮೀಲ ಪಟೇಲ, ಶೇಖ ಅಹ್ಮದ, ಹುಸ್ಮಾನ ಹಾಗೂ ಶಮೀರ ಎಂಬ ಯುವಕರನ್ನು ಬಂಧಿಸಿ ಜೈಲಿಗೆ ಕಳಿಸುವ ನಾಟಕವನ್ನು ಮಾಡಿದರು. ಆದರೆ ಇವರೆಲ್ಲರ ಮೇಲೆ ಕೊಲೆಯ ಕೇಸು ಜಡಿದು ಕಾರಾಗೃಹಕ್ಕೆ ಕಳಿಸದೆ ಯಾವುದೋ ಪುಟಗೋಸಿ ಕೇಸು ಹಾಕಿ ಜೈಲಿನಿಂದ ಮತ್ತೆ ಹೊರಬರುವಂತೆ ನೋಡಿಕೊಂಡರು.



ಕೊಲೆಗಾರ ಮಲಂಗ

ಜೈಲಿನಿಂದ ಹೊರಬಂದುದೇ ತಡ ಮಲಂಗ, ಶೇಖ ಅಹ್ಮದ, ಶಮೀರ ಎಂಬ ಹುಡುಗರು ದಿ.29-3-2010 ರಂದು ಸಾಯಂಕಾಲವೆ ಗುಲಬರ್ಗಾದ ಜೇವರ್ಗಿ ರಸ್ತೆಯಲ್ಲಿರುವ ಚಿತ್ತಾರಿ ಕಟ್ಟೆಗೆ ಅಡ್ಡಾ ಬಳಿ ಶಂಕರ ಹಣಮಂತ ನಾಟೇಕಾರನ ಕೊಲೆಗೆ ಮುಖ್ಯ ಸಾಕ್ಷಿದಾರನಾಗಿದ್ದ ಅವರ ಸಹೋದರ ಕೃಷ್ಣ ಹಣಮಂತ ನಾಟೇಕಾರ ಎಂಬ ಯುವಕನ ಮೇಲೆ ದಾಳಿ ಮಾಡಿ ರಕ್ತದೋಕುಳಿ ಹರಿಸಿ ಪರಾರಿಯಾಗಿಬಿಟ್ಟದ್ದಾರೆ.



ಕೊಲೆಯಾದ ಕೃಷ್ಣ

ಗುಲಬರ್ಗಾದ ತಾರಫೈಲ್ ನಿವಾಸಿಗಳಾದ ಹಣಮಂತ ನಾಟೇಕಾರ ಕುಟುಂಬ ಧೃತಿಗೆಟ್ಟು ಕಂಗಾಲಾಗಿಹೋಗಿದೆ. ದುಡಿಮೆ ಮಾಡಿ ತಂದುಹಾಕುವ ಇಬ್ಬರು ಮಕ್ಕಳನ್ನು ಕಳಕೊಂಡ ನಾಟೇಕಾರ ಹಣಮಂತನ ಕುಟುಂಬದ ಹೆಣ್ಣು ಗಂಡುಗಳೆಲ್ಲ ಸೇರಿ ಅಳುತ್ತ ಕರೆಯುತ್ತ ತಮ್ಮ ಬಂಧು-ಬಳಗದೊಂದಿಗೆ ಕೊಲೆಗಡುಕರಿಗೆ ಬಲಿಯಾಗಿ, ಅನಾಥಶವವಾಗಿ ಬಿದ್ದ ಕೃಷ್ಣ ಶವವನ್ನು ನೋಡುವುದಕ್ಕೆ ಧಾವಿಸಿ ಹೊರಟಿದ್ದಾರೆ. ಆ ದಾರಿಯಲ್ಲಿಯೆ ಬರುವ ಕೊಲೆಗಡುಕರ ಮನೆಗಳು ಇರುವುದರಿಂದ ಇವರ ಆಕ್ರೋಶ ಭುಗಿಲೆದ್ದಿದೆ.



ಶಂಕರ

ತಮ್ಮ ಕರುಳ ಕುಡಿಯನ್ನು ಕಳಕೊಂಡ ನೋವು ಕುಟುಂಬಕ್ಕಿತ್ತು. 'ಶಂಕರ, ಕೃಷ್ಣ ನಾಟೇಕಾರ ಒಳ್ಳೆಯ ಹುಡುಗರು; ದುಡಿದು ಉಣ್ಣುತ್ತಿದ್ದರು. ಯಾರಿಗೂ ಕೇಡು ಬಗೆದವರಲ್ಲ, ಚಹಾ ಮಾರಿಕೊಂಡು ನಿತ್ಯದ ಜೀವನ ಸವೆಸುತ್ತಿದ್ದರು. ಇಂಥ ಒಳ್ಳೆಯ ಹುಡುಗರನ್ನು ಕೊಲೆ ಮಾಡಿದ ರಕ್ಕಸರಿಗೆ ಶಿಕ್ಷೆಯಾಗಬೇಕು' ಎಂದು ತಾರಫೈಲ್ ನಿವಾಸಿಗಳೆಲ್ಲರೂ ತಮ್ಮ ಮನದ ಇಂಗಿತ ವ್ಯಕ್ತಪಡಿಸುತ್ತ ಶವವಾಗಿ ರಕ್ತದ ಮಡುವಿನಲ್ಲಿ ಬಿದ್ದ ಕೃಷ್ಣನನ್ನು ನೋಡಲು ಜೇವರ್ಗಿಯ ರಸ್ತೆಗೆ ಕಾಲು ದಾರಿಯಲ್ಲಿ ಹೊರಟಿದ್ದಾರೆ.

ಆದರೆ ಯೋಚಿಸುವುದಕ್ಕೂ ಪುರುಸೊತ್ತು ಇಲ್ಲದಂತೆ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ತನ್ನ ಪೋಲಿಸ್ ದಂಡಿನೊಂದಿಗೆ ಬಂದು ತಾರಫೈಲ್ ನಿವಾಸಿಗಳ ಮನೆ ಮನೆ ಹೊಕ್ಕು, ಬಸುರಿ-ಬಾಣಂತಿಯರೆನ್ನದೆ, ಮಕ್ಕಳನ್ನು ಗಮನಿಸದೆ ಬೆತ್ತದ ರುಚಿ ತೋರಿಸಿದ್ದಾನೆ. ಗಾಳಿಯಲ್ಲಿ ಗುಂಡು ಹಾರಿಸುತ್ತ ನಾಲ್ಕೆಂಟು ಜನ ಪೊಲೀಸರು ಒಬ್ಬೊಬ್ಬ ವ್ಯಕ್ತಿಯನ್ನು ಹಿಡಿದುಕೊಂಡು ಬಾಸುಂಡೆ ಬರುವಂತೆ, ಬರುವಂತೆ ಹೊಡೆದು ರಕ್ತದೋಕುಳಿ ಆಡಿದ್ದಾರೆ. ಪೊಲೀಸರ ಆರ್ಭಟ ನೋಡಿ ಹೆದರಿ ಕಂಗಾಲಾಗಿ ಮನೆಯ ಬಾಗಿಲು ಕಿಟಕಿ ಹಾಕಿ ಕುಳಿತವರನ್ನೂ ಬಿಡದೆ ಬಾಗಿಲು ಮುರಿದು, ಮನೆ ಹೊಕ್ಕು ದಾಂಧಲೆ ಮಾಡಿದ್ದಾರೆ. ಪಿ.ಯು.ಸಿ ಪರೀಕ್ಷೆಗಾಗಿ ಓದುತ್ತಿದ್ದ ಅವಿನಾಶ ರುದ್ರಪ್ಪ ಎಂಬ ಎಳೆಯ ಹುಡುಗನಿಗೆ ಮನಬಂದಂತೆ ಜಡಿದಿದ್ದಾರೆ. ಸ್ಯಾಮುವೇಲ್ ಕರಿಗುದ್ದ ಎಂಬ ಹೃದ್ರೋಗಿಗೂ ಆತನ ಅನಾರೋಗ್ಯವನ್ನು ಗಮನಿಸದೆ ಜರ್ಜರಿತಗೊಳಿಸಿದ್ದಾರೆ.

ಮನೆ ಕಟ್ಟುವ ಗೌಂಡಿ ಕೆಲಸವನ್ನು ಮಾಡಿಕೊಂಡಿದ್ದ ಅನಿಲ್‌ಕುಮಾರ, ಚರ್ಚ್‌ನಲ್ಲಿ ಪಾದ್ರಿಯಾಗಿ ಕೆಲಸ ಮಾಡುತ್ತಿದ್ದ ಯೇಸುದಾಸ, ಮ್ಯಾಥು, ವಾಡೇಕಾರ್ ಮುಂತಾದ ಸುಮಾರು ಎಪ್ಪತ್ತು ಜನಗಳನ್ನು ಬಂಧಿಸಿ ಬೆಳಗಾಂವಿಯ ಹಿಂಡಲಗಾ ಜೇಲಿಗೆ ಕಳಿಸಿದ್ದಾರೆ. ಇವರೆಲ್ಲರ ಮೇಲೆಯೂ 307 ಎಂಬ ಕೊಲೆಯ ಕೇಸನ್ನು ದಾಖಲೆ ಮಾಡಿದ್ದಾರೆ.

ಆಶ್ಚರ್ಯದ ಸಂಗತಿಯೆಂದರೆ ಕೊಲೆಗಡುಕರನ್ನು ಹಿಡಿಯಬೇಕಾಗಿದ್ದ ಪೊಲೀಸರು ಹೀಗೆ ಏಕಾಏಕಿ ತಾರಫೈಲ್ ಬಡಾವಣೆಗೆ ನುಗ್ಗಿ ಅಮಾಯಕ ಜನರಿಗೆ ತಮ್ಮ ಬೆತ್ತದಿಂದ ಬಾರಿಸಿದ್ದು ಏತಕ್ಕೆ? ಹೋಗಲಿ ಪೊಲೀಸ್ ವರಿಷ್ಠಾಧಿಕಾರಿಯೆ ಸ್ವತಃ ಬಂದು ತನ್ನ ನೇತೃತ್ವದಲ್ಲಿಯೆ ಎಲ್ಲ ಸಾಮಾನ್ಯರೊಂದಿಗೆ ಅನುಚಿತವಾಗಿ ವರ್ತಿಸಿದ್ದಲ್ಲದೆ ಪೊಲೀಸರಿಂದ ದೌರ್ಜನ್ಯ ಮಾಡಿಸಿದ್ದು ಏತಕ್ಕೆ? ಯಾರಾದರೂ ಕೊಲೆಯಾದರೆ, ಕಳ್ಳತನ ನಡೆದರೆ, ಜಗಳಗಳು ಶುರುವಾಗಿ ಅವು ತಾರಕಕ್ಕೆ ಏರುತ್ತಿದ್ದರೆ ಸ್ಪಂದಿಸದ ಪೋಲಿಸರು ಏಕಾಏಕಿ ತಾರಫೈಲ್‌ಗೆ ನುಗ್ಗಿ ಅಕ್ಷರಶಃ ಪಾಳೇಗಾರರಂತೆ ವರ್ತಿಸಿದ್ದು ಯಾವುದಕ್ಕಾಗಿ?

ಕೊಲೆಯಾದವರು ಕೋಲಿ ಸಮಾಜಕ್ಕೆ ಸೇರಿದವರು. ಕೊಲೆ ಮಾಡಿದವರೆಂದು ಆರೋಪಿಸಲಾಗುವವರು ಮುಸ್ಲಿಂ ವರ್ಗಕ್ಕೆ ಸೇರಿದವರು. ಆದರೆ ಅಮಾಯಕರಾದ, ದಿನನಿತ್ಯ ದುಡಿದು ಜೀವನ ಸವೆಸುವ ಆರ್ಥಿಕವಾಗಿ ತೀರಾ ಹಿಂದುಳಿದ ಹೊಲೆ-ಮಾದಿಗ ಜನಾಂಗದವರ ಮೇಲೆ ಪೊಲೀಸರು ನಡೆಸಿದ ಈ ಕ್ರೌರ್ಯ ಎಂಥವರ ಎದೆಯನ್ನೂ ನಡುಗಿಸುವಂಥದ್ದು. ಸಿಕ್ಕಸಿಕ್ಕವರ ಮನೆ ನುಗ್ಗಿ ಪೋಲಿಸರು ದಾಂಧಲೆ ಮಾಡಿದ್ದಲ್ಲದೆ "ಈ ಸೂಳೆಮಕ್ಕಳಿಗೆ ಕೊಬ್ಬು ಬಂದಿದೆ. ಇವರ ಕೊನೆಗಾಲ ಸಮೀಪಿಸಿದೆ. ಈ ಮಾದರ ಹೊಲೆಯರ ಬೋಳಿ ಮಕ್ಕಳಿಗೆಲ್ಲ ಒಂದು ಗತಿ ಕಾಣಿಸಿರಿ" ಎಂದು ಪೊಲೀಸ್ ವರಿಷ್ಠಾಧಿಕಾರಿಯೆ ನಿಂತು ಕೂಗುತ್ತಿದ್ದರೆ ಏನೆನ್ನಬೇಕೋ ತಿಳಿಯುತ್ತಿಲ್ಲ!?



ಪೊಲೀಸ್ ದೌರ್ಜನ್ಯದ ವಿರುದ್ಧ ಪ್ರತಿಭಟನೆ

ಗುಲಬರ್ಗಾ ರೈಲ್ವೆ ನಿಲ್ದಾಣದ ಹತ್ತಿರ ಬರುವ ತಾರಫೈಲ್ ಪೊಲೀಸ್ ದೌರ್ಜನ್ಯಕ್ಕೆ ಒಳಗಾಗಿ ತತ್ತರಗೊಂಡಿದೆ. ದಿನ ನಿತ್ಯ ಗಿಜಿಗುಡುತ್ತಿದ್ದ ರಸ್ತೆಗಳು ಇಂದು ಬಿಕೋ ಎನ್ನುವಂತೆ ಕಾಣುತ್ತಿವೆ. ಯಾರಾದರೂ ಈ ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ ಈ ಗಲ್ಲಿಯ ಜನಗಳು ಭಯಭೀತರಾಗಿ ಬಾಗಿಲನ್ನು ಅರೆತೆರೆದು ನೋಡುತ್ತಿದ್ದಾರೆ. ಯಾರಾದರೂ ಜೋರಾಗಿ ಮಾತಾಡಿದರೆ ಯಾವ ಮಾಯದಿಂದ ಪೊಲೀಸರು ನುಗ್ಗಿ ನಮ್ಮನ್ನೆಲ್ಲ ಹೊಡೆದು, ಬಡಿದು ಜೈಲಿಗೆ ಅಟ್ಟುತ್ತಾರೋ? ಎಂಬ ಭಯದಿಂದ ಸಾಕಷ್ಟು ದುಃಖವಾಗಿದ್ದರೂ ಅದನ್ನು ತೋರ್ಪಡಿಸಿಕೊಳ್ಳದ ಅಸಹಾಯಕತೆಗೆ ಅವರೆಲ್ಲ ಸಿಲುಕಿದ್ದಾರೆ.

ಕಳ್ಳಕಾಕರು, ಕೊಲೆಗಡುಕರು, ಮಾಫಿಯಾ ಜನಗಳಿಂದ ಜನಸಾಮಾನ್ಯನಿಗೆ ರಕ್ಷಣೆ ಒದಗಿಸಬೇಕಾದ ಪೊಲೀಸರು ಇಲ್ಲಿ ಸಂಪೂರ್ಣ ಉಲ್ಟಾ ಹೊಡೆದಿದ್ದಾರೆ. ಕಳ್ಳಕಾಕರನ್ನು ಸುಪಾರಿಗಳನ್ನು ಪೋಷಿಸುತ್ತ ಜನಸಾಮಾನ್ಯನ ಜೀವಗಳೊಂದಿಗೆ ಚೆಲ್ಲಾಟಕ್ಕೆ ಇಳಿದಿದ್ದಾರೆ. ಇಂಥ ಅವಿವೇಕಿ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸರಕಾರ ತಕ್ಕ ಪಾಠ ಕಲಿಸದೆ ಹೋದರೆ ಮುಂದೊಂದು ದಿನ ಜನಗಳೆ ದಂಗೆ ಎದ್ದು ರಸ್ತೆ ರಸ್ತೆಗಳಲ್ಲಿ ಪೊಲೀಸರನ್ನು ಅಟ್ಟಾಡಿಸಿಕೊಂಡು ಹೊಡೆದರೆ ಅದು ಆಶ್ಚರ್ಯದ ಸಂಗತಿಯಾಗಲಿಕ್ಕಿಲ್ಲವೆಂದೆನಿಸುತ್ತದೆ.

● ವಿಶ್ವಾರಾಧ್ಯ ಸತ್ಯಂಪೇಟೆ



ಕಾಂತಾ ಗರ್ಜನೆ

ಯಾವತ್ತೂ ಜನಪರ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವ [illegible] ಕಾಂತ ಎಂಬ ಉತ್ಸಾಹಿ ರಾಜಕಾರಣಿ ಮಾತ್ರ ಪೊಲೀಸರ ಕ್ರೌರ್ಯ [illegible] 6-4-2010 ರಂದು ಗುಲಬರ್ಗಾದಲ್ಲಿ ಬೃಹತ್ ಪ್ರತಿಭಟನ [illegible] ಜನಸ್ತೋಮ ಯಾವುದೇ ರಾಜಕಾರಣಿಗಳ ಸಭೆಗೂ [illegible] ಬಂದು ಸೇರಿ ತಮ್ಮ ಆಕ್ರೋಶ ವ್ಯಕ್ತ ಪಡಿಸಿದರು. ಬರೀ ತಾರಫೈಲ್ [illegible] ಎಲ್ಲಾ ಜಾತಿಜನಾಂಗದ ಮುಖಂಡರೂ ಸಭೆಯಲ್ಲಿ ಭಾಗವಹಿಸಿ [illegible]

ಕಲಬುರ್ಗಿಯ ಖಡಕ್ ಬಿಸಿಲಿಗೆ, ಪೊಲೀಸರ ದೌರ್ಜನ್ಯ [illegible] ಇಳಿದಿದ್ದು ಸರಕಾರದ ವಿಫಲತೆಗೆ ಹಿಡಿದ ಕನ್ನಡಿಯಾಗಿತ್ತು.

▼ ಎಂಡೋಸಲ್ಫಾನ್ ಸಂತ್ರಸ್ತರು




30 ವರ್ಷಗಳ ಹೋರಾಟದಿಂದ ಕಾಲಕಾಲಕ್ಕೆ ಬಂದು ಹೋದ ಶಾಸಕರಿಂದ ಸಾಧ್ಯವಾಗದ್ದು ಶೋಭಕ್ಕ ಲೀಲೆಯಿಂದ 3 ತಿಂಗಳಲ್ಲೇ ಆಯಿತು. 3 ದಿನದಲ್ಲೇ 3 ಗ್ರಾಮಗಳ ಸರ್ವೆ ನಡೆದು ಎಂಡೋಸಲ್ಫಾನ್ ಪೀಡಿತರ ಗಣತಿಯೂ ಆಯಿತು. ಕುಶಾಲಪ್ಪ ಗೌಡ ಮತ್ತು ಗ್ಯಾಂಗ್ ಆಡಿದ್ದೇ ಆಟವಾಯಿತು. ಪರಿಣಾಮವಾಗಿ ನಾಡ ಬಾಂಬ್ ಸ್ಫೋಟಗೊಂಡು ಕೈ ಕಳಕೊಂಡವರು, ವಯಸ್ಸಾಗಿ ನಡೆದಾಡದವರು, ಹೊಟ್ಟೆಗೆ ಊಟ ಸೇರದವರು, ನಿದ್ರೆ ಬಾರದವರು, ಎಂಡೋಸಲ್ಫಾನ್ ಪೀಡಿತರ ಪಟ್ಟಿಯಲ್ಲಿ ಸೇರಿದರು.

• ಪ್ರಕಾಶ್ ಪಿಂಟೊ

ಬೆಳ್ತಂಗಡಿಯ ಎಂಡೋಸಲ್ಫಾನ್ ಮಾಯೆಯ ಸುತ್ತ!

ಇಲ್ಲಿ ಕಾಡು ಕಡಿಯಬಾರದೆಂದು ಕಾನೂನು ಮಾಡಿದ ಕಾರವೇ ಕಾಡು ಕಡಿಯಿತು. ಅದರ ಪರಿಣಾಮವಾಗಿ ಗನ ಕಾಯಿಲೆ ಎಂಬ ವಿಚಿತ್ರ ರೋಗ ಕಾಣಿಸಿಕೊಂಡಿತ ಹಳ್ಳಿಯ 20 ಜನ ಮುಗ್ಧರನ್ನು ಬಲಿ ತೆಗೆದು ಂಡಿತು. ಕಾಡು ಕಡಿದು ಬಟ್ಟಾ ಬಯಲಾದ ನೂರು ್ಯರ್ ಪ್ರದೇಶದಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ಮವು ಗೇರು ತೋಪು ಮಾಡಿತು. ಗೇರು ಹೂವಿಗೆ ಳಿ ಇಡುವ ಕೀಟಗಳ ನಾಶಕ್ಕೆ ಹೊರಟ ಮವು ಹೆಲಿಕಾಪ್ಟರ್ ಮೂಲಕ ಎಂಡೋ ್ಫಾನ್‌ನಂತಹ ವಿಷವನ್ನು ಸಿಂಪಡಣೆ ಮಾಡಿ ಟಗಳ ನಾಶದ ಜತೆಗೇ ಈ ಪರಿಸರದ ತ್ತ ಮೂರು ಗ್ರಾಮಗಳ ಮನುಷ್ಯ ಸಂತ ಿ ನಾಶಕ್ಕೂ ಹೊರಟಿತು! ಹುಟ್ಟುತ್ತಲೇ ಂಗವಿಕಲರು, ಬುದ್ಧಿ ಮಾಂದ್ಯರು, ಚರ್ಮ ರೋಗದಿಂದ ಬಳಲುವವರು, ಕ್ಯಾನ್ಸರ್‌ನಂತಹ ಾರಕ ರೋಗದಿಂದ ಬಳಲುವವರು, ಾಗಲೇ ನರಳಿ ನರಳಿ ಸತ್ತವರು... ್ತಂಗಡಿ ತಾಲೂಕಿನ ಪಟ್ರಮೆ, ಕೊಕ್ಕಡ, ಎಂಬ ಗ್ರಾಮಗಳಲ್ಲಿ ನಡೆದಾಡಿದರೆ ತಹ ಚದುರಿದ ಚಿತ್ರಗಳು ಎಂತಹ ಹೃದಯಯನ್ನು ಕಲಕಿಬಿಡುತ್ತದೆ.



ಕುಶಾಲಪ್ಪ ಗೌಡ

80ರ ದಶಕದಲ್ಲಿ ಸರಕಾರವೇ ಗೇರು ಅಭಿವೃದ್ಧಿ ನಿಗಮದ ಮೂಲಕ ಈ ದುರಂತಕ್ಕೆ ನಾಂದಿ ಹಾಡಿತು ವರೆ ತಪ್ಪಲ್ಲ. ಬೆಳ್ತಂಗಡಿ ತಾಲೂಕಿನ ಪಟ್ರಮೆ, ಕೊಕ್ಕಡ, ಎಂಬ ಕುಗ್ರಾಮಗಳು ಸಮೃದ್ಧ ಕಾಡಿಂದ ಆವೃತ ದ್ದು ನಾಗರಿಕ ಸವಲತ್ತುಗಳಿಂದ ದೂರವಿದ್ದ ಪ್ರದೇಶ ತ್ತು. ಈ ಸಮೃದ್ಧ ಕಾಡನ್ನು ಕಡಿದು ಬೋಳು ಡಿ ಅಲ್ಲಿ ಗೇರು ನೆಟ್ಟು ಲಾಭ ಮಾಡಲು ಹೊರಟ ರಕ್ಕೆ ಅದರ ಹಿಂದುಮುಂದುಗಳನ್ನು ಅಧ್ಯಯನ ಡುವ ವ್ಯವಧಾನವಾಗಲೀ, ಪರಿಸರದ ಮೇಲೆ ಮತ್ತು ರ ಜನಜೀವನದ ಮೇಲೆ ಬೀರುವ ಅಡ್ಡ ಪರಿಣಾಮದ ಕಾಳಜಿಯಾಗಲೀ ಇರಲಿಲ್ಲ. ಇಷ್ಟಾಗಿಯೂ ಇಲ್ಲಿ ಗನಕಾಯಿಲೆ ಕಾಣಿಸಿಕೊಂಡು ಜನ ಸಾಯತೊಡಗಿ ಅಂದಿನ ಆಡಳಿತ ವ್ಯವಸ್ಥೆ ಇದು ಕಾಡು ಕಡಿದುದರ ವೆಂದು ಒಪ್ಪಲು ತಯಾರಿರಲಿಲ್ಲ. ಅದರ ಫಲವಾಗಿ ಮ ಘಟ್ಟ ಉಳಿಸಿ ಆಂದೋಲನ ಶುರುವಿಟ್ಟಿತು. ಶಿವರಾಮ ಕಾರಂತರು ಸೇರಿದಂತೆ ನೂರಾರು ಾಜಿಕ ಕಾರ್ಯಕರ್ತರು, ಪರಿಸರವಾದಿಗಳು ಓಡಾಡಿ ಾಗೃತಿ ಮೂಡಿಸುವ ಕೆಲಸ ಮಾಡಿದರು.

ಗಾಯದ ಮೇಲೆ ಬರೆ!

ಇಷ್ಟೇನು ಮಂಗನಕಾಯಿಲೆ ತಹಬದಿಗೆ ಬಂದಿತು ವಾಗ 'ಗಾಯದ ಮೇಲೆ ಬರೆ ಎನ್ನುವಂತೆ ಈ ಸದ ಜನರನ್ನು ಕಾಡಿದ ಭೀಕರ ಮಾರಿಯೇ ಎಂಡೋ ನ್. ಹೆಲಿಕಾಪ್ಟರ್ ಮೂಲಕ ಗೇರು ತೋಪಿಗೆ ಡೋಸಲ್ಫಾನ್ ಸಿಂಪಡಿಸಿದ ಪರಿಣಾಮವಾಗಿ ಮೂರು ಮಗಳ ನೀರು ಮತ್ತು ಮಣ್ಣು ವಿಷಮಯವಾಗಿ ಯಿತು. ಅದರ ಪರಿಣಾಮವಾಗಿ ನಿಧಾನವಾಗಿ ಧ ರೋಗರುಜಿನಗಳು ಕಾಣಿಸಿಕೊಳ್ಳತೊಡಗಿ ಜನರನ್ನು ಸ ನರಕಕ್ಕೆ ತಳ್ಳತೊಡಗಿತು. ಇದೇ ರೀತಿಯ ಗುಣಲಕ್ಷಣಗಳು ಕಾಸರಗೋಡಿನ ಪಡ್ರೆಯಲ್ಲಿ ಪ್ರಥಮವಾಗಿ ಬೆಳಕಿಗೆ ಬಂದಿತ್ತು. ಅಲ್ಲಿ ಇದರ ವಿರುದ್ಧ ಪರಿಸರವಾದಿ ಪಡ್ರೆಯವರು ಜನಾಂದೋಲನ ನಡೆಸಿ ಹೋರಾಟಕ್ಕಿಳಿದಾಗಲೇ ಇದೆಲ್ಲ ಹೊರಜಗತ್ತಿಗೆ ಗೊತ್ತಾಗಿದ್ದು. ಇದು ನಮ್ಮಲ್ಲಿಯೂ ಇದೆ ಎಂದು ಕಂಡುಹಿಡಿದ ಕೀರ್ತಿ ಪಟ್ರಮೆಯ ತೊಂಡೇಕಾಯಿ ಕೃಷಿಕ ಕಿಟ್ಟಣ್ಣ ಗೌಡರಿಗೆ ಸಲ್ಲಬೇಕು. ಕಿಟ್ಟಣ್ಣ ಗೌಡರ ಬಾಯಿಂದ ಈ ವಿಚಾರ ತಿಳಿದುಕೊಂಡ ಸ್ಥಳೀಯ ಸಾಮಾಜಿಕ ಕಾರ್ಯಕರ್ತ ಹರಿರಾವ್ ಮರ್ಡಾಜೆ, ಪಡ್ರೆಯವರನ್ನು ಇಲ್ಲಿಗೆ ಕರೆಸಿ ಉನ್ನತ ಅಧ್ಯಯನ ನಡೆಸಿ ಅದಕ್ಕೊಂದು ವ್ಯವಸ್ಥಿತ ಹೋರಾಟದ ರೂಪ ಕೊಟ್ಟರು. ಹರಿರಾವ್‌ರವರ ನೇತೃತ್ವದಲ್ಲಿ ಡಾ. ಮುರಳೀಧರ, ರಾಘವ ಪೂಜಾರಿ, ಜೋಸೆಫ್ ಪಿರೇರಾರನ್ನೊಳಗೊಂಡ ಜೀವ ರಕ್ಷಣಾ ಸಮಿತಿಯೊಂದು ರಚನೆಯಾಗಿ ಎಂಡೋಸಲ್ಫಾನ್ ವಿರುದ್ಧ ಜನಾಂದೋಲನ ರೂಪುಗೊಂಡು ಸರಕಾರದ ಕಣ್ಣು ತೆರೆಸುವ ಕೆಲಸ ನಡೆಯಿತು. ಅದರ ಪರಿಣಾಮವಾಗಿ 'ದಿ ಹಿಂದೂ' ಪತ್ರಿಕೆಯಲ್ಲಿ ಎಂಡೋಸಲ್ಫಾನ್ ಪರಿಣಾಮದ ವಿರುದ್ಧ ಪ್ರಥಮ ಲೇಖನ ಪ್ರಕಟಗೊಂಡಿತು. ಸಾಹಿತಿ ಸಾರಾ ಅಬೂಬಕ್ಕರ್ ಖುದ್ದು ಪಟ್ರಮೆಗೆ ಭೇಟಿಕೊಟ್ಟು ಇಲ್ಲಿನ ಜನರ ಕರುಣ ಕತೆಯನ್ನು 'ಲಂಕೇಶ್ ಪತ್ರಿಕೆ'ಯಲ್ಲಿ ಬರೆದರು. ಅದರ ಫಲವಾಗಿ ಪಟ್ರಮೆಗೆ ಸಂಪರ್ಕಸೇತುವೆ ನಿರ್ಮಾಣವಾಯಿತು. ಗ್ರಾಮ ಪಂಚಾಯತ್‌ನಿಂದ ಹಿಡಿದು ಜಿಲ್ಲಾ ಪಂಚಾಯತ್‌ವರೆಗೆ ಎಂಡೋಸಲ್ಫಾನ್ ವಿರುದ್ಧ ನಿರ್ಣಯಗಳಾದುವು, ಕೇಂದ್ರ ರಾಜ್ಯಗಳಿಂದ ಅಧ್ಯಯನಗಳು ನಡೆದವು. ಈ ಜೀವರಕ್ಷಣಾ ಸಮಿತಿಗೆ ಸಿಕ್ಕ ಜಯವೆಂದರೆ ಎಂಡೋಸಲ್ಫಾನ್ ಅನ್ನು ಸಿಂಪಡಿಸುವುದನ್ನು ನಿಲ್ಲಿಸಿದ್ದು. ಆದರೆ ಎಂಡೋಸಲ್ಫಾನ್‌ಗೆ ರಾಜ್ಯ ಮಟ್ಟದಲ್ಲಿ ನಿಷೇಧ, ಅದರ ಪರಿಣಾಮವಾಗಿ ಶಾಶ್ವತ ಅಂಗವೈಕಲ್ಯ, ವಿವಿಧ ರೋಗಗಳಿಂದ ಬಳಲುವವರಿಗೆ ಪರಿಹಾರ, ಪುನರ್ವಸತಿಯಂತಹ ಬೇಡಿಕೆಗಳು ಬೇಡಿಕೆಗಳಾಗಿಯೇ ಉಳಿದವು. ಸದರಿ ಜೀವರಕ್ಷಣಾ ಸಮಿತಿಯವರು ಸ್ವಯಂಸ್ಫೂರ್ತಿಯಿಂದ ಕೈಯಿಂದ ಖರ್ಚು ಮಾಡಿ ವಿಸ್ತೃತವಾದ ಸಮೀಕ್ಷೆ ಕಾರ್ಯ ನಡೆಸಿ ಎಂಡೋಸಲ್ಫಾನ್ ಪೀಡಿತ 400 ಮಂದಿಯನ್ನು ಗುರುತಿಸಿದ್ದರು.

ಇಷ್ಟೆಲ್ಲಾ ಕೆಲಸಗಳು ರಾಜಕೀಯ ರಹಿತವಾಗಿ ನಡೆದರೂ ಸರಕಾರದ ಕಣ್ಣು ತೆರೆಸುವ ಎಲ್ಲಾ ಕಾರ್ಯಗಳು ಗುಡ್ಡಕ್ಕೆ ಮಣ್ಣು ಹೊತ್ತಂತಾಗುವುದಕ್ಕೂ ಶ್ರೀಧರ ಗೌಡ ಎಂಬಾತ ಸದರಿ ಜೀವರಕ್ಷಣಾ ಸಮಿತಿಗೆ ಕಾರ್ಯದರ್ಶಿ ಆಗುವುದಕ್ಕೂ ಸರಿ ಆಗಿ ಎಲ್ಲವೂ ಹುಣಸೆಹಣ್ಣು ನೀರಲ್ಲಿ ತೊಳೆದುಹೋದಂತಾಯಿತು. ಸ್ವತಃ ಎಂಡೋಸಲ್ಫಾನ್ ಎಫೆಕ್ಟ್‌ನಿಂದ ಕಣ್ಣು ದೃಷ್ಟಿ ಕಳಕೊಂಡಿರುವ ಶ್ರೀಧರ ಗೌಡ ಈ ಹಿಂದೆ ಈ ಹೋರಾಟದ ಕೃತ ಶಕ್ತಿಯಾಗಿರುವವರನ್ನೆಲ್ಲ ಮರೆತು ತಾನು ಮಾಡಿದ್ದೇ ಆಟವಾಯಿತು. ಪರಿಣಾಮವಾಗಿ ಈ ಎಂಡೋಸಲ್ಫಾನ್ ವಿಷಕ್ಕೂ ರಾಜಕೀಯ ಬಣ್ಣ ಬಂತು.

ಕುಶಾಲಪ್ಪ ಗೌಡ ಮ್ಯಾಜಿಕ್!

ಈ ಕುಶಾಲಪ್ಪ ಗೌಡ ಬೆಳ್ತಂಗಡಿ ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಕಂ. ಹಾಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ. ಹೆಂಡಮಾರಿ ನಾಲ್ಕು ಕಾಸು ಸಂಪಾದಿಸಿರುವ ಕಾರಣಕ್ಕೆ



▲ ಎಂಡೋಸಲ್ಫಾನ್‌ಗೆ ತುತ್ತಾದ ಹೆಣ್ಣುಮಗು

ಲೀಡರ್ ಎನಿಸಿಕೊಂಡವನು ಕುಶಾಲಪ್ಪ ಗೌಡ. ಬೆಳ್ತಂಗಡಿಯಲ್ಲಿ ಬಿಜೆಪಿಗೆ ಗೌಡ ಮತದಾರರ ಒಲವು ಗಿಟ್ಟಿಸಲು ಒರ್ವ ಗೌಡನಿರಲಿ ಎಂಬ ಕಾರಣಕ್ಕೆ ಈತ ಅಧ್ಯಕ್ಷನಾದವ. ತಾನು ಡಿ.ವಿ.ಸದಾನಂದಗೌಡರಿಗೆ, ಶೋಭಾ ಕರಂದ್ಲಾಜೆಗೆ ನೆಂಟ ಎಂದು ಬೂಸಿ ಬಿಡುತ್ತಲೇ ಬೆಳ್ತಂಗಡಿಯಲ್ಲಿ ಬಿಜೆಪಿಯನ್ನು ಕಟ್ಟಲು ಮಣ್ಣು ಹೊತ್ತ ಪ್ರತಾಪ ಸಿಂಹ, ನೇಮಿರಾಜ ಶೆಟ್ಟಿ, ಪ್ರಭಾಕರ ಬಂಗೇರರನ್ನು ಓವರ್‌ಟೇಕ್ ಮಾಡುವ ಉದ್ದೇಶ ಕುಶಾಲಪ್ಪ ಗೌಡನದ್ದು. ಈತನಿಗೆ ಮುಂದಿನ ಸಲವಾದರೂ ಬೆಳ್ತಂಗಡಿಯಿಂದ ಬಿಜೆಪಿ ಕ್ಯಾಂಡಿಡೇಟ್ ಆಗಿ ಎಂ.ಎಲ್.ಎ ಆಗುವ ತೆವಲು. ಆ ಕಾರಣಕ್ಕೆ ಇಲ್ಲಿ ತನ್ನನ್ನು ಬಿಟ್ಟರೆ ಇನ್ನೋರ್ವ ಗೌಡ ಬಿಜೆಪಿ ಯಲ್ಲಿ ಮೇಲೆ ಬರದಂತೆ ನೋಡಿ ಕೊಳ್ಳುವ ಚಾಣಾಕ್ಷಮತಿ.



ಶ್ರೀಧರ ಗೌಡ

ಜಿಲ್ಲೆಯಲ್ಲಿ ಶೋಭಾ ಕರಂದ್ಲಾಜೆಯ ಕಲೆಕ್ಷನ್ ಏಜೆಂಟ್ ಆಗಿರುವ ಈತ ಆಕೆ ಗ್ರಾಮಾಭಿವೃದ್ಧಿ ಸಚಿವೆಯಾಗಿದ್ದ ದಿನಗಳಲ್ಲಿ ನಡೆಸಿದ ಕಲೆಕ್ಷನ್ ದಂಧೆಯದೇ ಒಂದು ಪುರಾಣ. ಸುಳ್ಯ, ಪುತ್ತೂರು, ಬೆಳ್ತಂಗಡಿಗಳಲ್ಲಿ ಗ್ರಾಮಾಭಿವೃದ್ಧಿ ಅಧಿಕಾರಿ ಹುದ್ದೆಯ ಆಕಾಂಕ್ಷಿ ಅಮಾಯಕ ಯುವಕರಿಗೆ 'ಕೆಲಸ ಗ್ಯಾರಂಟಿ' ಎಂದು ಮಾತು ಕೊಟ್ಟು ಲಕ್ಷಗಟ್ಟಲೆ ಕಲೆಕ್ಷನ್ ಮಾಡಿ ಉಂಡೆನಾಮತಿಕ್ಕಿದ್ದ. ಆದರೀಗ ಅತ್ತ ಕೆಲಸವೂ ಇಲ್ಲದೆ, ಇತ್ತ ಸಾಲಸೋಲ ಮಾಡಿ ಕುಶಾಲಪ್ಪ ಗೌಡನ ಕೈಗಿಟ್ಟ ಹಣವೂ ಇಲ್ಲದೆ ಅಮಾಯಕ ಯುವಕರು ಆಕಾಶ ನೋಡುವಂತಾಗಿದೆ.

ಈ ಕುಶಾಲಪ್ಪಗೌಡನ ಲೇಟೆಸ್ಟ್ ಮ್ಯಾಜಿಕ್ಕೇ ಈ 'ಎಂಡೋಸಲ್ಫಾನ್ ಪೀಡಿತರಿಗೆ ಪರಿಹಾರ ಕಾರ್ಯಕ್ರಮ'. ಹೇಳಿಕೇಳಿ ಪಟ್ರಮೆ, ಕೊಕ್ಕಡ, ನಿಡ್ಲೆ ಈ ಮೂರು ಗ್ರಾಮಗಳಲ್ಲಿ ಕಾಂಗ್ರೆಸ್‌ನದ್ದೇ ಪ್ರಾಬಲ್ಯ. ಇಲ್ಲಿ ಎಂಡೋಸಲ್ಫಾನ್‌ನ ಮ್ಯಾಜಿಕ್ ಮಾಡಿ ಜನರ ನಡುವೆ ಹೀರೋ ಆಗುವುದು ಸುಲಭ ಎಂದು ಲೆಕ್ಕಹಾಕಿದ ಕುಶಾಲಪ್ಪ ಗೌಡ ತನ್ನ ಶಿಷ್ಯ ಶ್ರೀಧರ ಗೌಡನನ್ನು ಹಿಡಿದು ಪ್ಲಾನ್ ಹಾಕಿಯೇ ಬಿಟ್ಟ. ಈಗ ಮಂತ್ರಿ ಸ್ಥಾನ ಕಳಕೊಂಡಿರುವ ಶೋಭಕ್ಕ ಕೂಡ ಪುರುಸೊತ್ತಲ್ಲಿರುವುದು ಕೆಲಸ ಸುಲಭವಾಯ್ತು. ಮಂತ್ರಿ ಸ್ಥಾನದಲ್ಲಿದ್ದಾಗ ತನ್ನ ಹುಟ್ಟು ಜಿಲ್ಲೆಯತ್ತ ಕತ್ತೆತ್ತಿ ನೋಡಲೂ ಪುರುಸೊತ್ತಿಲ್ಲದಿದ್ದ ಶೋಭಕ್ಕ ಕೊಕ್ಕಡಕ್ಕೆ ಧಾವಿಸಿ ಬಂದದ್ದೂ ಆಯಿತು. ಎಂಡೋಸಲ್ಫಾನ್ ಪೀಡಿತರ ಮನೆ ಬಾಗಿಲಿಗೇ ಬಂದು ಕಣ್ಣೀರು ಮಿಡಿದದ್ದೂ ಆಯಿತು. ಇನ್ನೇನು ಸಿ.ಎಂ. ಅನ್ನೇ ಕರೆಸಿ ಸಂತ್ರಸ್ತರಿಗೆ ಪರಿಹಾರ ಕೊಡುವ ತವಕ. ಶೋಭಕ್ಕ ಖುದ್ದು ಹೇಳಿದರೆಂದರೆ ಯಡ್ಡಿ ಸಾಹೇಬರಿಗೆ ಬರುವುದಕ್ಕೇನು ಅಡ್ಡಿ?

30 ವರ್ಷಗಳ ಹೋರಾಟದಿಂದ ಕಾಲಕಾಲಕ್ಕೆ ಬಂದು ಹೋದ ಶಾಸಕರಿಂದ ಸಾಧ್ಯವಾಗದ್ದು ಶೋಭಕ್ಕ ಲೀಲೆಯಿಂದ 3 ತಿಂಗಳಲ್ಲೇ ಆಯಿತು. 3 ದಿನದಲ್ಲೇ 3 ಗ್ರಾಮಗಳ ಸರ್ವೆ ನಡೆದು ಎಂಡೋಸಲ್ಫಾನ್ ಪೀಡಿತರ ಗಣತಿಯೂ ಆಯಿತು. 'ಫೆಬ್ರವರಿ 28ಕ್ಕೆ ಸಿ.ಎಂ. ಬರುತ್ತಾರೆ. ಕನಿಷ್ಠ 200 ಜನರಾದರೂ ಸಂತ್ರಸ್ತರಿರಬೇಕು. 5000 ಜನರಾದರೂ ಸೇರಬೇಕು' ಎಂದು ಸೂಚಿಸಲಾಗಿತ್ತು. ಅಂದರೆ ಎಂಡೋಸಲ್ಫಾನ್ ಪೀಡಿತರಿಗೆ ಪರಿಹಾರ ನೀಡಲಾಗುತ್ತದೆ ಎನ್ನುವುದಕ್ಕಿಂತ ಸಿ.ಎಂ. ಬರುತ್ತಾರೆ ಎನ್ನುವುದೇ ಮುಖ್ಯವಾಗಿ ಕುಶಾಲಪ್ಪ ಗೌಡ ಮತ್ತು ಗ್ಯಾಂಗ್ ಆಡಿದ್ದೇ ಆಟವಾಯಿತು. ಪರಿಣಾಮವಾಗಿ ನಾಡ ಬಾಂಬ್ ಸ್ಫೋಟಗೊಂಡು ಕೈ ಕಳಕೊಂಡವರು, ವಯಸ್ಸಾಗಿ ನಡೆದಾಡದವರು, ಹೊಟ್ಟೆಗೆ ಊಟ ಸೇರದವರು, ನಿದ್ರೆ ಬಾರದವರು, ಎಂಡೋಸಲ್ಫಾನ್ ಪೀಡಿತರ ಪಟ್ಟಿಯಲ್ಲಿ ಸೇರಿದರು.

ಎಲ್ಲೆಲ್ಲಿಂದಲೋ ಬಂದ ಗ್ರಾಮಕರಣಿಕರು, ಪಂಚಾಯತ್ ಕಾರ್ಯದರ್ಶಿಗಳು, ವೈದ್ಯಕೀಯ ಸಿಬ್ಬಂದಿಗಳಿಗೆ ಸ್ಥಳೀಯ ಬಿಜೆಪಿ ಕಾರ್ಯದರ್ಶಿಗಳು ತೋರಿಸಿದ್ದೇ ದಾರಿಯಾಗಿ ಸ್ವಪಕ್ಷೀಯರು ಪೀಡಿತರ ಪಟ್ಟಿಯಲ್ಲಿ ಸ್ಥಾನ ಪಡೆದರೆ, ನಿಜವಾದ ಪೀಡಿತರು, ಕ್ಯಾನ್ಸರ್‌ನಿಂದ ಬಳಲುವವರು, ಗಣತಿದಾರರ ನಜರಿಗೆ ಬೀಳಲೇ ಇಲ್ಲ.

ಫೆಬ್ರವರಿ 28ರಂದು ರೊಯ್ಯನೇ ಬಂದ ಮುಖ್ಯಮಂತ್ರಿಗಳು ಮೂರು ಗ್ರಾಮಗಳ 211 ಸಂತ್ರಸ್ತ ಕುಟುಂಬಗಳ 231 ಅಂಗವಿಕಲರಿಗೆ ರೂ. 50,000 ಪರಿಹಾರ ಕೊಟ್ಟು, ಶೇ. 40ರಿಂದ 70 ಅಂಗವಿಕಲರಿಗೆ ತಿಂಗಳಿಗೆ ರೂ. 400, ಶೇ 75ಕ್ಕಿಂತ ಅಧಿಕ ಅಂಗವಿಕಲರಿಗೆ ರೂ. 1000 ಮಾಸಾಶನ ಘೋಷಿಸಿದರು. ಇದನ್ನು ಪಡೆದು ಧನ್ಯರಾದವರ ಕಣ್ಣುಗಳಿಗೆ ಶೋಭಕ್ಕ ಮತ್ತು ಯಡ್ಡಿ ದೇವ ದೇವತೆಯಂತೆ ಕಂಡರೆ, ಮುಖ್ಯ ಮಂತ್ರಿಗಳನ್ನು ಕರೆಸಿ ಹೀರೋ ಆದ ಕುಶಾಲಪ್ಪ ಗೌಡ-ಶ್ರೀಧರ ಗೌಡ ಜೋಡಿ ಮರುದಿನದಿಂದ ಪತ್ರಿಕೆಗಳಲ್ಲಿ ಅಭಿನಂದನೆ ಜಾಹೀರಾತು ಹಾಕಿಸಿ ಪೇಟೆಯಲ್ಲಿ ತಮ್ಮದೇ ಭಾವಚಿತ್ರವಿರುವ ಬ್ಯಾನರ್ ಹಾಕಿಸಿ ಸಂಭ್ರಮಿಸಿತು.

ಇಲ್ಲಿಗೆ ಮುಗಿಯಲಿಲ್ಲ

ಇದೀಗ ನೀವು ಕೊಕ್ಕಡ ಪ್ರಾಥಮಿಕ ಆರೋಗ್ಯ ಕೇಂದ್ರದತ್ತ ಹೋಗಿ ಕಣ್ಣು ಹಾಯಿಸಿದರೆ ಮಿಂಚಿ ಹೋದ ಕಾಲಕ್ಕೆ ಚಿಂತಿಸುತ್ತಾ 50,000 ಪರಿಹಾರದ ಆಸೆಯಿಂದ ಅರ್ಜಿ ಹಿಡಿದು ನಿಂತ ಬಡಪಾಯಿಗಳ ದೃಶ್ಯ ಸಾಮಾನ್ಯವಾಗಿದೆ. ವೈದ್ಯರೇ ಹೇಳುವಂತೆ ಈಗಾಗಲೇ 500ಕ್ಕೂ ಮಿಕ್ಕಿ ಅರ್ಜಿಗಳು ಬಂದಿವೆ. ವೈದ್ಯಾಧಿಕಾರಿಗೆ ಅವರನ್ನು ಸಮಾಧಾನಪಡಿಸಿ ಕಳುಹಿಸುವುದೇ ಸದ್ಯದ ಕೆಲಸವಾಗಿದೆ.

ಬಂಗೇರಾ ಬಂದರು


ಸಿ.ಎಂ. ಕಾರ್ಯಕ್ರಮದಲ್ಲಿ ಅನಾರೋಗ್ಯದ ಕಾರಣದಿಂದ ಅನುಪಸ್ಥಿತಿಯಿದ್ದ ಶಾಸಕ ವಸಂತ ಬಂಗೇರಾ ವಾರದ ನಂತರ ಕೊಕ್ಕಡದಲ್ಲಿ ಪ್ರತ್ಯಕ್ಷರಾದರು. ಅಷ್ಟೇ ಅಲ್ಲ "ಎಂಡೋಸಲ್ಫಾನ್ ಸಂತ್ರಸ್ತರಿಗೆ ಪರಿಹಾರದಲ್ಲಿ ಭಾರೀ ಲೋಪವಾಗಿದೆ. ವೈದ್ಯರ, ಅಧಿಕಾರಿಗಳ ಹಾದಿ ತಪ್ಪಿಸಿದ್ದಾರೆ. ಇಲ್ಲಿ ತಕ್ಷಣಕ್ಕೊಂದು ಹೋರಾಟ ಸಮಿತಿ ಹುಟ್ಟಿಕೊಂಡಿದೆ. ನಿಜವಾಗಿ ಇಲ್ಲಿ ಸಂತ್ರಸ್ತರ ಪರ ಹೋರಾಟ ಮಾಡಿದ ಹರಿರಾವ್ ಮರ್ಡಾಜೆ, ಡಾ. ಮುರಳಿ, ಡಾ. ಮೋಹನ್ ದಾಸ್, ಜೋಸೆಫ್ ಪಿರೇರಾರನ್ನು ಒಂದು ಮಾತಲ್ಲಿ ನೆನಪಿಸುವ ಕೃತಜ್ಞತೆ ಇವರಲ್ಲಿ ಇಲ್ಲ. ಕೋಳಿ ಅಂಕದಲ್ಲಿ ಕತ್ತಿ ತಾಗಿ ಕೈ ಮುರಿದವರಿಗೆ ತಿಂಗಳಿಗೆ ರೂ. 3,500 ಸಂಬಳ ತಿನ್ನುವವರಿಗೆ ಪರಿಹಾರ ಸಿಕ್ಕಿದೆ. ನಿಜವಾದ ಸಂತ್ರಸ್ತರು ಆಕಾಶ ನೋಡುತ್ತಿದ್ದಾರೆ" ಎಂದು ಹೇಳುತ್ತಾ "ಎಲ್ಲರೂ ಅರ್ಜಿ ಕೊಡಿ. ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲವನ್ನು ಮನವರಿಕೆ ಮಾಡಿ ಪರಿಹಾರ ಕೊಡಿಸುತ್ತೇನೆ" ಎಂಬ ಭರವಸೆ ನೀಡಿದ್ದಾರೆ.

ಇದನ್ನು ಕೇಳಿಸಿಕೊಂಡ ಕುಶಾಲಪ್ಪ ಗೌಡ ಗ್ಯಾಂಗ್ [illegible]ವೇಗೆ ಮತ್ತೆ ಪರಿಹಾರ ಕೊಡಿಸುತ್ತಾರೆ ಸರ್ಕಾರ ಸುಮ್ಮದಿರುವಾಗ' ಎಂದು ತೋ[illegible] ನಾದ ಎಂಡೋಸಲ್ಫಾನ್ ಎಫೆಕ್ಟ್, ಇದೀಗ [illegible] ಜನರಾಡಿ ಕೊಳ್ಳುತ್ತಿದ್ದಾರೆ. ●

ಎಂಡೋಸಲ್ಫಾನ್ ಅಲ್ಲ, ಕೀಟನಾಶಕ

ಎಂಡೋಸಲ್ಫಾನ್ ಬಗ್ಗೆ ನಡೆಸಿರುವ ಅಧ್ಯಯನದ ಪ್ರಕಾರ ಇದೊಂದು ಸಿಸ್ಟೆಮಿಕ್ ಕ್ರಿಮಿನಾಶಕವಾಗಿದ್ದು ಗಿಡದ ಒಳಸೇರಿ ಕ್ರಿಮಿಯನ್ನು ಕೊಲ್ಲುತ್ತದೆ. ಅಮೆರಿಕೆಯ ಪರಿಸರ ಇಲಾಖೆಯು (USEPA) ಇದನ್ನು (IB) ವರ್ಗದಲ್ಲಿಡುವುದರ ಮೂಲಕ ಅತಿವಿಷವುಳ್ಳ ಕ್ರಿಮಿನಾಶಕ ಎಂದು ಗುರುತಿಸಿದೆ. ಒಮ್ಮೆ ಸಿಂಪಡಣೆಯಾದ ಎಂಡೋಸಲ್ಫಾನ್‌ನ ಪ್ರಮಾಣದ ಅರ್ಧದಷ್ಟು ನಶಿಸಲಿಕ್ಕೆ ಎರಡು ವರ್ಷಗಳಿಗೂ ಮಿಕ್ಕಿ ಕಾಲಬೇಕು. ಮನುಷ್ಯನ ವಂಶವಾಹಿನಿಯನ್ನೇ ಬದಲಿಸುವ ಮ್ಯೂಟೇಶನ್ ಪ್ರಕ್ರಿಯೆಗೂ ಕಾರಣವಾಗಬಲ್ಲ ಎಂಡೋಸಲ್ಫಾನ್‌ನ ರಾಸಾಯನಿಕವು ಮಾನವನ ಪುಪ್ಪುಸ, ಜಠರ ಹಾಗೂ ಚರ್ಮವನ್ನು ಬಹುಬೇಗ ಹೀರಿಕೊಳ್ಳಬಲ್ಲದು. ಕುರುಡುತನ, ರಕ್ತಹೀನತೆ, ಬುದ್ಧಿ ಮಾಂದ್ಯತೆ, ನಿಶ್ಶಕ್ತಿ ಕ್ಯಾನ್ಸರ್, ಬಂಜೆತನದಂತಹ ರೋಗಗಳಿಗೆ ಈ ಎಂಡೋಸಲ್ಫಾನ್ ಕಾರಣವಾಗಬಲ್ಲುದು ಎಂದು ಸಂಶೋಧನೆಗಳು ಹೇಳುತ್ತವೆ. ಡೆನ್ಮಾರ್ಕ್, ಜರ್ಮನಿ, ನೆದರ್‌ಲ್ಯಾಂಡ್, ಸ್ವೀಡನ್, ಸಿಂಗಾಪುರದಂತಹ ಅಭಿವೃದ್ಧಿ ಹೊಂದಿದ ದೇಶಗಳಲ್ಲದೇ ಇಂಡೋನೇಷ್ಯಾ, ಬಾಂಗ್ಲಾದೇಶಗಳೂ ಈ ರಸಾಯನಿಕದ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿವೆ. ಕಾಸರಗೋಡಿನ ಪಡ್ರೆಯಲ್ಲಿ ಗೇರುತೋಟಕ್ಕೆ ಇದರ ಸಿಂಪಡಣೆಯಿಂದ ಉಂಟಾದ ವಿನಾಶದ ನಂತರ ಕೇರಳ ರಾಜ್ಯದಲ್ಲೂ ಇದನ್ನು ನಿಷೇಧಿಸಲಾಗಿದೆ. ಆದರೆ ನಮ್ಮ ಕರ್ನಾಟಕ[illegible] ಸರ್ಕಾರ ಮಾತ್ರ ತನ್ನ ತೋಟಗಾರಿಕೆ ಇಲಾಖೆ ಮೂಲಕವೇ ಇದನ್ನು ಯಥೇಚ್ಛವಾಗಿ ರೈತರಿಗೆ ವಿತರಿಸಿ ಕಂಪೆನಿಯ [illegible] ಕಟ್ಟಿಕೊಳ್ಳುತ್ತಲೇ ಇದೆ. ತಮಾಷೆಯೆಂದರೆ ಎಂಡೋಸಲ್ಫಾನ್ ಸಂತ್ರಸ್ತರಿಗೆ ಪರಿಹಾರ ನೀಡುವ ಕಾರ್ಯಕ್ರಮದಲ್ಲಿ ಎಲ್ಲೂ ಆಮಂತ್ರಣ ಪತ್ರಿಕೆಯಿಂದ ಹಿಡಿದು ಬ್ಯಾನರ್‌ಗ[illegible] ಮುಖ್ಯಮಂತ್ರಿಗಳ ಭಾಷಣದಲ್ಲೂ ತಪ್ಪಿಯೂ ಎಂಡೋಸಲ್ಫಾನ್ ಪ್ರಸ್ತಾಪವೇ ಆಗಲಿಲ್ಲ. ಅದು ಕೀಟನಾಶಕ ಸಂತ್ರಸ್ತರ ಪರಿಹಾರ ಕಾರ್ಯಕ್ರಮವಷ್ಟೇ ಆಗಿ 'ಅಳಿಯ ಅಲ್ಲ, ಮಗಳ ಗಂಡ' ಎಂಬ ಗಾದೆ ಮಾತಿನಂತಿದ್ದದ್ದು ವಿಪರ್ಯಾಸ!

ಸುಡುವ ವರ್ತಮಾನದಲ್ಲಿ ಕಾಡುವ ತಲ್ಲಣಗಳು



ಕೆ.ಶರೀಫಾ ಅವರ ಕಾವ್ಯಕ್ಕೆ ಹಲವು ಮಿತಿಗಳಿವೆ. ಇದು ಅವರ ಐದನೆ ಸಂಕಲನ. ಆದರೆ ಕವಿಯೊಬ್ಬರ ಐದನೆ ಸಂಕಲನದಲ್ಲಿ ಕಾಣಬಹುದಾದ ಪ್ರಬುದ್ಧತೆಯಾಗಲಿ, ಕಾವ್ಯಕಲೆಯಾಗಲಿ ಸಿದ್ಧಿಸಿಲ್ಲ. ಹೆಚ್ಚು ವಾಚ್ಯದಲ್ಲೇ ಇರುವ ಇಲ್ಲಿನ ಪದ್ಯಗಳು ಮೊದಲ ಓದಿಗೆ ಆಪ್ತವಾದಂತೆ, ಮನಸ್ಸಿನ ಆಳಕ್ಕೆ ಇಳಿಯುವುದಿಲ್ಲ. ಆಯಾ ಸಂದರ್ಭಕ್ಕೆ ಆ ತಕ್ಷಣ ಪ್ರತಿಕ್ರಿಯಿಸಿದ್ದು ಇದಕ್ಕೆ ಕಾರಣವಿರಬಹುದು. ವರ್ತಮಾನವನ್ನು ಕಾವ್ಯದಲ್ಲಿ ಹಿಡಿಯುವುದು ಕವಯಿತ್ರಿಯ ಶಕ್ತಿ ಹೇಗೋ ಅದೇ ಗುಣ ಸ್ವಲ್ಪ ತೆಳುವಾಗಿ ಮಿತಿಯೂ ಆಗಿದೆ.

ಈಚೆಗೆ ಕೆ.ಶರೀಫಾ ಅವರ ಪದ್ಯದ ಕಟ್ಟು 'ಬುರ್ಖಾ ಪ್ಯಾರಡೈಸ್' ಓದಿದೆ. ನಮ್ಮ ಕಾಲದ ಜತೆ ಮತ್ತೊಮ್ಮೆ ಮುಖಾಮುಖಿಯಾದ ಅನುಭವವಾಯಿತು. ಇಲ್ಲಿನ ಬರಹ ಈ ಓದು ಹುಟ್ಟಿಸಿದ ಕೆಲವು ಮಾತುಗಳಷ್ಟೆ. ಸದ್ಯದ ಓದು ನನ್ನ ಕಾಲದ ಆತಂಕಗಳನ್ನು ಭಿನ್ನವಾಗಿ ಎದುರುಗೊಳ್ಳಲು ಅನುವಾಗಬೇಕು. ಹಾಗಲ್ಲದಿದ್ದರೆ ನಮ್ಮೊಳಗಣ ಎಚ್ಚರಕ್ಕೆ ಕಿಚ್ಚು ಹಚ್ಚುವುದಾದರೂ ಹೇಗೆ? ಬಹುಶಃ ಆ ಕಾರಣಕ್ಕೇ 'ಬುರ್ಖಾ ಪ್ಯಾರಡೈಸ್' ಇಷ್ಟವಾಯಿತು. ಕೆ. ಶರೀಫಾ ಅವರು ಬಂಡಾಯದ ಸಂಗಾತಿಗಳ ಜತೆ ಬೆಳೆದವರು. ಕಾರಣ ನಿತ್ಯದ ಬದುಕಲ್ಲೂ ಅವರದು ದಿನದಿನದ ಬಂಡಾಯ. ಅದುವೆ ಅವರ ಕಾವ್ಯ ಭಾಷೆಯೂ ಕೂಡ. ಇದು ಅವರ ಐದನೇ ಪದ್ಯದ ಕಟ್ಟು. ವರ್ತಮಾನ ಹುಸಿರಾಡುವ, ಸದ್ಯದ ತಲ್ಲಣಗಳು ಹೊಗೆಯಾಡುವ, ನನ್ನ ಕಾಲ ಇಲ್ಲಿ ಬಿಚ್ಚಿಕೊಳ್ಳುವ ಪರಿ ಭಿನ್ನವಾಗಿದೆ.



ಸದ್ಯಕ್ಕೆ ನಾನು ಆರೀಫ್ ರಾಜನ 'ಜಂಗಮ ಫಕೀರನ ಜೋಳಿಗೆ', ಬಿ. ಪೀರಭಾಷಾ ಅವರ 'ದೇವರುಗಳೆಲ್ಲಾ ಮನುಷ್ಯರಾದ ದಿನ', ಕೆ. ಬಿ. ಸಿದ್ದಯ್ಯ ಅವರ 'ಗಲ್ಲೆಬಾನಿ', ಮಂಜುನಾಥಲತಾ ಅವರ 'ಆಹಾ ಅನಿಮಿಷ ಕಾಲ', ಹರಿನಾಥ ಬಾಬು ಅವರ 'ಬೆಳಕ ಹೆಜ್ಜೆಯನರಸಿ' ಮುಂತಾದವುಗಳನ್ನು ಓದುತ್ತಾ ಸದ್ಯದ ಕಾಲವನ್ನು ಹೊಸತಾಗಿ ಎದುರುಗೊಂಡಿದ್ದೇನೆ. ಜಿ. ರಾಜಶೇಖರ ಅವರು ಜಿ.ಪಿ ಆನಂದ ಮೂರ್ತಿಯವರ 'ನೀರಗಂಧ'ಕ್ಕೆ ಮುನ್ನುಡಿ ಬರೆಯುತ್ತಾ ಸದ್ಯದ ಕನ್ನಡ ಕಾವ್ಯ ಕುರಿತು ಗಂಭೀರವಾದ ಪ್ರಶ್ನೆಗಳನ್ನು ಎತ್ತಿದ್ದಾರೆ. ಇಂದು ಕಾವ್ಯ ಓದುವಾಗ ಈ ಪ್ರಶ್ನೆಗಳು ಎದುರು ನಿಲ್ಲುತ್ತವೆ. ಸದ್ಯದ ಕಾಲದೇಶದ ದುರ್ವಿಪಾಕವನ್ನು ಉಪೇಕ್ಷಿಸಿ ಕಾವ್ಯ ಜೀವಂತವಾಗಿ ಉಳಿದೀತೆ? ಆದರೆ ಈ ಪ್ರಶ್ನೆ ಕನ್ನಡ ಕವಿಗಳನ್ನು ಕೆಲವು ಅಪವಾದಗಳನ್ನು ಹೊರತುಪಡಿಸಿ ಕಾಡಿದ ಹಾಗೆ ಕಾಣುವುದಿಲ್ಲ, ಈಗಲೂ ಬಹುತೇಕ ಕವಿಗಳು ತಮ್ಮ ಸುಕುಮಾರ ತೆವಲುಗಳನ್ನೇ ತೀವ್ರ ಭಾವಾಭಿವ್ಯಕ್ತಿ ಎಂಬಂತೆ ತೇಲಿಬಿಡುತ್ತಿದ್ದಾರೆ ಎನ್ನುತ್ತಾರೆ. ಈಚಿನ ಕೆಲವು ಪದ್ಯದ ಕಟ್ಟುಗಳನ್ನು ಓದುತ್ತಿದ್ದರೆ ಈ ಮಾತು ನಿಜ ಕೂಡ. ಅಂತೆಯೇ ಇದಕ್ಕೆ ಕೆಲವು ಅಪವಾದಗಳೂ ಇಲ್ಲದಿಲ್ಲ, ಮೇಲೆ ಉಲ್ಲೇಖಿಸಿದ ಪದ್ಯದ ಕಟ್ಟುಗಳಲ್ಲಿ ಸದ್ಯದ ಉರಿವ ವರ್ತಮಾನವಿದೆ. ಕೆ. ಶರೀಫಾ ಅವರ ಕಾವ್ಯದಲ್ಲಿ ಅಂತಹದು ನಿಚ್ಚಳವಾಗಿ ಕಾಣುತ್ತದೆ.

ಯಾವೊಬ್ಬ ಕವಿ ಅಥವಾ ಕವಿಯತ್ರಿಯೂ ತನ್ನ ಕಾಲವನ್ನು ಹೊಸ ಕಾಣ್ಕೆಯ ಮೂಲಕ ನೋಡಬೇಕಾಗುತ್ತದೆ. ಆ ಮೂಲಕ ಕಾವ್ಯದ ಹೊಸ ಭಾಷೆಯನ್ನೂ ರೂಢಿಯಾಗುತ್ತದೆ. ಈ ಎರಡರ ಗುರುತಿಸಲಾಗದ ಹೆಣಿಗೆ ಸಾಧ್ಯವಾದರಂತೂ ಅದು ಅಭಿವ್ಯಕ್ತಿಯ ಯಶಸ್ಸು. ಇಲ್ಲಿ ಕವಿಯತ್ರಿ ತನ್ನ ಕಾಲಕ್ಕೆ ತೀವ್ರವಾಗಿ ಸ್ಪಂದಿಸಿದ್ದಾರೆ. ಹಾಗಾಗಿ ಇಲ್ಲಿನ ಒಟ್ಟು ಕಾವ್ಯದಲ್ಲಿ ತಲ್ಲಣಗಳಿವೆ, ಆತಂಕಗಳಿವೆ ಅಂತೆಯೇ ಹೊಸ ಕನಸುಗಳ ಬೆಳದಿಂಗಳಿದೆ. ಇಲ್ಲಿ ಕವಿಯತ್ರಿ ಒಬ್ಬ ಮುಸ್ಲಿಂ ಸಮುದಾಯದ ಪ್ರತಿನಿಧಿಯಾಗಿ, ಒಬ್ಬ ಸಾಮಾನ್ಯ ಹೆಣ್ಣಾಗಿ, ಜಾಗತಿಕ ಮಾರುಕಟ್ಟೆಯ ಅಸಹಾಯಕ ಗಿರಾಕಿಯಾಗಿ ಈ ಮೂರನ್ನೂ ಮೀರಿದ ಮಾನವೀಯ ಅಂತಃಕರಣದ ಒಳ್ಳೆಯ ಮನಸ್ಸಾಗಿ ಮತ್ತು ಇವು ಬೆರೆತ ಹದದಲ್ಲಿ ಇಲ್ಲಿನ ಕಾವ್ಯ ರೂಪುಗೊಂಡಿದೆ. ಸದ್ಯ ಕರ್ನಾಟಕದಲ್ಲಿ ಸಾಮಾನ್ಯ ಮುಸ್ಲಿಮ್ ಸಮುದಾಯದ ಪ್ರಜೆ ಅನುಭವಿಸಬಹುದಾದ ತಲ್ಲಣಗಳು ಇಲ್ಲಿ ಪ್ರಕಟವಾಗಿವೆ. ಪ್ರತಿ ಪದ್ಯದಲ್ಲಿಯೂ ಮಾನವೀಯ ಅಂತಃಕರಣದ ಧ್ವನಿಯ ಸದ್ದು ಕೇಳುತ್ತದೆ.

ಯಾವತ್ತೂ ಕನ್ನಡ ಕಾವ್ಯ ತನ್ನ ಕಾಲಕ್ಕೆ ಭಿನ್ನವಾಗಿ ಪ್ರತಿಕ್ರಿಯಿಸುತ್ತಾ ಬಂದಿದೆ. ತನ್ನ ಕಾಲವನ್ನು ಜನಪ್ರಿಯ ಪೊರೆ ಕಳಚಿ ಹೊಸದಾಗಿ ಕಟ್ಟಿಕೊಳ್ಳಲು ಪ್ರಯತ್ನಿಸಿದೆ. ಅಂತಹ ಕಟ್ಟುವಿಕೆಗಳು ಇಲ್ಲಿನ ಕಾವ್ಯದಲ್ಲಿ ಇವೆ. ಕೋಮುವಾದವನ್ನು ಇಲ್ಲಿ ಬೇರೆಯದೇ ರೀತಿಯಲ್ಲಿ ಕಂಡಿದ್ದಾರೆ.

ಸಿಗರೇಟು ಪ್ಯಾಕಿನ ಮೇಲೆ/ ಸುಂದರ ಹೈದರಾಬಾದಿನ/ ಚಾರಮಿನಾರದ ಚೌಕ/ ತಂಬಾಕು ತುಂಬಿದ/ ಸಿಗರೇಟು ಸೇದಿದ ಹೊಗೆಯಲ್ಲಿ /ತುದಿಗೆ ತಗುಲಿದ ಬೆಂಕಿಯಲ್ಲಿ/ ಕಾಣಲಿಲ್ಲ ಜಾತಿಯ ಭೂತ./ ಸೇದುವವನೆಂದೂ ಪ್ರಶ್ನಿಸಲಿಲ್ಲ/ ಸಿಗರೇಟು ಕಟ್ಟಿರುವ ಕೈಗಳು/ ಯಾವ ಜಾತಿಯವೆಂದು/ ಮತ್ತೇಕೆ ಚಾರಮಿನಾರದ/ ಚೌಕದಲಿ ದೊಂಬಿಗಳು? (ಚಾರಮಿನಾರದ ಚೌಕ)

ಇಂತಹ ಸೂಕ್ಷ್ಮ ಪ್ರಶ್ನೆಗಳನ್ನು ಕವಿ ಹಲವು ಕಡೆ ಕೇಳಿದ್ದಾರೆ. ಇಲ್ಲಿ ಮತ್ತೆ ಮತ್ತೆ ಎದುರಾಗುವ ಯುದ್ಧ ಭಯೋತ್ಪಾದನೆ, ಬಾಂಬು, ಸ್ಫೋಟ ಮುಂತಾದ ಶಬ್ದಗಳು ಸಾಮಾನ್ಯವಾಗಿ ಎಲ್ಲರಲ್ಲೂ ಭಯವನ್ನು ಹುಟ್ಟಿಸುತ್ತವೆ. ಆದರೆ ಇವು ಮುಸ್ಲಿಂ ಬಾಂಧವರಲ್ಲಿ ಹುಟ್ಟಿಸುವ ತಲ್ಲಣದ ಅನುಭವಗಳು ಬೇರೆಯೇ ಇರುತ್ತದೆ. ಕೈಯಲ್ಲಿ ಕೋವಿ ಹಿಡಿದವರು ನನ್ನವರಲ್ಲ ಸ್ವಾಮಿ ಎಂದು ಕವಿಯತ್ರಿ ತನ್ನ ಸಮುದಾಯವನ್ನು ಅಪರಾಧಿ ಭಾವದಿಂದ ಬಿಡಿಸಲು ಯತ್ನಿಸುವ ಆತಂಕ ಕಾಣುತ್ತದೆ. ಅಂತಹ ತಲ್ಲಣದ ಅನೇಕ ಮುಖಗಳನ್ನು ಜಿಹಾದ್ ಎಂದರೆ, ಭಯೋತ್ಪಾದಕರಾರು, ನನ್ನವರು ಸ್ವಾಮಿ, ಭಯತುಂಬಿದ ಕಣ್ಣುಗಳು ಮುಂತಾದ ಪದ್ಯಗಳಲ್ಲಿ ಕಾಣಬಹುದು. ಮುಸ್ಲಿಂ ಸ್ತ್ರೀಯೊಬ್ಬಳು ಮಹಿಳೆ ಕುರಿತು ಮಾತನಾಡುವಾಗ ಹುಟ್ಟಬಹುದಾದ ಸ್ತ್ರೀ ಸಂವೇದನೆಯ ಬೇರೆಯದೇ ಆದ ಆಯಾಮವೊಂದು ಇಲ್ಲಿನ ಕಾವ್ಯಗಳಲ್ಲಿ ಗರಿಗಟ್ಟಿದೆ. ಅದು ಬುರ್ಖಾ ಪ್ಯಾರಡೈಸ್, ಅಕ್ಕನಿಗೊಂದು ಪ್ರಶ್ನೆ, ಅವ್ವನ ಸಂಸ್ಕೃತಿ, ಕೇಳು ಬಾ ತಂಗೆವ್ವಾ, ಅಹಲ್ಯೆಯ ತುಣುಕುಗಳು ಮುಂತಾದ ಪದ್ಯಗಳಲ್ಲಿ ನಿಚ್ಚಳವಾಗಿ ಕಾಣುತ್ತದೆ. ಇದು ಈ ಕಾವ್ಯದ ಕಟ್ಟನಲ್ಲಿ ಎದ್ದು ಕಾಣುವ ಶಕ್ತಿಯೂ ಕೂಡ.

ಇಲ್ಲಿ ಸದ್ಯದ ಘಟನೆಗಳಿಗೆ ಪ್ರತಿಕ್ರಿಯಾತ್ಮಕ ಪದ್ಯಗಳ ಸಂಖ್ಯೆ ದೊಡ್ಡದಿದೆ. ಕವಿಯತ್ರಿಯೇ ಹೇಳಿಕೊಳ್ಳುವ ಅವರ ಮಾತುಗಳಲ್ಲಿಯೂ ಇದು ಸ್ಪಷ್ಟವಾಗುತ್ತದೆ. ಇದು ಕವಿಯೊಬ್ಬರ ಜೀವಂತಿಕೆಯೂ ಕೂಡ. ಕಾವ್ಯವನ್ನು ಬರೆಯುವ ಒತ್ತಡ ಮತ್ತು ಕಾವ್ಯದ ಹುಟ್ಟಿನ ಬಗ್ಗೆಯೇ ಹಲವು ಪದ್ಯಗಳನ್ನು ಬರೆದಿದ್ದಾರೆ. ಇಲ್ಲಿ ಕವಿಯತ್ರಿಯ ಆತ್ಮಾವಲೋಕನವೂ ಸಾಧ್ಯವಾಗಿದೆ. ಪ್ರತಿಭಟನೆ ಇಲ್ಲವಾಗುತ್ತಿರುವ ಈ ಹೊತ್ತನ್ನು ಕುರಿತು ಹೀಗೇಕೆ ಮೌನವಾಗಿದೆ ಅಕ್ಷರದಂಗಳದ ಜಗತ್ತು? ಎಂದು ಪ್ರಶ್ನಿಸುತ್ತಾರೆ. ಅದು ಇದೇ ಸಂಕಲನಕ್ಕೆ ಮುನ್ನುಡಿ ಬರೆದ ಕವಿ ಸಿದ್ದಲಿಂಗಯ್ಯ ಅವರನ್ನೇ ನೇರವಾಗಿ ಕೇಳಿದಂತಿದೆ. ಅಂತೆಯೇ ಇಲ್ಲಿನ ಕಾವ್ಯದಲ್ಲಿ ಪ್ರಶ್ನೆಯ ಮಾದರಿ ಹೆಚ್ಚು ಬಳಕೆಯಾಗಿದೆ. ಇವು ನಾವು ಬದುಕುತ್ತಿರುವ ಕಾಲವೇ ಹುಟ್ಟಿಸಿದ ಪ್ರಶ್ನೆಗಳು. ಅಂತೆಯೇ ನಾವೀಗ ಎಲ್ಲರೂ ಕೇಳಿಕೊಳ್ಳಬೇಕಾದ, ನಮ್ಮೊಳಗೆ ಕಾಡಬೇಕಾದ ಪ್ರಶ್ನೆಗಳೂ ಕೂಡ.

ಡಿ. ಆರ್. ನಾಗರಾಜ ಅವರು ನವ ಮೌಖಿಕತೆಯ ಅಪಾಯದ ಬಗ್ಗೆ ಬರೆಯುತ್ತಾ ಪದ ಲಭ್ಯತೆ, ಪ್ರತಿಮಾ ಲಭ್ಯತೆ, ಕುಲದ ಲಭ್ಯತೆ ಕಡಿಮೆಯಾಗುತ್ತಾ ಈ ಮೂರರ ಪ್ರಾಣದಾಯಕ ಶಕ್ತಿ ನಾಶವಾಗುತ್ತದೆ ಎನ್ನುತ್ತಾರೆ. ಅಂದರೆ ಮಾಧ್ಯಮದಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾದ ಶಬ್ದಕೋಶ, ಪ್ರತಿಮೆ ತೀರಾ ಸವಕಲಾಗಿ ತೆಳುವಾಗುತ್ತವೆ. ಆ ಶಬ್ದ ಮತ್ತು ಪ್ರತಿಮೆಗಳು ಕಾವ್ಯ ಅಥವಾ ಸೃಜನಶೀಲ ಬರಹಗಳಲ್ಲಿ ಬಳಕೆಯಾದಾಗ ಒಟ್ಟು ಬರಹ ಸಪ್ಪೆಯೆನ್ನಿಸುತ್ತದೆ. ಅಂತೆಯೇ ಕಾವ್ಯದ ಪ್ರತಿಮಾತ್ಮಕ ಶಕ್ತಿ ಕಡಿಮೆಯಾಗುತ್ತದೆ ಎನ್ನುವುದು ಇದರ ತಿರುಳು. ಈಚಿನ ಪದ್ಯಗಳನ್ನು ಓದುತ್ತಿದ್ದರೆ ಈ ಮಾತು ನಿಜ ಅನ್ನಿಸುತ್ತಿದೆ. ಕೆ. ಶರೀಫಾ ಅವರೂ ಇದನ್ನು ಮೀರಲು ಸಾಧ್ಯವಾಗಿಲ್ಲ, ಅಂದರೆ ವರ್ತಮಾನದ ಸಂಗತಿಯನ್ನು ನುಡಿಗಟ್ಟನ್ನು ಕಾವ್ಯದಲ್ಲಿ ತರುವಾಗ ಅ... ಸವಕಲು ಪದ ಪ್ರತಿಮಾತ್ಮಕ ತೀವ್ರತೆಯನ್ನಾಗಲಿ ಕಾಡುವಿಕೆಯನ್ನಾಗಲೀ ಉಳಿಸುವುದಿಲ್ಲ. ಈ ಮಾತು ಇಲ್ಲಿನ ಪದ್ಯಗಳನ್ನು ಓದಿದಾಗ ನಿಜ ಅನ್ನಿಸಿದೆ. ಇದು ಶರೀಫಾ ಅವರೊಬ್ಬರ ತೊಡಕಲ್ಲ, ಈ ಹೊತ್ತು ಕಾವ್ಯ ಬರೆವ ಎಲ್ಲರ ತೊಡಕೂ ಹೌದು. ಇದನ್ನು ಮೀರುವುದು ಈ ಹೊತ್ತಿನ ಕವಿಗಳ ಮುಂದಿರುವ ದೊಡ್ಡ ಸವಾಲು ಕೂಡ.

ಕೆ.ಶರೀಫಾ ಅವರ ಕಾವ್ಯಕ್ಕೆ ಹಲವು ಮಿತಿಗಳಿವೆ. ಇದು ಅವರ ಐದನೆ ಸಂಕಲನ. ಆದರೆ ಕವಿಯೊಬ್ಬರ ಐದನೆ ಸಂಕಲನದಲ್ಲಿ ಕಾಣಬಹುದಾದ ಪ್ರಬುದ್ಧತೆಯಾಗಲಿ ಕಾವ್ಯಕಲೆಯಾಗಲಿ ಸಿದ್ಧಿಸಿಲ್ಲ. ಹೆಚ್ಚು ವಾಚ್ಯದಲ್ಲೇ ಇರುವ ಇಲ್ಲಿನ ಪದ್ಯಗಳು ಮೊದಲ ಓದಿಗೆ ಆಪ್ತವಾದಂತೆ, ಮನಸ್ಸಿನ ಆಳಕ್ಕೆ ಇಳಿಯುವುದಿಲ್ಲ. ಆಯಾ ಸಂದರ್ಭಕ್ಕೆ ಆ ತಕ್ಷಣ ಪ್ರತಿಕ್ರಿಯಿಸಿದ್ದು ಇದಕ್ಕೆ ಕಾರಣವಿರಬಹುದು. ವರ್ತಮಾನವನ್ನು ಕಾವ್ಯದಲ್ಲಿ ಹಿಡಿಯುವುದು ಕವಯಿತ್ರಿಯ ಶಕ್ತಿ ಹೇಗೋ ಅದೇ ಗುಣ ಸ್ವಲ್ಪ ತೆಳುವಾಗಿ ಮಿತಿಯೂ ಆಗಿದೆ. ವರ್ತಮಾನದ ಸಂಗತಿಗಳ ಜತೆ ಕವಿಯತ್ರಿಗೆ ಧ್ಯಾ...

ಪುಸ್ತಕ ವಿಮರ್ಶೆ

...ಸಾಧ್ಯವಾಗಿಲ್ಲ, ಕುತೂಹಲಕ್ಕೆ ಒಂದು ಸಂಗತಿಯನ್ನು ಹೇಳಬಹುದು. ಕವಯಿತ್ರಿ ಕೆಲಸ ನಿರ್ವಹಿಸುತ್ತಿರುವುದು ಕೃಷಿ ಮಾರುಕಟ್ಟೆಯಲ್ಲಿ, ನಿತ್ಯವೂ ರೈತರ ಬವಣೆಯನ್ನು ಹತ್ತಿರದಿಂದ ನೋಡುತ್ತಾರೆ. ಆಶ್ಚರ್ಯವೆಂದರೆ ಎಲ್ಲೂ ರೈತ ಸಂಬಂಧಿ ಅನುಭವಗಳೂ ಕಾವ್ಯವಾಗಿಲ್ಲ, ಕವಿಯತ್ರಿ ದೊಡ್ಡ ದೊಡ್ಡ ಸಂಗತಿಗಳ ಜತೆ ಮುಖಾಮುಖಿಯಾಗುತ್ತಾ ಹಲವೊಮ್ಮೆ ತೀರಾ ಸಾಮಾನ್ಯವಾದ ನಿಲುವುಗಳಿಗೆ ಬಂದುಬಿಡುತ್ತಾರೆ. ಇದರಿಂದಾಗಿ ನಿತ್ಯದ ಬದುಕಿನ ಸಣ್ಣ ಸಣ್ಣ ಸಂಗತಿಯೊಳಗಿನಿಂದ ತೋರಬಹುದಾದ ದೊಡ್ಡ ದರ್ಶನಗಳು ಸಾಧ್ಯವಾಗಿಲ್ಲ.

ಇಂತಹ ಕೆಲವು ಮಿತಿಗಳನ್ನು ಹೊರತುಪಡಿಸಿದರೆ ಒಂದು ಒಳ್ಳೆಯ ಓದಿನ ಅನುಭವವಾಗುತ್ತದೆ. ಸುಕುಮಾರ ತೆವಲಿನ ಪದ್ಯಗಳಿಗಿಂತ ಸದ್ಯದ ಕಾಲದ ಉರಿವ ವರ್ತಮಾನದ ಉಸಿರಾದ 'ಬುರ್ಖಾ ಪ್ಯಾರಡೈಸ್'ನ ಓದು ಹೊಸ ಅನುಭವಗಳನ್ನು ದಕ್ಕಿಸುತ್ತದೆ. ಆ ಕಾರಣಕ್ಕೆ ಕೆ.ಶರೀಫಾ ಅವರು ಅಭಿನಂದನಾರ್ಹರು.

• ಡಾ. ಅರುಣ್ ಜೋಳದಕೂಡ್ಲಿಗಿ

ಹೇಳು


ಎಲ್ಲ ವಾಸನೆಗಳೂ ನಿನ್ನ ಸುತ್ತಿಕೊಂಡಿವೆ: ಮಣ್ಣಿನ ವಾಸನೆ
ನೀರಿನ ವಾಸನೆ, ಅದೇ ಆಗ ಜೀವತಳೆದ ಕೋಶದ ವಾಸನೆ
ಅವರೆ, ಹಲಸಂದಿ, ಸೇಂಗಾ ಹಾಲೊಡೆದ ಹಲವು ಕಾಯಿಗಳ
ಒಗರು ವಾಸನೆ, ನೆಲಕ್ಕೆ ಬಿದ್ದು ಕೊಳೆತ ಹಣ್ಣಿನ ವಾಸನೆ
ಮೊಳೆವ, ಕೊಳೆವ ಜೀವಸಂಕುಲಗಳ ಹಲವು ವಾಸನೆ
ಬಿಚ್ಚುತ್ತ ಹೋದಂತೆ ನಿನ್ನ ಮೈಯ್ಯ ರಂಧ್ರ ರಂಧ್ರಗಳಿಂದ
ಹೊಮ್ಮುತ್ತ ಸೆಳೆಯುತ್ತ, ತಳ್ಳುತ್ತ ಒಳಗೊಳ್ಳುತ್ತ ಹಬ್ಬುವ
ಪರಿಮಳದ ಮಾಯೆ ಮಗ್ಗುಲು ಬದಲಿಸಿದರೆ ದುರ್ಗ[illegible]
ಛಾಯೆ. ತುಂಬಿತುಳುಕುವ ಗಾಳಿ; ಒಂದರೊಳಗೊಂದು
ಬೆರೆತು ಕಸಿವಿಸಿದ [illegible]ಥದೋ ಗಂಧ ಗಾಳಿ

ತಲೆಸುತ್ತಿದರೆ ಬೀಳುತ್ತೇನೆ ನಿನ್ನ ಮಡಿಲಿಗೆ; ನಿನ್ನ ಮಡಿಲೆಂದರೆ
ಅದು ಅನಂತದ ಬಯಲು, ತೆರೆದ ಕೊನೆ ಮೊದಲಿರದ ಆಕಾಶಗಳ
ಹೊದ್ದ ಜೀವಸತ್ವ ತುಂಬಿ ತುಳುಕುವ ಆಕಾರ ಮಮಕಾರಗಳ ಭೂಮಿ
ತಾಯಿ ಮೃತ್ಯು ನಿದ್ದೆ ಅಮಲು ಮತ್ತು ಮತ್ತೇರಿಸುವ ಮತ್ತು

ನಿನ್ನ ಬಿಡಿಸುತ್ತ ಹೋಗಲೆ, ಅಣುಅಣುವ ಬೇರ್ಪಡಿಸಿ ಪಂಚಭೂತಗಳಿಗೆ
ಹಂಚಲೆ? ಮಾತು-ಮೌನಗಳ ಬೆರೆಸಿ ನಾದವಲ್ಲದ ನಾದವ ಹೊಮ್ಮಿಸಲೆ?
ನಿನ್ನ ಹೇಗೆ ಹಿಡಿಯಲಿ? ನೋಟದಲ್ಲೆ, ಮಾಟದಲ್ಲೆ, ಮಾಯೆ ಮುಸುಕಿನಲ್ಲೆ?
ಸೀಮೆಸೀಮೆಗಳ ಮೀರಿದ ನಿಸ್ಸೀಮೆಯಲ್ಲೇ? ನನ್ನಳವಿಗೆ ತಿಳಿಯದ ಈ ಒಗಟ
ಬಿಡಿಸುವೆಯ?

ಕಾಲದಿಂದ ಕಾಲಕ್ಕೆ ಉಳಿದುಬಂದ ಕಾಲಾಂತರಿಯೆ
ಜೀವದಿಂದ ಜೀವಕ್ಕೆ ಹರಿದುಬಂದ ಜೀವಾಚಿತರಿಯೆ
ಸತ್ವದಿಂದ ಸತ್ವಕ್ಕೆ ಬೆಳೆಯುತ್ತ ಬಂದ ಮಹಾಸತ್ವಿನಿಯೆ
ಹೇಳು
ನಿನ್ನ
[illegible]
ವಿಳಾಸ
ವಿಲಾಸ?

• ಜಿ.ಪಿ.ಬಸವರಾಜು



...ಕ್ಸಲರ ದಾಳಿ ಕ್ರೂರ.....

► 2


...ತ್ರ ತಾರಕಕ್ಕೆ ಮುಟ್ಟುವ ಕ್ರಾಂತಿಕಾರಿ ಚಳವಳಿಯನ್ನು ಪ್ರಭುತ್ವ ...ಂತ ಕ್ರೂರವಾಗಿ ಹೊಸಕಿಹಾಕುತ್ತದೆಂಬುದನ್ನು 74ರಲ್ಲೂ, ಇತ್ತೀಚೆಗೆ ...ಪ್ರ-ತೆಲಂಗಾಣದಲ್ಲೂ ಮಾವೋವಾದಿ ಚಳವಳಿ ತಾನೇ ಅನುಭವಿಸಿದೆ. ...ನೆ ಅರ್ಥಮಾಡಿಕೊಂಡಂತಿಲ್ಲ. ಹೀಗಾಗಿ ಅದರಿಂದ ಏನೇನೂ ಪಾಠವನ್ನು ...ಯದೆ ಮತ್ತೊಮ್ಮೆ ಛತ್ತೀಸ್‌ಘಡ್‌ದಲ್ಲಿ ಅದೇ ರೀತಿಯ ಆತ್ಮಹತ್ಯಾತ್ಮಕ ...ದರ್ಭವನ್ನು ಸೃಷ್ಟಿಸಿಕೊಂಡಿದೆ. ಆ ಪ್ರದೇಶದ ಇಡೀ ಆದಿವಾಸಿ ...ಮುದಾಯವನ್ನು ತನ್ನ ತಪ್ಪು ವ್ಯೂಹತಂತ್ರಗಳಿಂದ ಸಾಮೂಹಿಕ ಹತ್ಯೆಯ ...ಯಕ್ಕೂ ದೂಡಿದೆ. ಛತ್ತೀಸ್‌ಘಡದ ಆದಿವಾಸಿಗಳ ಹೋರಾಟ ಏಕೆ ...ಯುತ್ತಿದೆ ಎಂಬ ಬಗ್ಗೆ ಈ ದೇಶದ ಶೇ.90ರಷ್ಟು ಜನತೆಗೆ ಗೊತ್ತೇ ... ಇನ್ನು ಅವರಿಂದ ಬೆಂಬಲ ದೊರಕಿಸಿಕೊಳ್ಳುವುದು ದೂರದ ...ತು. ಆದರೆ ಮಾವೋವಾದಿಗಳು ಒಬ್ಬ ಅರುಂಧತಿ ರಾಯ್ ಒಂದು ...'ಲುಕ್' ಪತ್ರಿಕೆಯಲ್ಲಿ ಬರೆದ ಲೇಖನವನ್ನೇ ಜನರ ಬೆಂಬಲ ಎಂದು ...ಮಾಡಿಕೊಳ್ಳುತ್ತಿರುವಂತೆ ಕಾಣುತ್ತಿದೆ. ತಮ್ಮದೇ ಅನುಭವದಿಂದ ...ಯು ಪಾಠ ಕಲಿಯುವುದೇ ಆದರೆ ಶೇ.90ರಷ್ಟು ಭಾರತದ ಜನತೆ ...ರ ಬಗ್ಗೆ ಮೌನವಾಗಿರುವಾಗ ಅಥವಾ ದೇಶಾದ್ಯಂತ ಆಳುವ ವರ್ಗಗಳನ್ನು ...ಟ್ಟಿಗೆ ಸಿಲುಕಿಸುವಂಥ ಬೃಹತ್ ರಾಜಕೀಯ ಹೋರಾಟಗಳ ...ದರ್ಭವಿಲ್ಲದಿರುವಾಗ ಭಾರತದ ಪ್ರಭುತ್ವದೊಂದಿಗೆ ಯಾವುದೋ ...ಮ ಮೂಲೆಯಲ್ಲಿ ಕೇವಲ ಸೇನಾತ್ಮಕವಾಗಿ ಮುಖಾಮುಖಿಯಾಗುವ ...ವಜೆಯನ್ನು ಅನುಸರಿಸುತ್ತಿರಲಿಲ್ಲ. ಇಂಥ ರಾಜಕೀಯವನ್ನು ಸಾಕ್ಷಾತ್ ...ವೋ ಅವರೇ ದುಸ್ಸಾಹಸ ಮತ್ತು ಕ್ರಾಂತಿಗೆ ಹಾನಿಕರ ಎಂದು ...ಸಿದ್ದರು.



...ಮಾವೋವಾದಿಗಳು ಪದೇಪದೇ ಇದೇ ಬಗೆಯ ದುಸ್ಸಾಹಸವನ್ನು ...ಡುತ್ತಾ ಈ ದೇಶದ ಕ್ರಾಂತಿಯನ್ನು ಮುಂದೂಡುತ್ತಲೇ ಬಂದಿದ್ದಾರೆ. ...ಲ್ 6ರಂದು ಅವರ ಗೆರಿಲ್ಲಾ ಪಡೆಗಳು ನಡೆಸಿದ ದಾಳಿ ಇಂಥಾ ...ಹಿ ದುಸ್ಸಾಹಸದ ಒಂದು ಭಾಗವೇ ಎಂದು ಕಾಣುತ್ತದೆ. ಸಮಾಜವನ್ನು ...ತ್ತಿ ಜನರನ್ನು ಗೆಲ್ಲುವುದಕ್ಕಿಂತ ಪ್ರಭುತ್ವವನ್ನು ಸೋಲಿಸುವುದೇ ...ನವಾಗಿರುವುದು, ಮಿಲಿಟರಿ ವ್ಯೂಹತಂತ್ರ ತಾತ್ವಿಕತೆಯ ಸ್ಥಾನ ...ದುಕೊಳ್ಳುತ್ತಿರುವುದು, ಆತ್ಮ ಬಲಿದಾನದ ಹೆಗ್ಗಳಿಕೆ ಸೃಷ್ಟಿಸಿರುವ ...ಡು ಮತ್ತು ಕಿವುಡುಗಳು ಸಹ ಛತ್ತೀಸ್‌ಘಡ್ ಇಂದಿನ "ಹಿಂಸಾತ್ಮಕ" ...ರ್ಭವನ್ನು ಪ್ರಭಾವಿಸುತ್ತಿರುವ ಸಂಗತಿಯಾಗಿದೆ.

ಈ ಸಂಗತಿಗಳೇ ಸ್ವತಂತ್ರ ಭಾರತ ಹಿಂದೆಂದೂ ಕಾಣದಂಥ ಆಂತರಿಕ ...ದ್ಧದ ಸಂದರ್ಭವನ್ನು ಸೃಷ್ಟಿಸಿದೆ. ಯುದ್ಧವೆಂದರೆ ಹಿಂಸಾಚಾರವೇ. ...ಲೊಮ್ಮೆ ಯೋಧರ ಸಾವು. ಕೆಲವೊಮ್ಮೆ ಮಾವೋವಾದಿ ...ಆದಿವಾಸಿಗಳ ಸಾವು. ಆದರೂ ಇದು ಅನ್ಯಾಯದ ಯುದ್ಧ, ಏಕೆಂದರೆ ...ಯುದ್ಧದ ಉದ್ದೇಶ ಆದಿವಾಸಿಗಳನ್ನು ಎತ್ತಂಗಡಿ ಮಾಡಿ ಈ ...ನ್ನು ವಿದೇಶಿ ಕಂಪನಿಗಳ ವಶಾಹತುವನ್ನಾಗಿ ಮಾಡುವುದಾಗಿದೆ. ...ಗಿ ಹಿಂಸೆಗೆ ಪ್ರಮುಖ ಕಾರಣವೇ ಈ ಅನ್ಯಾಯಯುತ ...ದ್ಧವಾದ್ದರಿಂದ ಮೊದಲು "ಆಪರೇಷನ್ ಗ್ರೀನ್‌ಹಂಟ್" ಎಂಬ ಈ ...ದ್ಧವನ್ನು ಬೇಷರತ್ತಾಗಿ ವಿರೋಧಿಸುವ ಮೂಲಕವೇ ಯೋಧರ ... ಆದಿವಾಸಿಗಳ ಪ್ರಾಣವನ್ನು ರಕ್ಷಿಸಬೇಕಿದೆ. ಹಾಗೆಯೇ ಇದೊಂದು ...ಹಸ ಯುದ್ಧ, ಮಾವೋವಾದಿಗಳ ಅವಿವೇಕದ ಪಾಲೂ ಇದರಲ್ಲಿದೆ. ...ನ್ನು ಮನವರಿಕೆ ಮಾಡಿಸಬೇಕಿದೆ.

...ಗೆ ಮಾಡಿದಲ್ಲಿ ಮಾತ್ರ ನಾಗರಿಕ ಸಮಾಜಕ್ಕೆ ಯಾವುದೇ ...ಚಾರವನ್ನು ಖಂಡಿಸುವ ನೈತಿಕ ಅರ್ಹತೆ ಬರುತ್ತದೆ. ಇಲ್ಲದಿದ್ದರೆ ಕೇವಲ ಪ್ರಭುತ್ವದ "His Masters Voice" ಆಗಿಬಿಡುವ ...ಯವಿದೆ. ●



ಮುಸ್ಲಿಂ ಮಹಿಳೆಯರಿಂದ ಒಂದು ವಿಶೇಷ ಮನವಿ

●

ಇಸ್ಲಾಮಿಕ್ ನಿಯಮಗಳು ಕಾಲದ ಹಾದಿಗಳಲ್ಲಿ, ದೇಶಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಬದಲಾವಣೆ ಹೊಂದಿರುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಆದುದರಿಂದ ನಾವು ಪ್ರಧಾನಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಸಾಂವಿಧಾನಿಕ ಹಕ್ಕುಗಳನ್ನು ಅನುಷ್ಠಾನಕ್ಕೆ ತಂದು ಮುಸ್ಲಿಂ ಮಹಿಳೆಯರಿಗೆ ರಕ್ಷಣೆಯೊದಗುವಂತೆ ಮುಸ್ಲಿಂ ವ್ಯಕ್ತಿ ನಿಯಮದ ಕ್ರೋಢೀಕರಣವಾಗಬೇಕು.

●

ಕೇರಳದ ಕೋಝಿಕೋಡಿನಲ್ಲಿ 'ನಿಸಾ' ಎಂಬ ಮುಸ್ಲಿಂ ಮಹಿಳಾ ಸಂಘಟನೆಯೊಂದು 1997 ರಲ್ಲಿ ವಿ.ಪಿ. ಜುಹರಾ ಎಂಬವರಿಂದ ಸ್ಥಾಪನೆಗೊಂಡು ಬಹುಪತ್ನಿತ್ವ ಮತ್ತು ಸುಲಭದ ವಿವಾಹ ವಿಚ್ಛೇದನ (ತಲಾಖ್) ಪದ್ಧತಿಯ ವಿರುದ್ಧ ಹೋರಾಡುತ್ತಾ ಮುಸ್ಲಿಂ ವ್ಯಕ್ತಿ ನಿಯಮದಲ್ಲಿ ಮಹಿಳೆಯರಿಗಾಗುತ್ತಿರುವ ಅನ್ಯಾಯ ಮತ್ತು ಶೋಷಣೆಗಳೆಡೆಗೆ ಜನರ ಗಮನ ಸೆಳೆದು ಈ ವ್ಯಕ್ತಿ ನಿಯಮದ ಬದಲಾವಣೆಗಾಗಿ ಕಾರ್ಯಪ್ರವೃತ್ತವಾಗಿದೆ.

ದಿನಾಂಕ 8.3.2010 ರಂದು ಅಲ್ಲಿ ಮಹಿಳಾ ದಿನಾಚರಣೆಯನ್ನಾಚರಿಸಿ ಮುಸ್ಲಿಂ ವ್ಯಕ್ತಿ ನಿಯಮದ ಬದಲಾವಣೆಯಾಗಬೇಕೆಂದು ಮನವಿಯೊಂದನ್ನು ಸಿದ್ಧಪಡಿಸಿ ಅಂದು ಉಪಸ್ಥಿತರಿದ್ದ ಎಲ್ಲ ಮಹಿಳೆಯರಿಂದ ಸಹಿಗಳನ್ನು ಪಡೆದು ಪ್ರಧಾನಮಂತ್ರಿಗಳಿಗೆ ರವಾನಿಸಲಾಗಿದೆ. ಈ ಮನವಿಯ ಪೂರ್ಣ ಪಾಠ ಈ ಕೆಳಗಿನಂತಿದೆ.

ಭಾರತೀಯ ಸಂವಿಧಾನವು ಧರ್ಮ, ಜಾತಿ, ಲಿಂಗ ಭೇದವಿಲ್ಲದೆ ಸರ್ವ ನಾಗರಿಕರಿಗೂ ಸ್ವಾತಂತ್ರ್ಯ ಸಮಾನತೆ ಮತ್ತು ನ್ಯಾಯವನ್ನು ನೀಡಿದೆ. ಆದರೆ ಬ್ರಿಟಿಷರ ಆಡಳಿತ ಕಾಲದಿಂದಲೂ ಮುಸ್ಲಿಂ ವ್ಯಕ್ತಿನಿಯಮವು ಮುಸ್ಲಿಂ ಮಹಿಳೆಯರಿಗೆ ಪವಿತ್ರ ಖುರ್‌ಆನ್ ನೀಡಿದ ಹಕ್ಕುಗಳನ್ನು ನಿರಾಕರಿಸುತ್ತಲೇ ಬಂದಿದೆ. ಹಾಗೂ ಎಲ್ಲ ಮುಸ್ಲಿಮರು ಮತ್ತು ಧಾರ್ಮಿಕ ಗುರುಗಳು ಈ ವ್ಯಕ್ತಿ ನಿಯಮವನ್ನು ಒಪ್ಪಿಕೊಂಡಿವೆ. ಪುರಾತನಕಾಲದಿಂದಲೂ ಪವಿತ್ರ ಗ್ರಂಥದ ವ್ಯಾಖ್ಯಾನವನ್ನು ಪುರುಷರು ತಮ್ಮ ಹಿತಾಸಕ್ತಿಗನುಗುಣವಾಗಿ ತಿರುಚಿಕೊಂಡು ನಿಯಮ ರೂಪಿಸುತ್ತಿದ್ದಾರೆ. ಪವಿತ್ರ ಗ್ರಂಥವು ಎಂದಿಗೂ ಮಹಿಳಾ ವಿರೋಧಿಯಲ್ಲ ಎಂಬುದನ್ನು ಧರ್ಮಗುರುಗಳು ನಿರಾಕರಿಸುತ್ತಿಲ್ಲ. ಈ ಬೆಳಕಿನಲ್ಲಿ ವ್ಯಕ್ತಿ ನಿಯಮಗಳ ಚರ್ಚೆಯಾಗಬೇಕು.

ಶರಿಯತ್ ನಿಯಮವು 1937 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಕಾನೂನು ವಿವಾಹ, ವಿಚ್ಛೇದನ, ವಾರೀಸು ಹಕ್ಕು ಮುಂತಾದವುಗಳು ಶರಿಯತ್‌ಗನುಸಾರವಾಗಿ ರಚಿಸಲ್ಪಟ್ಟಿದೆಯೆಂದು ಹೇಳಲಾಗಿದ್ದರೂ ಶರಿಯತ್ ಅಂದರೇನೆಂಬುದರ ವಿಷದೀಕರಣ ಇರಲಿಲ್ಲ. ಆದುದರಿಂದ ಮುಸ್ಲಿಂ ವ್ಯಕ್ತಿ ನಿಯಮ ಪರಿಣಾಮಕಾರಿಯಾದ ಕಾಯಿದೆ ರೂಪದಲ್ಲಿರಲಿಲ್ಲ. ಆದುದರಿಂದ 1939 ರಲ್ಲಿ ಈ ಮುಸ್ಲಿಂ ವಿವಾಹ ಕಾಯಿದೆಗಳನ್ನು ರದ್ದುಪಡಿಸಿ ಮುಸ್ಲಿಂ ಮಹಿಳೆಯರಿಗೆ ವಿಚ್ಛೇದನಕ್ಕೆ ಅವಕಾಶ ನೀಡುವಂತಹ ಹೊಸ ನಿಯಮವನ್ನು ಕ್ರೋಢೀಕರಿಸಲು ಪ್ರಯತ್ನಿಸಲಾಯಿತು. ಇದು ವ್ಯಕ್ತಿ ನಿಯಮವನ್ನು ಕ್ರೋಢೀಕರಿಸುವ ಒಂದು ಪ್ರಯತ್ನ ಮಾತ್ರವಾಗಿತ್ತು. ವಿವಾಹ, ಪುರುಷರು ನೀಡುವ ತಲಾಖ್, ಜೀವನಾಂಶ, ವಾರೀಸು ಹಕ್ಕು ಮುಂತಾದವುಗಳು ಕಾಯಿದೆಗಳಾಗಲಿಲ್ಲ.

1986 ರ ಕಾಯಿದೆಯು ವಿಚ್ಛೇದಿತ ಮಹಿಳೆಗೆ ಜೀವನಾಂಶ ನೀಡುವಂತಹ ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ 125 ನೇ ವಿಧಿಯಿಂದ ಮುಸ್ಲಿಂ ಮಹಿಳೆಯರನ್ನು ಹೊರಗಿಡಲಾಯಿತು. ಈ ದೇಶದ ಜಾತ್ಯತೀತ ಸಂವಿಧಾನದಲ್ಲಿ ಹಸ್ತಕ್ಷೇಪ ಮಾಡುವಂತಹ ಈ ಕಾನೂನಿಗೆ ವಿ.ಆರ್. ಕೃಷ್ಣ ಅಯ್ಯರ್‌ರಂತಹ ನ್ಯಾಯಾಧೀಶರುಗಳು ಆಕ್ಷೇಪವೆತ್ತಿದ್ದರು.

ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಕೇರಳ ನಿಯಮ ಸುಧಾರಣಾ ಆಯೋಗವು ಮುಸ್ಲಿಂ ವ್ಯಕ್ತಿ ನಿಯಮದ ಸುಧಾರಣೆಗಾಗಿ ಕೆಲವು ಸಲಹೆ, ಸೂಚನೆಗಳನ್ನು ಸರ್ಕಾರದ ಮುಂದಿಟ್ಟಿತು. ಸುಧಾರಣಾ ಆಯೋಗದ ಈ ಪ್ರಸ್ತಾಪವು ಕೇರಳದಲ್ಲಿ ಗಂಭೀರವಾಗಿ ಚರ್ಚಿಸಲ್ಪಟ್ಟಿತು. ಸುಧಾರಣಾ ಆಯೋಗದ ಅಧ್ಯಕ್ಷರೂ ಮಾನವ ಹಕ್ಕುಗಳ ಹೋರಾಟಗಾರರೂ ಆದ ಕೃಷ್ಣ ಅಯ್ಯರ್ ಕೂಡಾ ಇಂಡಿಯಾದ ಸಂವಿಧಾನದಲ್ಲಿ ನೀಡಿದ ಮಹಿಳಾ ಸಮಾನತೆ ಮತ್ತು ಘನತೆಯ ಕುರಿತು ಮೂಲಭೂತವಾದಿಗಳೊಡನೆ ರಾಜಿ ಮಾಡಿಕೊಂಡರು! ಏಕಪತ್ನಿತ್ವ ನಿಯಮವಿದ್ದರೂ ವಿಶೇಷ ಸಂದರ್ಭಗಳಲ್ಲಿ ಮೊದಲ ಪತ್ನಿಯ ಅನುಮತಿಯೊಡನೆ ಇತರ ಪತ್ನಿಯರನ್ನು ಹೊಂದಲು ಅವಕಾಶ ನೀಡಲಾಯಿತು! ಹಾಗೆಯೇ ಮುಸ್ಲಿಂ ಮಹಿಳೆಯರಿಗೆ ವಿಚ್ಛೇದನಕ್ಕೆ ಅವಕಾಶವಿದ್ದ 1939ರ ಮುಸ್ಲಿಂ ವಿವಾಹ ಕಾಯಿದೆಯನ್ನು ರದ್ದುಪಡಿಸುವ ವಿಷಯದಲ್ಲೂ ಇವರು ಮೂಲಭೂತವಾದಿಗಳೊಡನೆ ರಾಜಿ ಮಾಡಿಕೊಂಡರು! ಈ ಸನ್ನಿವೇಶದಲ್ಲಿ ಲಿಂಗ ಸಮಾನತೆಯತ್ತ ಪ್ರಥಮ ಹೆಜ್ಜೆಯಾಗಿ ಮುಸ್ಲಿಂ ವ್ಯಕ್ತಿ ನಿಯಮದ ಕ್ರೋಢೀಕರಣವಾಗಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

ಗೌರವಾನ್ವಿತ ನ್ಯಾಯಾಧೀಶರಾದ ಖಾಲಿದ್ ಅವರು, ಇಂಡಿಯಾದ ಮುಸ್ಲಿಂ, ವ್ಯಕ್ತಿ ನಿಯಮವು ಕ್ರೂರವೂ, ಸ್ತ್ರೀ ವಿರುದ್ಧವೂ ಆಗಿದೆಯೆಂಬುದನ್ನು ಮನವರಿಕೆ ಮಾಡಿಕೊಂಡಿದ್ದರು. ಅವರು ಒಂದು ಮೊಕದ್ದಮೆಯ ತೀರ್ಪು ನೀಡುತ್ತಾ "ಶರಿಯತ್ ನಿಯಮದ ರಾಕ್ಷಸ ಪ್ರವೃತ್ತಿಯಿಂದ ನ್ಯಾಯ ತೀರ್ಮಾನ ನೀಡುವ ನನ್ನ ಮನಃಸ್ಸಾಕ್ಷಿ ಅಸ್ವಸ್ಥವಾಗುತ್ತಿದೆ. ಸಾರ್ವಜನಿಕರಿಂದ ಅಭಿಪ್ರಾಯ ಸೃಷ್ಟಿಸುವ ಮುಖಂಡರ ಮನಃಸ್ಸಾಕ್ಷಿ ಕೂಡಾ ಅಸ್ವಸ್ಥವಾಗುವುದಿಲ್ಲವೇ ಎಂಬುದು ಪ್ರಶ್ನೆ" ಎಂದಿದ್ದಾರೆ.

ಕೇರಳದ ನಿಯಮ ಸುಧಾರಣಾ ಆಯೋಗವು ಮುಸ್ಲಿಂ ಮಹಿಳೆಯರಿಗಾಗಿ ನಿಯಮಗಳ ಕ್ರೋಢೀಕರಣ ನಡೆಸಿದಾಗ ಮುಸ್ಲಿಂ ಮೂಲಭೂತವಾದಿ ಪುರುಷರ ಸಲಹೆ, ಸೂಚನೆಗಳನ್ನಷ್ಟೇ ಕೇಳಲಾಯಿತೇ ಹೊರತು ಮಹಿಳೆಯರ ಅಭಿಪ್ರಾಯ, ಸಲಹೆಗಳನ್ನು ಕೇಳಲೇ ಇಲ್ಲ. ಮುಸ್ಲಿಂ ಮಹಿಳೆಯರು ಯಾವ ರೀತಿಯ ಬಟ್ಟೆ ತೊಡಬೇಕು, ಯಾವ ರೀತಿ ಶಿಕ್ಷಣ ಪಡೆಯಬೇಕು; ಒಟ್ಟಾರೆ ಯಾವ ರೀತಿ ಬದುಕಬೇಕೆಂದು ತೀರ್ಮಾನಿಸುವುದು ಪುರುಷರು ತಾನೇ? ಮಹಿಳೆಯರ ಸಲಹೆಯನ್ನು ಕೇಳುವವರಾದರೂ ಯಾರಿದ್ದಾರೆ? ಹೀಗಾಗಿ ಈ ಹೊಸ ನಿಯಮವೂ ಶರಿಯತ್ ನ್ಯಾಯಾಲಯದಂತಹ ಒಂದು, ಸಮಿತಿಯ ಕೈಯಲ್ಲಿ ಮುಸ್ಲಿಂ ಮಹಿಳೆಯರ ಸಮಸ್ಯೆಗಳನ್ನು ಇಡುವಂತಹ ಒಂದು ಬಿಲ್ ಆಗುವಂತೆ ನೋಡಿಕೊಳ್ಳಲು ಮೂಲಭೂತವಾದಿಗಳೂ, ಮತಬ್ಯಾಂಕ್ ರಾಜಕಾರಣಿಗಳೂ ಶಕ್ತಿಯುತವಾಗಿ ಶ್ರಮಿಸಿದ್ದಾರೆ.

ಇಸ್ಲಾಮಿಕ್ ನಿಯಮಗಳು ಕಾಲದ ಹಾದಿಗಳಲ್ಲಿ, ದೇಶಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಬದಲಾವಣೆ ಹೊಂದಿರುವುದಕ್ಕೆ ಇತಿಹಾಸ ಸಾಕ್ಷಿಯಾಗಿದೆ. ಆದುದರಿಂದ ನಾವು ಪ್ರಧಾನಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಸಾಂವಿಧಾನಿಕ ಹಕ್ಕುಗಳನ್ನು ಅನುಷ್ಠಾನಕ್ಕೆ ತಂದು ಮುಸ್ಲಿಂ ಮಹಿಳೆಯರಿಗೆ ರಕ್ಷಣೆಯೊದಗುವಂತೆ ಮುಸ್ಲಿಂ ವ್ಯಕ್ತಿ ನಿಯಮದ ಕ್ರೋಢೀಕರಣವಾಗಬೇಕು. ಅದರಲ್ಲಿ ಈ ಕೆಳಗಿನ ನಿಯಮಗಳು ಒಳಗೊಳ್ಳಬೇಕು.

1. ಬಹುಪತ್ನಿತ್ವಕ್ಕೆ ಪುರುಷರಿಗೆ ಅವಕಾಶವಿರಬಾರದು.
2. ವಿಚ್ಛೇದನವು ಸ್ತ್ರೀಪುರುಷರೆಲ್ಲರಿಗೂ ನ್ಯಾಯಾಲಯದ ಮುಖಾಂತರವೇ ದೊರೆಯುವಂತಾಗಬೇಕು.
3. ವಾರೀಸು ಹಕ್ಕು ಸ್ತ್ರೀ ಪುರುಷರಿಗೆ ಸಮಾನವಾಗಿರಬೇಕು.
4. ಓರ್ವನ ಮರಣವಾಗಿದ್ದರೂ ಆತನ ಮಕ್ಕಳಿಗೆ ಮೃತಪಟ್ಟವನ ತಂದೆಯ ಆಸ್ತಿಯಲ್ಲಿ (ಅಜ್ಜನ ಆಸ್ತಿಯಲ್ಲಿ) ಪಾಲು ದೊರೆಯಬೇಕು.
5. ದತ್ತು ತೆಗೆದುಕೊಳ್ಳುವ ಅಧಿಕಾರವಿರಬೇಕು.
6. ಸ್ತ್ರೀಪುರುಷರಿಗೆ ಸಮಾನವಾದ ಪಾಲನಾ ಹಕ್ಕು ದೊರೆಯಬೇಕು.

ಈ ರೀತಿ ಮುಸ್ಲಿಂ ವ್ಯಕ್ತಿ ನಿಯಮದ ಕ್ರೋಢೀಕರಣದಿಂದ ಮಾತ್ರ ಮುಸ್ಲಿಂ ಮಹಿಳೆಯರಿಗೆ ನ್ಯಾಯ ದೊರೆಯಲು ಸಾಧ್ಯ.

ಸಹಿ

ವಿ.ಪಿ. ಜುಹರಾ

ಅಧ್ಯಕ್ಷರು

ಈ ಮನವಿ ಪತ್ರದ ಪ್ರತಿಗಳನ್ನು ಈ ಕೆಳಗೆ ಕಾಣಿಸಿದವರೆಲ್ಲರಿಗೂ ಕಳುಹಿಸಿಕೊಡಲಾಗಿದೆ.

ಶ್ರೀಮತಿ ಸೋನಿಯಾ ಗಾಂಧಿ, ಅಧ್ಯಕ್ಷರು, ಯುಪಿಎ, ಡಾ. ಎಂ. ವೀರಪ್ಪ ಮೊಯ್ಲಿ, ಕಾನೂನು ಮಂತ್ರಿಗಳು ಕೇಂದ್ರ ಸರ್ಕಾರ, ಶ್ರೀಮತಿ ಗಿರಿಜಾ ವ್ಯಾಸ್, ರಾಷ್ಟ್ರೀಯ ಮಹಿಳಾ ಆಯೋಗ, ಶ್ರೀಮತಿ ಬೃಂದಾ ಕಾರಟ್, ರಾಜ್ಯಸಭಾ ಸದಸ್ಯೆ, ಸಿಪಿಎಂ, ಮುಖ್ಯಮಂತ್ರಿಗಳು, ಕೇರಳ ಸರ್ಕಾರ.

● ಸಾರಾ ಅಬೂಬಕ್ಕರ್



ಅರಣ್ಯದಲ್ಲಿ ಮಾವೋವಾದಿಗಳ ಕ್ಯಾಂಪ್

ಕಾಮ್ರೇಡರೊಂದಿಗೆ

ಅರುಂಧತಿ ರಾಯ್
ಅನುವಾದ
ಗೌರಿ ಲಂಕೇಶ್

ಭಾಗ 3

ನಡೆದಾಡುತ್ತಾ

ಬೆಳಗ್ಗೆ ಐದು ಗಂಟೆಗೆ ಎದ್ದೆವು. ಆರು ಗಂಟೆಗೆ ಮತ್ತೆ ನಮ್ಮ ಪಯಣ ಪ್ರಾರಂಭ. ಒಂದೆರಡು ಗಂಟೆಗಳ ನಂತರ ಮತ್ತೊಂದು ನದಿಯನ್ನು, ಹಲವಾರು ಸುಂದರ ಹಳ್ಳಿಗಳನ್ನು ದಾಟದೆವು. ಪ್ರತಿಯೊಂದು ಹಳ್ಳಿಯಲ್ಲೂ ಹಲವಾರು ದೊಡ್ಡ ಹುಣಿಸೆಮರಗಳಿದ್ದು ಅವೆಲ್ಲವೂ ಆ ಹಳ್ಳಿಯನ್ನು ರಕ್ಷಿಸುತ್ತಿರುವ ದೈತ್ಯ ದೇವತೆಗಳ ಕುಟುಂಬದಂತೆ ಕಂಡವು. ಸಿಹಿಯಾದ ಬಸ್ತರಿನ ಹುಣಿಸೆ. ಹನ್ನೊಂದು ಗಂಟೆ ಹೊತ್ತಿಗೆ ಸೂರ್ಯ ನೆತ್ತಿಯ ಮೇಲಿದ್ದು ನಡೆಯುವುದು ಅಷ್ಟು ಮೋಜೆನಿಸುವುದಿಲ್ಲ. ಒಂದು ಹಳ್ಳಿಯಲ್ಲಿ ಊಟಕ್ಕೆ ನಿಂತೆವು. ಒಂದು ಮನೆಯಲ್ಲಿದ್ದ ಎಲ್ಲರೂ ಚಂದುಗೆ ಪರಿಚಿತರಾಗಿದ್ದರು. ಓರ್ವ ಸುಂದರ ಯುವತಿ ಆತನೊಂದಿಗೆ ಫ್ಲರ್ಟ್ ಮಾಡಿದಳು. ಪ್ರಾಯಶಃ ನಾನೂ ಅಲ್ಲಿದ್ದುದರಿಂದ ಅವನಿಗೆ ಸ್ವಲ್ಪ ನಾಚಿಕೆಯಾಯಿತು. ಊಟಕ್ಕೆ ಹಸಿ ಪರಂಗಿ, ಬೇಳೆ ಮತ್ತು ಕೆಂಪು ಅನ್ನ. ನೆಂಚಿಕೊಳ್ಳುವುದಕ್ಕೆ ಒಂದಿಷ್ಟು ಖಾರದ ಪುಡಿ. ಸೂರ್ಯ ತನ್ನ ಪ್ರಖರತೆಯನ್ನು ಕಳೆದುಕೊಳ್ಳುವ ತನಕ ನಾವು ಕಾದೆವು. ಅಲ್ಲೇ ಚಾವಡಿಯ ಮೇಲೆ ಸ್ವಲ್ಪ ಹೊತ್ತು ನಿದ್ರಿಸಿದೆವು. ಅಲ್ಲಿ ಒಂದು ರೀತಿಯ ಸರಳ ಸೌಂದರ್ಯವಿತ್ತು. ಎಲ್ಲವೂ ಅತ್ಯಗತ್ಯವಾದದ್ದು ಮತ್ತು ಅಚ್ಚುಕಟ್ಟು. ಯಾವುದೂ ಅಸ್ತವ್ಯಸ್ತವಾಗಿಲ್ಲ. ಚಿಕ್ಕದಾದ ಮಣ್ಣು ಗೋಡೆಯ ಮೇಲೆ ಒಂದು ಕಪ್ಪು ಕೋಳಿ ಆಡಂಬರದಿಂದ ನಡೆದಾಡುತ್ತಿತ್ತು, ಬಿದಿರಿನ ಜಾಲರಿಯು ಮನೆಯ ಮೇಲೆ ಹೊದಿಸಿದ್ದ ಹುಲ್ಲಿಗೆ ದೊಲಗವಾಗಿಯೂ, ಸಾಮಾನುಗಳನ್ನು ಇಡುವ ಪತ್ತಿಗೆಯಾಗಿಯೂ ಬಳಕೆಯಾಗಿತ್ತು, ಒಂದು ಕಸಬರಿಕೆ, ಎರಡು ಡ್ರಮ್‌ಗಳು, ಮಂಕರಿ, ಮುರಿದಿದ್ದ ಕೊಡೆ, ಜೊತೆಗೆ ಖಾಲಿಯಾಗಿದ್ದ ಚಪ್ಪಟೆ ಮಾಡಿ ಸಂಗ್ರಹಿಸಿಟ್ಟಿದ್ದ ಕಾರ್ಡ್‌ಬೋರ್ಡ್ ಡಬ್ಬಗಳ ರಾಶಿ ಕಾಣಿಸಿತು. ಅವುಗಳ ಮೇಲೆ ಪ್ರಕಟಗೊಂಡಿದ್ದ ಏನೋ ನನ್ನ ಗಮನ ಸೆಳೆಯಿತು. ನನ್ನ ಕನ್ನಡಕ ಹಾಕಿಕೊಂಡೆ. ಆ ಡಬ್ಬಗಳ ಮೇಲೆ ಹೀಗೆ ಪ್ರಿಂಟು ಮಾಡಲಾಗಿತ್ತು: **Ideal power 90 high energy emulsion explosive (class-2) SD CAT ZZ.**

ಸುಮಾರು ಎರಡು ಗಂಟೆ ಹೊತ್ತಿಗೆ ಮತ್ತೆ ನಡೆಯಲಾರಂಭಿಸಿದೆವು. ಮುಂದಿನ ಹಳ್ಳಿಯಲ್ಲಿ ನಾವು ದೀದಿ(ಸಹೋದರಿ, ಕಾಮ್ರೇಡ್)ಯನ್ನು ಭೇಟಿ ಆಗಲಿದ್ದು ನನ್ನ ಪಯಣದ ಮುಂದಿನ ಭಾಗದ ಬಗ್ಗೆ ಆಕೆಗೆ ಗೊತ್ತಿದೆಯಂತೆ. ಚಂದುಗೆ ಅದರ ಬಗ್ಗೆ ಗೊತ್ತಿಲ್ಲ. ಇಲ್ಲಿ ಮಾಹಿತಿ ಕೂಡ ಮಿತವಾಗಿ ಸಿಗುತ್ತದೆ. ಯಾರೊಬ್ಬರಿಗೂ ಎಲ್ಲವೂ ಗೊತ್ತಿರಕೂಡದು. ಆದರೆ ನಾವು ಹಳ್ಳಿಯನ್ನು ತಲುಪಿದಾಗ ದೀದಿ ಅಲ್ಲಿರಲಿಲ್ಲ. ಆಕೆಯ ಬಗ್ಗೆ ಯಾವ ಸುದ್ದಿಯೂ ಇರಲಿಲ್ಲ. ಪ್ರಥಮ ಬಾರಿಗೆ ಚಂದುನನ್ನು ಚಿಂತೆಯ ಚಿಕ್ಕ ಮೋಡವೊಂದು ಆವರಿಸಿತು. ಅದಕ್ಕಿಂತಲೂ ದೊಡ್ಡ ಮೋಡ ನನ್ನನ್ನು ಆವರಿಸಿತು. ಇಲ್ಲಿನ ಸಂಪರ್ಕ ವ್ಯವಸ್ಥೆ ಎಂತಹದ್ದೆಂದು ನನಗೆ ಗೊತ್ತಿಲ್ಲ. ಆದರೆ ಆ ವ್ಯವಸ್ಥೆಯಲ್ಲಿ ಎಲ್ಲೋ ಯಡವಟ್ಟಾಗಿದ್ದರೆ?

ಹಳ್ಳಿಯಿಂದ ಸ್ವಲ್ಪ ದೂರದಲ್ಲಿದ್ದ ನಿರ್ಜನ ಶಾಲಾ ಕಟ್ಟಡದ ಮುಂದೆ ನಾವಿದ್ದೆವು. ಯಾಕೆ ಎಲ್ಲಾ ಸರ್ಕಾರಿ ಗ್ರಾಮೀಣ ಶಾಲೆಗಳನ್ನು ಸಿಮೆಂಟಿನ ಕೋಟೆಯಂತೆ ನಿರ್ಮಿಸುತ್ತಾರೆ? ಅವುಗಳಿಗೇಕೆ ಕಬ್ಬಿಣದ ಕಿಟಕಿಗಳು ಮತ್ತು ಬಾಗಿಲುಗಳು? ಹಳ್ಳಿ ಮನೆಗಳಂತೆ ಮಣ್ಣು ಮತ್ತು ಹುಲ್ಲಿನ ಚಾವಣಿಗಳಿಂದ ಅವುಗಳನ್ನೇಕೆ ಕಟ್ಟುವುದಿಲ್ಲ? ಯಾಕೆಂದರೆ ಈ ಶಾಲಾ ಕಟ್ಟಡಗಳು ಸೈನಿಕರಿಗೆ ಮತ್ತು ಪೊಲೀಸರಿಗೆ ಬಂಕರ್‌ಗಳಾಗಿಯೂ ಬಳಕೆಯಾಗುತ್ತವೆ. "ಅಬೂಜ್‌ಮಾಡ್‌ನ ಹಳ್ಳಿಗಳಲ್ಲಿ ಶಾಲೆಗಳು ಹೀಗಿವೆ...." ಎಂದು ಚಂದು ಒಂದು ಕಡ್ಡಿ ಹಿಡಿದು ಮಣ್ಣಿನ ಮೇಲೆ ಚಿತ್ರವೊಂದನ್ನು ಬಿಡಿಸಿದ. ಎಂಟು ಭುಜಗಳನ್ನು ಹೊಂದಿರುವ, ಒಂದಕ್ಕೊಂದು ಜೇನುಗೂಡಿನಂತೆ ಹೊಂದಿಕೊಂಡಿರುವ ಮೂರು ಕೊಠಡಿಗಳ ಚಿತ್ರ. "ಇಂಥ ಕಟ್ಟಡದಿಂದ ಅವರು ಎಲ್ಲಾ ದಿಕ್ಕುಗಳತ್ತ ಗುಂಡುಹಾರಿಸಬಹುದು" ಎನ್ನುತ್ತಾ ಆ ಕೊಠಡಿಗಳಿಂದ ವಿವಿಧ ದಿಕ್ಕುಗಳೆಡೆ ಬಾಣಗಳ ಚಿತ್ರವನ್ನು ಬಿಡಿಸಿದ. ಅದೊಂದು ರೀತಿಯಲ್ಲಿ ಕ್ರಿಕೆಟ್‌ನಲ್ಲಿ ಬ್ಯಾಟ್ಸ್‌ಮನ್ ಯಾವಯಾವ ದಿಕ್ಕಿನಲ್ಲಿ ಬಾರಿಸಿದ ಎಂದು ತೋರಿಸುವ ಚಕ್ರ ಚಿತ್ರದಂತಿತ್ತು. "ಯಾವ ಶಾಲೆಯಲ್ಲೂ ಶಿಕ್ಷಕರಿಲ್ಲ. ಅವರೆಲ್ಲ ಓಡಿ ಹೋಗಿದ್ದಾರೆ" ಎಂದ ಚಂದು. "ಅಥವಾ ನೀವು ಅವರನ್ನ ಓಡಿಸಿದ್ದೀರಾ?" "ಇಲ್ಲ ನಾವು ಪೊಲೀಸರನ್ನು ಮಾತ್ರ ಓಡಿಸುತ್ತೇವೆ. ಶಿಕ್ಷಕರು ಈ ಕಾಡಿಗೆ ಯಾಕೆ ಬಂದು ಪಾಠ ಹೇಳಿಕೊಡುತ್ತಾರೆ? ಹೇಗಿದ್ದರೂ ಅವರ ಮನೆಗಳಿಗೆ ಸಂಬಳವನ್ನು ಕಳುಹಿಸುತ್ತಾರಲ್ಲಾ?"

ಒಳ್ಳೆಯ ಪಾಯಿಂಟ್.

ಇದೊಂದು 'ಹೊಸ ಯುಗ' ಎಂದು ಚಂದು ಹೇಳಿದ. ಯಾಕೆಂದರೆ ಪಕ್ಷ ಇಲ್ಲಿಗೆ ಬಂದದ್ದು ಇತ್ತೀಚೆಗೆ.

ಹುಡುಗರು ಮತ್ತು ಹುಡುಗಿಯರಿರುವ ಸುಮಾರು 20 ಯುವಕರು ನಾವಿದ್ದಲ್ಲಿಗೆ ಬಂದರು. ಅವರೆಲ್ಲ ಇನ್ನೂ ಹದಿಹರೆಯದವರು. ಇವರದ್ದು ಹಳ್ಳಿಮಟ್ಟದ ಪ್ರಜಾ ಮಿಲೀಷಿಯಾ ಮಾವೋವಾದಿಗಳ ಸೈನ್ಯದ ಶ್ರೇಣಿಯಲ್ಲಿ ಕೆಳಹಂತದ್ದು. ಇವರಂತಹ ಜನರನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಅವರಲ್ಲಿ ಕೆಲವರು ಸೀರೆ ಮತ್ತು ಲುಂಗಿ ತೊಟ್ಟಿದ್ದರೆ ಇನ್ನೂ ಕೆಲವರು ಮಾಸಿಹೋಗಿ ರುವ ಹಸಿರು ಸಮವಸ್ತ್ರದಲ್ಲಿದ್ದಾರೆ. ಹುಡುಗರೆಲ್ಲ ಓಲೆ ಹಾಕಿಕೊಂಡಿ ದ್ದಾರೆ, ತಲೆ ಮೇಲೆ ಬಟ್ಟೆ ಕಟ್ಟಿಕೊಂಡಿದ್ದಾರೆ. ಎಲ್ಲರ ಕೈಯಲ್ಲೂ ನಾಡ ಬಂದೂಕುಗಳಿವೆ. ಅದರೊಂದಿಗೆ ಕೆಲವರ ಕೈಗಳಲ್ಲಿ ಕತ್ತಿ ಕೊಡಲಿ, ಬಿಲ್ಲುಬಾಣಗಳೂ ಇವೆ. ಒಬ್ಬ ಯುವಕನ ಬಳಿ ಮೂರಡಿ ಉದ್ದನೆ ಪೈಪ್‌ನಿಂದ ಮಾಡಲಾದ ಕಚ್ಚಾ ಫಿರಂಗಿ ಇದೆ. ಅದರೊಳಗೆ ಸಿಡಿಮದ್ದು ಮತ್ತು ಲೋಹದ ಚೂರುಗಳನ್ನು ತುಂಬಲಾಗಿದ್ದು ಯಾವ ಕ್ಷಣದಲ್ಲಿ ಬೇಕಾದರೂ ಅದನ್ನು ಸ್ಫೋಟಿಸಬಹುದು. ಅದು ದೊಡ್ಡ ಸದ್ದು ಮಾಡುತ್ತಾದರೂ ಅದನ್ನು ಒಮ್ಮೆ ಮಾತ್ರ ಬಳಸಬಹುದು. ಆದರೂ ಪೊಲೀಸರನ್ನು ಬೆದರಿಸಲು ಅದು ಸೂಕ್ತ ಎಂದು ಹೇಳಿ ಅವರೆಲ್ಲ ಮುಸಿಮುಸಿ ನಕ್ಕರು. ಯುದ್ಧ ಅವರ ಮನಸ್ಸುಗಳಲ್ಲಿ ಪ್ರಮುಖವಾಗಿದೆ ಅನಿಸಲಿಲ್ಲ. ಪ್ರಾಯಶಃ ಅವರಿರುವ ಪ್ರದೇಶ ಸಲ್ವಾ ಜುಡಂನ ವ್ಯಾಪ್ತಿಯಿಂದ ದೂರವಿರುವುದೇ ಅದಕ್ಕೆ ಕಾರಣವಿರಬಹುದು. ಆಡುಗಳು ಹೊಲಗಳಿಗೆ ನುಗ್ಗದಂತೆ ತಡೆಯಲು ಹಲವು ಹಳ್ಳಿಮನೆಗಳ ಸುತ್ತ ಬೇಲಿ ಕಟ್ಟುವ ಕೆಲಸವನ್ನು ಮುಗಿಸಿಕೊಂಡು ಬಂದಿದ್ದರವರು. ಅವರೆಲ್ಲ ತಮಾಷೆ ಮತ್ತು ಕುತೂಹಲದಿಂದ ತುಂಬಿದ್ದರು. ಯುವತಿಯರು ಆತ್ಮವಿಶ್ವಾಸದಿಂದ ತುಂಬಿದ್ದು ಯುವಕರೊಂದಿಗೆ ಸಹಜವಾಗಿಯೇ ವರ್ತಿಸುತ್ತಿದ್ದರು. ಇಂತಹದ್ದನ್ನು ಗ್ರಹಿಸುವ ಸೆನ್ಸರ್ ನನಗಿದ್ದು, ಅವರ ಬಗ್ಗೆ ನನ್ನಲ್ಲಿ ಮೆಚ್ಚುಗೆ ಮೂಡಿತು. ಇವರ ಕೆಲಸ ಸುತ್ತಮುತ್ತಲಿನ ನಾಲ್ಕೈದು ಹಳ್ಳಿಗಳನ್ನು ಗಸ್ತು ಹೊಡೆದು ಅವುಗಳಿಗೆ ರಕ್ಷಣೆ ನೀಡುವುದು, ಹೊಲಗಳಲ್ಲಿ ನೆರವು ನೀಡುವುದು, ಬಾವಿಗಳನ್ನು ಸ್ವಚ್ಛಗೊಳಿಸುವುದು, ಮನೆಗಳನ್ನು ರಿಪೇರಿ ಮಾಡುವುದು ಮತ್ತು ಇತರೆ ಕೆಲಸಗಳನ್ನು ನಿರ್ವಹಿಸುವುದು ಎಂದು ಚಂದು ಹೇಳಿದ.

ದೀದಿ ಇನ್ನೂ ಬಂದಿಲ್ಲ. ಏನು ಮಾಡುವುದು? ಏನೂ ಇಲ್ಲ ಕಾಯಬೇಕಷ್ಟೇ. ತರಕಾರಿ ಹೆಚ್ಚುವುದಕ್ಕೆ ನೆರವು ನೀಡಬೇಕಷ್ಟೇ.

ಊಟವಾದ ಮೇಲೆ ಹೆಚ್ಚು ಮಾತನಾಡದೆ ಎಲ್ಲರೂ ಸಾಲಾಗಿ ನಿಂತರು. ಮತ್ತೆ ನಡೆಯಲಾರಂಭಿಸಿದೆವು. ಅಕ್ಕಿ, ತರಕಾರಿ, ಪಾತ್ರೆ ಪಗಡೆ ಎಲ್ಲವೂ ನಮ್ಮೊಂದಿಗೆ ಸಾಗುತ್ತವೆ. ಶಾಲಾ ಕಾಂಪೌಂಡನ್ನು ತೊರೆದು ಒಬ್ಬರ ಹಿಂದೆ ಒಬ್ಬರಂತೆ ಸಾಲಾಗಿ ಕಾಡಿಗೆ ಹೊರಟೆವು. ಅರ್ಧ ಗಂಟೆಯಲ್ಲಿ ಕಾಡಿನ ನಡುವೆ ಖಾಲಿ ಇದ್ದ ಜಾಗವನ್ನು ತಲುಪಿದೆವು. ಅಲ್ಲಿ ನಾವೆಲ್ಲ ನಿದ್ರಿಸಬೇಕಿತ್ತು. ಎಲ್ಲೆಡೆ ನಿಶಬ್ಧ. ಕೆಲವೇ ನಿಮಿಷಗಳಲ್ಲಿ ಎಲ್ಲರೂ ತಮ್ಮ ನೀಲಿ ಬಣ್ಣದ ಪ್ಲಾಸ್ಟಿಕ್ ಶಿ ಗಳನ್ನು (ಇದನ್ನು 'ಜ್ಹಿಲ್ಲಿ' ಎಂದು ಕರೆಯುತ್ತಾರೆ. ಇದಿಲ್ಲದಿದ್ದರೆ ಕ್ರಾಂತಿ ಆಗುವುದಿಲ್ಲವೇನೋ ಎಂಬಂತೆ ಇದು ಎಲ್ಲೆಲ್ಲೂ ಕಾಣಸಿಗುತ್ತದೆ) ತೆರೆ ಚಂದು ಮತ್ತು ಮಂಗ್ಟು ಒಂದನ್ನು ಹಾಸಿಕೊಂಡು ನನಗೆ ಇನ್ನೊಂದ ಹಾಸಿದರು. ನನಗಾಗಿ ಅವರು ಬೂದುಬಣ್ಣದ ಕಲ್ಲಿನ ಪಕ್ಕದಲ್ಲಿದ್ದ ಅತ್ಯು ಜಾಗವನ್ನು ಆಯ್ಕೆ ಮಾಡಿದರು. ದೀದಿಗೆ ಸಂದೇಶ ಕಳುಹಿಸಿರುವುದಾಗಿಯ ಅದು ಸಿಕ್ಕರೆ ನಾಳೆ ಬೆಳಗ್ಗೆಯೇ ಆಕೆ ಬರುವುದಾಗಿಯೂ ಚಂದು ಹೇಳಿದ ಸಂದೇಶ ಆಕೆಗೆ ಸಿಕ್ಕರೆ ಮಾತ್ರ. ಬಹಳ ಕಾಲದ ನಂತರ ನಾನು ಮಲ ಅತಿ ಸುಂದರ ಕೊಠಡಿ ಅದಾಗಿತ್ತು. ಸಾವಿರ ನಕ್ಷತ್ರಗಳಿರುವ ಪ ಐಷಾರಾಮಿ ಖಾಸಗಿ ಕೊಠಡಿ. ವಿಲಕ್ಷಣ ಅಸ್ತ್ರಗಳನ್ನು ಹೊಂದಿರ ವಿಚಿತ್ರ ಮತ್ತು ಸುಂದರ ಮಕ್ಕಳು ನನ್ನ ಸುತ್ತ ಇದ್ದಾರೆ. ಅವರೆಲ್ಲ ಖಂಡಿತವಾಗಿಯೂ ಮಾವೋವಾದಿಗಳು. ಅವರೆ ಲ್ಲರೂ ಸ ಹೋಗುತ್ತಾರೆಯೇ? ಕಾಡಿನಲ್ಲಿ ಯುದ್ಧ ಮಾಡುವ ಬಗ್ಗೆ ತರಬೇತಿ ನೀಡ ಕಾಲೇಜು ಇವರ ದಮನಕ್ಕಾಗಿಯೇ? ಹೆಲಿಕಾಪ್ಟರ್ ಗನ್ ಶಿಪ್‌ಗಳು, ಥರ್ಮ ಇಮೇಜಿಂಗ್ ಯಂತ್ರಗಳು, ಲೇಸರ್‌ಗಳೆಲ್ಲ ಏತಕ್ಕೆ?

ಅವರೆಲ್ಲ ಯಾಕೆ ಸಾಯಬೇಕು? ಯಾತಕ್ಕಾಗಿ ಸಾಯಬೇ ಇದೆಲ್ಲವನ್ನು ಒಂದು ಗಣಿಯಾಗಿ ಪರಿವರ್ತಿಸಲೇ? ಒಡಿಶಾದ ಕಿಯೊ ಜ್ಹಾರ್‌ನಲ್ಲಿನ ಕಬ್ಬಿಣ ಅದಿರು ಗಣಿಗಳಿಗೆ ಭೇಟಿ ನೀಡಿದ್ದು ನೆನಪಾಯಿ ಅಲ್ಲೂ ಹಿಂದೊಮ್ಮೆ ಇಂತಹದ್ದೇ ಕಾಡಿತ್ತು. ಆ ಕಾಡಿನಲ್ಲೂ ಇಂತಹ ಮಕ್ಕಳಿದ್ದರು. ಆದರೀಗ ಅಲ್ಲಿನ ಭೂಮಿ ತೆರೆದ ಕೆಂಪು ವ್ರಣದ ಕಾಣಿಸುತ್ತದೆ. ಕೆಂಪು ಧೂಳು ನಿಮ್ಮ ಮೂಗು ಮತ್ತು ಶ್ವಾಸಕೋಶಗಳ ತುಂಬುತ್ತದೆ. ಅಲ್ಲಿನ ನೀರು ಕೆಂಪು, ಗಾಳಿ ಕೆಂಪು, ಜನ ಕೆಂಪು. ಅ ಶ್ವಾಸಕೋಶಗಳು ಮತ್ತು ಕೂದಲೂ ಕೆಂಪು. ಹಗಲೂರಾತ್ರಿ ಅ ಹಳ್ಳಿಗಳನ್ನು ಸಾವಿರಾರು ಲಾರಿಗಳು ಒಂದರ ಹಿಂದೊಂದರಂತೆ ಪ್ರವೇ ತ್ತವೆ. ಅಲ್ಲಿಂದ ಅದಿರನ್ನು ತೆಗೆದುಕೊಂಡು ಪರದೀಪ್ ಬಂದರಿಗೆ ಸಾಗಿಸು ಅದು ಅಲ್ಲಿಂದ ಚೀನಾಗೆ ಹೋಗುತ್ತದೆ. ಚೀನಾದಲ್ಲಿ ಆ ಅದಿರು ಕ ಮತ್ತು ಹೊಗೆಯಾಗಿ ಪರಿವರ್ತನೆಗೊಳ್ಳುತ್ತದೆ ಮತ್ತು ರಾತ್ರೋ ಹೊಸ ನಗರಗಳನ್ನು ಸೃಷ್ಟಿಸುತ್ತದೆ. ಅದೆಲ್ಲ 'ಅಭಿವೃದ್ಧಿ ಏರಿಕೆ'ಯ ಅರ್ಥಶಾಸ್ತ್ರಜ್ಞರನ್ನು ಪುಲಕಗೊಳಿಸುತ್ತದೆ. ಯುದ್ಧದ ಅಸ್ತ್ರಗಳಾಗಿಯ ಅದಿರು ಪರಿವರ್ತನೆಗೊಳ್ಳುತ್ತದೆ.

ಸರದಿ ಮೇಲೆ ಒಂದೂವರೆ ಗಂಟೆ ಕಾವಲು ನಿಲ್ಲುವವರ ಹೊರ ಎಲ್ಲರೂ ನಿದ್ರಿಸುತ್ತಿದ್ದಾರೆ. ಕೊನೆಗೂ ನಾನು ನಕ್ಷತ್ರಗಳನ್ನು ನೋಡಬ ನಾನು ಮೀನಾಚಲ ನದಿಯ ದಡದ ಮೇಲೆ ಬೆಳೆಯುತ್ತಿದ್ದ ಬಾಲಕಿಯ ದ್ದಾಗ ಸಂಧ್ಯಾಕಾಲ ಪ್ರಾರಂಭವಾಗುತ್ತಿದ್ದ ಚಿಮ್ಮಂಡೆಯ ಸದ್ದನ್ನು ನಕ್ಷತ್ರ ಹೊಳೆಯುವ ಮುನ್ನ ಮಾಡಿಕೊಳ್ಳುತ್ತಿದ್ದ ತಯಾರಿ ಎಂದೇ ಭಾವಿ ನಾನು ಇಲ್ಲಿರುವುದನ್ನು ಎಷ್ಟು ಇಷ್ಟಪಡುತ್ತಿದ್ದೇನೆ ಎಂದೆನಿಸಿ ನ ಅಚ್ಚರಿಯಾಯಿತು. ಇಲ್ಲಲ್ಲದೆ ಜಗತ್ತಿನ ಬೇರೆ ಇನ್ನೆಲ್ಲೂ ಇರಲು ನ ಇಷ್ಟವಾಗಲಿಲ್ಲ. ಈ ರಾತ್ರಿ ನಾನು ಯಾರಾಗಿರಬಹುದು? ನಕ್ಷತ್ರ ಇರುವ ಕಾಮ್ರೇಡ್ ರಾಹೆಲ್? ನಾಳೆ ದೀದಿ ಬರಬಹುದು. ಮಧ್ಯಾ ಹೊತ್ತಿಗೆ ಅವರೆಲ್ಲ ಬಂದರು. ದೂರದಿಂದಲೇ ಅವರು ನನಗೆ ಕಾಣಿಸಿ ಹಸಿರು ಸಮವಸ್ತ್ರ ಧರಿಸಿದ್ದ ಸುಮಾರು ಹದಿನೈದು ಜನ ನಮ್ಮತ್ತ ಓಡಿಬರುತ್ತಿ ಅವರೆಲ್ಲ ಓಡುತ್ತಿದ್ದ ರೀತಿಯಿಂದಲೇ ಅವರೆಲ್ಲ ಅಪಾರ ಅನುಭವ ಎಂದು ಹೇಳಬಹುದಿತ್ತು. ಇವರೇ ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆ (ಪಿಎಲ್‌ಜಿಎ). ಇವರ ವಿರುದ್ಧವೇ ಆ ಥರ್ಮಲ್ ಇಮೇಜಿಂಗ್ ಯಂತ್ರ ಮತ್ತು ಲೇಸರ್ ರೈಫಲ್‌ಗಳು. ಇವರ ವಿರುದ್ಧವೇ ಜಂಗಲ್ ಯುದ್ಧ ತರಬೇತಿ ನೀಡುವ ಶಾಲೆ.

ಅವರ ಕೈಗಳಲ್ಲಿ ಆಧುನಿಕ **INSAS, SLR** ಗನ್‌ಗಳಿವೆ. ಕೈಗಳಲ್ಲಿ ಎಕೆ-47 ಗಳಿವೆ. ಈ ತಂಡದ ನಾಯಕ ಕಾಮ್ರೇಡ್ ಮಾಧ ಆಂಧ್ರ ಪ್ರದೇಶದ ವಾರಂಗಲ್ ಜಿಲ್ಲೆಯವರಾದ ಮಾಧವ್ ಒಂಭತ್ತು ವರ್ಷದ ಬಾಲಕನಾಗಿದ್ದಾಗಿನಿಂದಲೇ ಪಕ್ಷದೊಂದಿಗಿದ್ದಾರೆ. ಅ ತುಂಬಾ ಬೇಜಾರಾಗಿದ್ದು ಕ್ಷಮೆ ಕೇಳಿದರು. ಸುದ್ದಿ ಸಂವಹನ ಪ್ರಕ್ರಿಯೇ ದೊಡ್ಡ ಸಮಸ್ಯೆ ಆಗಿತ್ತೆಂದೂ, ಅದು ಸಾಧಾರಣವಾಗಿ ಆಗುವುದಿಲ್ಲವೆಂ ಪದೇಪದೇ ನನಗೆ ಹೇಳಿದರು. ನಾನು ಮೊದಲ ದಿನವೇ ವ ಕ್ಯಾಂಪಿಗೆ ಆಗಮಿಸಬೇಕಿತ್ತಂತೆ. ಆದರೆ ಅರಣ್ಯದಲ್ಲಿನ ಸುದ್ದಿ ಸಂವಹ ಸರಣಿಯಲ್ಲಿ ಯಾರೋ ಒಬ್ಬರು ಯಡವಟ್ಟು ಮಾಡಿದ್ದರು. ಮೋ ಸೈಕಲ್‌ನಲ್ಲಿ ನಮ್ಮನ್ನು ಇಳಿಸಿದ್ದವರು ಬೇರೆಲ್ಲಿಗೋ ನಮ್ಮನ್ನು ತಲುಪಿಸಬೇ "ನಿಮ್ಮನ್ನ ಕಾಯಿಸಿದೆವು. ಇಷ್ಟೊಂದು ನಡೆಯುವಂತೆ ಮಾಡಿ ನೀವು ಇಲ್ಲಿದ್ದೀರಿ ಎಂದು ಗೊತ್ತಾದಕೂಡಲೇ ಓಡೋಡಿಬಂದ ಎಂದು ಅವರು ಹೇಳಿದರು. ಪರವಾಗಿಲ್ಲ, ನಾನು ಕಾಯುವ ನಡೆಯುವುದಕ್ಕೆ, ಆಲಿಸುವುದಕ್ಕೆ ಸಿದ್ಧಳಾಗಿ ಬಂದಿದ್ದೆ ಎಂದು ಹೇ ಮುಖ್ಯ ಕ್ಯಾಂಪಿನಲ್ಲಿ ಜನ ಚಿಂತಾಕ್ರಾಂತರಾಗಿದ್ದಾರೆ, ನಮಗಾಗಿ ಕಾಯುತ್ತಿ ಎಂಬ ಕಾರಣಕ್ಕೆ ನಾವು ಕೂಡಲೇ ಇಲ್ಲಿಂದ ಹೊರಡಬೇಕು ಅಂ ಮುಖ್ಯ ಕ್ಯಾಂಪ್‌ಗೆ ಹಲವು ಗಂಟೆಗಳ ಕಾಲ ನಡೆಯಬೇಕಿತ್ತು. ಆ ನಾವು ಆಗಮಿಸುವ ಹೊತ್ತಿಗೆ ಕತ್ತಲಾಗು ತ್ತಿತ್ತು. ಹಲವಾರು ಹಂ ಪಹರೆ ಮತ್ತು ಸಮಾನಕೇಂದ್ರಿತ ಗಸ್ತು ತಂಡಗಳಿದ್ದವು. ಸುಮ ನೂರು ಜನ ಕಾಮ್ರೇಡ್‌ಗಳು ಎರಡು ಸಾಲುಗಳಲ್ಲಿ ನಿಂತಿದ್ದರು. ಎಲ್ಲ ಒಂದು ಅಸ್ತ್ರ ಜೊತೆಗೆ ಮುಗುಳ್ನಗೆ. ಅವರು ಹಾಡಲಾರಂಭಿಸಿ "ಲಾಲ್‌ಲಾಲ್ ಸಲಾಮ್..... ಹೊಸದಾಗಿ ಬಂದಿರುವ ಕಾಮ್ರೇಡ್ ಲಾಲ್ ಸಲಾಮ್...." ಯಾವುದೋ ನದಿ, ಯಾವುದೋ ಕ ಪುಷ್ಪದ ಬಗ್ಗೆ ಒಂದು ಜನಪದ ಹಾಡನ್ನು ಹಾಡುವಷ್ಟೇ ಸುಮಧುರ ಅದನ್ನು ಹಾಡಿದರು. ಹಾಡಿನೊಂದಿಗೆ, ಶುಭ ಕಾಮನೆಗಳು, ಹಸ್ತಲಾ ಮತ್ತು ಬಿಗಿದ ಮುಷ್ಟಿ. ಎಲ್ಲರೂ ಎಲ್ಲರಿಗೂ ಲಾಲ್ ಸಲಾ ಮಾಲ್‌ಲ್‌ಸಲಾ, ಮಲಾಲ್‌ಸಲಾಮ್ ಎಂದು ಮರ್ಮರಿಸಿದರು. ನ ಮೇಲೆ ಹಾಕಿದ್ದ ಸುಮಾರು ಹದಿನೈದು ಚದುರಡಿ ಇದ್ದ ನೀಲಿ ಬ ಪ್ಲಾಸ್ಟಿಕ್ ಶೀಟ್ ಹೊರತಾಗಿ ಇಲ್ಲೊಂದು 'ಕ್ಯಾಂಪ್' ಇರುವುದರ ಬೇರೆ ಯಾವ ಸೂಚನೆಯೂ ಇರಲಿಲ್ಲ. ಚಾವಣಿಗೆ ಇನ್ನೊಂದು ಪ್ಲಾಸ್ಟಿಕ್ ಶೀಟನ್ನು ಹೊದಿಸಲಾಗಿತ್ತು. ಅವತ್ತಿನ ರಾತ್ರಿಗೆ ಅದೇ ಕೊಠಡಿ. ನಾನು ಹಲವು ದಿನ ನಡೆದಿದ್ದಕ್ಕೆ ಇದು ನನಗೆ ನೀಡಲಾಗ ಪ್ರಶಸ್ತಿಯೋ ಅಥವಾ ಬರಲಿರುವ ದಿನಗಳಲ್ಲಿನ ಅನಾವೃಷ್ಟಿಗೆ ಅತಿ ಸವಲತ್ತೊ? ಎರಡೂ ಇದ್ದಿರಬಹುದು. ಆದರೆ ಅದಾದನಂತರ ಇಡೀ ಪ್ರಯಾಣದಲ್ಲಿ ನನ್ನ ತಲೆ ಮೇಲೊಂದು 'ಸೂರು' ಅಂತ ಇ ಅದೇ ಕಡೆ ದಿನ.

ಅರುಂಧತಿ ರಾಯ್ ಅವರ ಈ ಲೇಖನದ ಅನುವಾದವನ್ನು ಇದೇ ಗುರುವಾರದಿಂದ 'ಪ್ರಜಾವಾಣಿ' ಪತ್ರಿಕೆ ಪ್ರಕಟಿಸುತ್ತಿದೆ. ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ತೆರೆದಿಡುವ ಈ ಲೇಖನ ಹೆಚ್ಚೆಚ್ಚು ಜನರನ್ನು ತಲುಪಬೇಕಿದೆ. ಅಷ್ಟೇ ಅಲ್ಲ, ಈ ಲೇಖನ ಎತ್ತಿರುವ ವಿಷಯಗಳು ಜನರಿಗೆ ಅರ್ಥವಾಗಿ ಅವುಗಳು ಚರ್ಚೆ ಆಗಬೇಕಿದೆ. ಆ ದೃಷ್ಟಿಯಿಂದ 'ಪ್ರಜಾವಾಣಿ' ಇದನ್ನು ಪ್ರಕಟಿಸಿರುವುದು ಸಂತೋಷದ ವಿಚಾರ. ಆದರೆ 'ಪ್ರಜಾವಾಣಿ' ಇದನ್ನು ಪ್ರತಿದಿನ ಪ್ರಕಟಿಸುತ್ತಿರುವುದರಿಂದ ಈ ವಾರ ಪತ್ರಿಕೆಯಲ್ಲಿ ಇದನ್ನು ಮುಂದುವರೆಸುವ ಅಗತ್ಯ ಕಂಡುಬರುತ್ತಿಲ್ಲ. ಆದ್ದರಿಂದ, ಇನ್ನು ಹಲವೇ ದಿನಗಳಲ್ಲಿ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸತ್ತೇವೆ

• ಗೌರಿ

ಯಾಕೋ ಸಿನಿಮಾ ಸಮಾರಂಭ ಸಂತಾಪ ಸಭೆ ಆಯ್ತಾ ಅವೆ

ಬೆಂಗಳೂರ ಮುನಿಸಿಪಾಲಿಟಿ ಚುನಾವಣೆ ಗಳೇ ಗೆದ್ದರಂತಲ್ಲಾ?" ಎಂದು ಸೀರ ಉಗ್ರಿಯ ಯಕಾಗ್ಗಿ ಕಾದ.

ರಿ ಗೆದ್ರು, ಏನು ಮಾಡನೀಗ" ಎಂದ ಉಗ್ರಿ ಯಿಂದ.

ಲ್ಲಾ ಇವುರ್ಯಲ್ಲ ನಾವೇ ಬತ್ತಿವಿ ಅಂತಿದ್ರಲ್ಲಾ

ಕಟ್ಟೆಪುರಾಣ

ಯ ಲು ಸೀ ಮೆ

ಬಿ. ಚಂದ್ರೇಗೌಡ

ಸಂದೆ ಕಂದ್ಯ."

ದೇನೂ ನಿಜ. ಕಾಂಗ್ರೆಸ್ಸಿನೋರು ನಾವು ಜಾಸ್ತಿ ತಿರುಗ ದಳ ಜೊತೆ ಮಿಲಕತ್ತಾಗಿ ಮೆಯ್ಯನ ದ್ರು. ಆದ್ರೆ ಬಿಜೆಪಿಗಳು ಅಮರಿಕಂಡ್ರಲ್ಲ ಹೇಳು."

ಮರಿಕಂಡ್ರು ಅಂದ್ರೆ ಅಂಗೆ ಯಲಕ್ಷನ್ ಮಾಡ್ಯವುರೆ ಎಂದಳು ಜುಮ್ಮಿ.

ದೇನೊ ನಿಜ. ಅವುರು ಬಿಚ್ಚಿರೊ ದುಡ್ಡ ಕಾಂಗ್ರೆಸ್ಸು ರು ಬಿಚ್ಚಲಿಲ್ಲ. ಆದ್ರು ಗೆಲ್ತಿವಿ ಅನ್ನೊ ಬರವಸೆನೆ ರಲಿಲವಂತೆ."

ದ್ಯಾಕಿರಲಿಲ್ಲಾ?"

ಟು ಕಡಿಮೆ ಆಗಿತ್ತಲ್ಲ ಅದ್ಕೆ ಕಣೇ. ಕಡಿಮೆ ಾಗ ಕ್ಯಳ ಜಾತಿ ಓಟಾಕಿರತವಂತೆ. ಜಾಸ್ತಿಯಾದಾಗ ವರ್ಗ ಓಟಾಕಿರತವಂತೆ. ಆದ್ರೆ ಈಗಿನ ಲ್ಯಕ್ಕಾಚಾರ ಗಳಿಗೇ ಆಶ್ಚರ್ಯ."

ರಿಯಾಗಿ ಕರಂಟು ಕೊಡದೆಯಿದ್ರು ವುರಂತಲ್ಲಾ ಇದಕೇನೇಳ್ತಿ?" ಎಂದು ಸೀರ ಅಚ್ಚರಿಯ ಬಿಟ್ಟ.

ಜನಗಳ ಮರ್ಮನೇ ಗೊತ್ತಾಯ್ತಾಯಿಲ್ಲ" ಎಂದು ನಿಸ್ಸಹಾಯಕನಂತೆ ಮಾತನಾಡುವಾಗ ವಾಟಿಸ್ಸೆ ಕೊಂಡು,

ಬಿಬಿಎಂಪಿ ಬಗ್ಗೆ ಮ್ಮಾತಾಡ್ತಾಯಿದ್ದೀರಲ್ಲವಾ? ಏನಪ್ಪಾ ಬಿಜೆಪಿಗಳು ತಮ್ಮ ಪಾರ್ಟಿಗೆ ಪ್ರಾಮಾಣಿಕವಾಗಿ ಮಾಡಿದ್ರು ಅಷ್ಟೇ" ಎಂದ.

ನೇನೇನು ಬೆಂಗಳೂರಿಂದ ಬಂದೇನ್ನ?" ಎಂದಳು

ಲ್ಲ ಕಣಕ್ಕ, ಶಿವಮೊಗ್ಗಕ್ಕೋಗಿದ್ದೆ."

ಲ್ಲೇನು ಕೇವಿತ್ತು?"

"ಅಲ್ಲಿ ಫಿಲಮೋತ್ಸವ ಇತ್ತು. ನಮ್ಮ ಕೊಪರಿ ಮಂಜಣ್ಣ ಬತ್ತಿಯಾ ಅಂದ. ಅವುನ ಜೊತೆ ಹೋಗಿ ಬಂದೆ."

"ಕೊಪರಿ ಮಂಜಣ್ಣಾರ್ಲ?"

"ಇದೇನಕ್ಕ ಹಿಂಕೇಳ್ತಿ, ಹುಡಿಕ್ಯಂಡೋದ್ರೆ ನಿನಿಗೆ ಸಮಂದಿ ಆಗಬೇಕು ಅವುನು. ಇಲ್ಲೇ ತುರುವೇಕ್ಕರೆ ಕಡಿಯೋನು. ಬೆಂಗಳೂರಿಗೋಗಿ ಸಿನುಮ ಪ್ರೊಡ್ಯೂಸರ್ರಾಗಿ ಕೋಟ್ಯಾಂತ್ರುಪಾಯಿ ದುಡುದವುನೆ ಗೊತ್ತೇ?"

"ಯಾತ್ರಲ್ಲಿ ದುಡದವುನೇ?"

"ಸಿನುಮ ತಗದು ದುಡದವುನೆ ಕಣಕ್ಕಾ."

"ಅವುನಿಡಕ್ಯಂಡು ನೀನು ಸಿನುಮಾ ಸೇರಿವೆ."

"ಸೇರಬವುದಿತ್ತು ಕಣಕ್ಕ. ಏನು ಮಾಡ್ತಿಯೇಳು, ಕೊಪರಿ ಮಂಜಣ್ಣ ಸಿಕ್ಕಿದ್ದು ಲೇಟಾಗಿ. ಅವುನು ಸಿಗೋವತ್ತಿಗೆ ನನಿಗೆ ಸಿನುಮಾದಲ್ಲಿ ಆಕ್ಟಿಂಗ್ ಮಾಡಬೇಕು ಅನ್ನೊ ಆಸೆನೆ ಬತ್ತೋಗಿತ್ತು. ಈಗ ಯಾರ್ಯಾರೋ ಕರಿತರೆ, ನನಿಗೆ ಮನಸಿಲ್ಲ" ಎಂದು ವಾಟಿಸ್ಸೆ ಹೇಳುವಾಗ,

"ಒಂದೊಂದು ಸತಿ ಅಂಗಾಯ್ತದೆ" ಎಂದ ಕಾಳಮಾವ.

"ನಿನಿಗ್ಯಾವ ಚಾನ್ಸು ಸಿಕ್ಕಿತ್ತು ದ್ವಡಪ್ಪ?"

"ಅದೇ ಆಗ ಲಾಲ್‌ಬಾದ್ದೂರ್ ಸಾಸ್ತ್ರಿ ಪ್ರಧಾನಿಯಾಗಿದ್ನಲ್ಲ ಆಗ. ಇವುರ್ಯಲ್ಲ ನಾಟಗ ಕಲ್ತು ನನಿಗೂ ಪಾರ್ಟು ಮಾಡು ಅಂದ್ರು. ನನಿಗೆ ಮಾಡಕ್ಕೆ ಮನಸ್ಸಿದ್ದಾಗ ಯಾರೂ ಕೇಳ್ಳಿಲ್ಲ, ಆಸೆ ಮುಗದ ಮ್ಯಾಲೆ ಧರಮರಾಯನ್ನ ಮಾಡ್ತಿಯಾ ಅಂತ ಬಂದಿದ್ರು. ನಾನು ಬ್ಯಾಡ ಅಂದೆ. ಆಗ ತಮ್ಮಯ್ಯಣ್ಣ ಆ ಪಾರ್ಟು ಮಾಡಿದ" ಎಂದು ಕಾಳಮಾವ ನಾಲ್ಕು ದಶಕದ ಹಿಂದಿನ ಉದಾಹರಣೆ ಕೊಟ್ಟ.

"ವಳ್ಳೇದು ಮಾಡಿದೆ ಬುಡು. ನಿನಿಗೆ ಧರಮರಾಯನ ಪಾರ್ಟು ಒಪ್ಪುತಿರಲಿಲ್ಲ."

"ಒಪ್ಪೊವೊತ್ತಿಗೆ ಕಂದ್ಯ ಬಂದು ಕೇಳಿದ್ರು. ಸುಮ್ಮಸುಮ್ಮನೆ ಕೇಳ್ತಾರೆ?"

"ಅದಿರ್ಲಿ, ಶಿವಮೊಗ್ಗದಲ್ಲಿ ಏನೇನು ಮಾಡಿದೆ ಹೇಳ್ಳ" ಎಂದಳು ಜುಮ್ಮಿ.

"ಶಿವಮೊಗ್ಗದಲ್ಲಿ ಏನೇನು ನೋಡಿದೆ ಅಂತ ಕೇಳಕ್ಕ. ಮೊದಲನೆದಾಗಿ ಪಾರ್ವತಮ್ಮ, ಭಾರತಿ, ಜಯಮಾಲ, ಮೂರು ಜನನೂ ಜೊತೆಲಿ ಕುಂತಿದ್ದ ನೋಡಿದೆ ಕಣಕ್ಕ! ವಳ್ಳೆ ಪಾರ್ವತಿ, ಲಕ್ಷ್ಮಿ, ಸರಸ್ವತಿ ನೋಡಿದಂಗಾಯ್ತು. ಆದರಲ್ಲೂ ಜಯಮಾಲ ಎಂಎ ಮಾಡಿ ಪಿಹೆಚ್‌ಡಿ ಮಾಡಿದ್ದರಿಂದ ಥೇಟ್ ಸರಸ್ವತಿ ನೋಡಿದಂಗಾಯ್ತು. ಪಾರ್ವತಮ್ಮನವರಂತೂ ಪರ್ವತಮ್ಮನೇಯಾ? ಭಾರತೀಯಂತೂ ಥೇಟ್ ಲಕ್ಷ್ಮಿ. ಅದರಲ್ಲೂ ಪಾರ್ವತಮ್ಮ, ಭಾರತಿನ ನಾವುಗಳು ಒಂದು ಮಾಡಿದ್ದು ನೋಡಿ ನನಿಗೆ ವಂಡುಪುಲ್ ಅನ್ನಸ್ತು ಕಣಕ್ಕ."

"ಅದ್ಯಾವುದ್ನ ಪಿಚಿಡಿ?"

"ಅದರ ಮ್ಯಾಟ್ರು ನಿನಿಗ್ಯಾಕ್ ಬುಡು. ಅಂತೂ ನಮ್ಮ ಫಿಲಮ್ಮೋತ್ಸವ ಯಾಕೋ ಸಂತಾಪ ಸಭೆತರ ಆಯ್ತಾ ಅವೆ. ಯಾರೂ ಸ್ಟಾರ್‌ಗಳೇ ಇಲ್ಲ ಈಗ."

"ಅದ್ಯಾಕಂಗಂತಿಯಾ? ಪುನೀತ್, ಸುದೀಪ್, ದರ್ಶನ್ ಇವುರ್ಯಲ್ಲ ಸ್ಟಾರ್‌ಗಳಲ್ಲವೇನೋ?" ಎಂದ ಉಗ್ರಿ

"ಪುನೀತನ ಬುಡು, ಅವುರಪ್ಪನ್ನ ಆ ಹುಡುಗನಲ್ಲಿ ಕಾಣೋರ್ಯಲ್ಲ ಅವುನ್ನ ನೋಡ್ತರೆ. ನೋಡಕ್ಕೆ ಸುಮಾರಾಗಿದ್ರು ಆಕ್ಟಿಂಗ್ ಮಾಡ್ತನೆ. ಆದ್ರೆ ಈ ತೂಗುದೀಪನ ಹುಡುಗ ಎಷ್ಟು ಗಾತ್ರಾಗ್ಯವುನೆ ಅಂತೀ. ಹೀರೋ ಆದೋನು ಬಾಡಿ ಮೇಂಟೇನು ಮಾಡಬಾರ್ದ?"



"ನೀನ್ಯಾಕೆ ನಾಯಿ ಹ್ವಡಿಯೋ ಕೋಲಿನಂತಿದ್ದೀ? ದಪ್ಪಾಗಕ್ಯಾಗದಿಲವೆ?"

"ಅದು ನನ್ನ ಬಾಡಿ ನೇಚರು."

"ಅವುನಿಗೂ ಅಂಗೆ ಇರಬಹುದು ತಗೊ."

"ಅಂಗೇನುವಿಲ್ಲ ತಗೊ. ಅನ್ನಮಾಡಿಕಂಡು ಉಂಡು ಅಂಗಾಗಿರಬವುದು. ಯೀರೋ ಆದೋನಿಗೆ ಬಾಡಿ ಮೇಲೆ ನಿಗಾ ಇರಬೇಕು."

"ಇನ್ನ್ಯಾರು ಸಿಕ್ಕಿದ್ರು ನಿಂಗೆ?"

"ಎಡೂರಪ್ಪ, ಈಶ್ವರಪ್ಪ ಕಟ್ಟಾ ಸುಬ್ಬ ಯಲ್ಲ ಸಿಕ್ಕಿದ್ರು ಕಣಕ್ಕ. ಅವುರ ಮಾತಾಡುಸಬೇಕು ಅಂತ ಅನ್ನಸಲಿಲ್ಲ. ಅದಕ್ಕಿಂತ ಅವುರ ಮುಸುಡಿಗಳಿಗೂ ಇಂತ ಉತ್ಸವಗಳಿಗೂ ಸಮಂದ ಇರದಿಲ್ಲ. ಆದ್ದರಿಂದ ಮಾತಾಡಸಕ್ಕೂ ಮನಸು ಬರಲಿಲ್ಲ ಕಣಕ್ಕ. ನನಿಗೆ ಈಗ್ಲು ಒಂದು ಕನ್‌ಪೀಜನ್ನದೆ. ಏನಪ್ಪಾ ಅಂದ್ರೆ, ಲಂಕೇಶ್ ಮಗಳು ಕವಿತಾ ಬಂದಿದ್ಲು. ಅವುಳು ಪ್ರೈಜ್ ತಗಳಕ್ಕೆ ಬಂದಾಗ ಎಡೂರಪ್ಪನ ಮುಖ ಥೇಟ್ ನಮ್ಮ ದೊಡ್ಡಪ್ಪನ ಮುಕದಂಗಾಗಿತ್ತು. ಅದ್ರಿಂದ ನನಿಗೇನು ಡವುಟಾಯ್ತು ಅಂದ್ರೆ ಈ ಎಡೂರಪ್ಪ ಕವಿತಾ ಲಂಕೇಶ್, ಗೌರಿ ಲಂಕೇಶ್ ಇಬ್ಬರನ್ನ ಕನ್‌ಪೀಜ್ ಮಾಡಿಕಂಡು ಒಬ್ಬಳೇ ಅನ್ನಕಂಡನೋ ಹ್ಯಂಗೇ ಅನ್ನದೇ ಡವುಟು."

"ಅಂಗೇನು ಆಗಿಲ್ಲ ಸುಮ್ಮನಿರೊ. ಎಡೂರಪ್ಪನಿಗೆ ಅಷ್ಟೂ ಗೊತ್ತಿಲ್ಲವೇ?"

"ಅದರಲ್ಲೂ ಹೆಣ್ಣುಮಕ್ಕಳ ಸೂಕ್ಷ್ಮವಾಗಿ ಗಮನಸ್ತನೆ" ಎಂದ ಉಗ್ರಿ.

"ಇರಬಹುದು, ಮನೇಲಿ ವಳ್ಳೆ ಹೆಂಡ್ತಿ ಇಲ್ದಾಗ ನಾವು ವರಗಡೆ ಹೆಂಗಸರ ಗಮನಸ್ತಿವಿ. ಆ ತರನೂ ಎಡೂರಪ್ಪ ಇರಬಹುದು. ಎನಿಹೌ ಮಾನ್ಯ ದೇವೇಗೌಡ್ರಿಗೆ ಸಿನಿಮಾದ ಬಗ್ಗೆ ಎಷ್ಟು ನಾಲೆಡ್ಜು ಇರಬಹುದೋ ಅಷ್ಟೇ ಎಡೂರಪ್ಪನಿಗೂ ಇದೇ ಅಂತ ತಿಳಕಂಡಿದ್ದಿನಿ. ಆ ವಿಷಯದಲ್ಲಿ ಅವುರಿಬ್ರು ಒಂದೆ."

"ಎಡೂರಪ್ಪನ್ನ ದ್ಯಾವೇಗೌಡ್ರಿಗೆ ಓಲುಸಬ್ಯಾಡ ಕಣೊ. ಎಡೂರಪ್ಪ ಯಾರು ಕರೆದ್ರು ಹೋಗಿ ಸಿನುಮಾ ನೋಡ್ತಾನೆ, ಕಾಮೆಂಟ್ ಮಾಡ್ತನೆ, ಕಡಿಗೆ ದೇವರು ಒಳ್ಳೆದು ಮಾಡ್ಲಿ ಅಂತನೆ. ಅದೇ ದ್ಯಾವೇಗೌಡ್ರು ಅಂಗಲ್ಲ."

"ಹೋಗ್ಲಿ ಬುಡೋ, ಈ ಕಂಪ್ಯಾರಿಜನ್ನೇ ತಪ್ಪು, ಪಾಪ ಗೌಡ್ರು ಬಿಬಿಎಂಪಿ ಚುನಾವಣೇಲಿ ಹಿಗ್ಗಾಮುಗ್ಗಾ ಹಿಕ್ಕಿಸಿಗಂಡು ಮನಿಗ್ಯವುರೆ. ಹೋಗಿ ಮಾತಾಡುಸ್‌ಬೇಕು ಅನ್ನಸ್ತಾ ಅದೆ."

"ಹೋಗೇನು ಮಾತಾಡುಸ್ತಿಲ?"


"ನಿಮ್ಮ ಪಾರ್ಟಿಯ ಕಾಂಗ್ರೆಸ್‌ಗೆ ಮರ್ಜ್ ಮಾಡಿ ಅಂತಿನಿ ಕಣಕ್ಕ."

"!?" ●

ರಂ ಭರ್ತಿ ಮಾಡಿ!


ೊನ್ನೆ ಹೇಳಿದೆ-ನನ್ನಿಂದ ಈ ಫಾರಂಗಳನ್ನು ತುಂಬುವುದು ಆಗುವುದಿಲ್ಲ. ಗಿದ್ದಾಗ ಕಾಲೇಜು ಸೇರಲು, ಹಾಸ್ಟೆಲ್ ಸೇರಲು ತುಂಬಲೇಬೇಕಾಗಿತ್ತು. ದೆಲ್ಲದರಿಂದ ತಪ್ಪಿಸಿಕೊಳ್ಳಬಲ್ಲೆ. ಫಾರಂ ರೀತೀನೇ ವಿಚಿತ್ರ. ಕೆಲವು ್ನ ಕುರಿತು ಸುಮ್ಮನೇ ಯೋಚಿಸಿ-ನೀವು ಹಳ್ಳಿಯವರೋ ಪಟ್ಟಣದವರೋ? ನಗೆ ತೀರಾ ಕಷ್ಟದ ಪ್ರಶ್ನೆ. ನಾನು ಹಳ್ಳಿಯವನೂ ಅಲ್ಲ, ಪಟ್ಟಣದವನೂ ವೆರಡೂ ಒಟ್ಟಿಗೇ ಆಗಿರುವುದು ಸಾಧ್ಯವಿದೆ. ನೀನು ಸಸ್ಯಾಹಾರಿಯೋ ಾರಿಯೋ? ಅದು ಅಂಥದೇ ಪ್ರಶ್ನೆ. ನಿನಗೆ ಎಷ್ಟು ಭಾಷೆ ಬರುತ್ತದೆ? ಾಷೆಯಲ್ಲಿ ನಿಷ್ಣಾತನೆ? ಪಂಡಿತನೋ ಪಾಮರನೋ? ಹೇಡಿಯೋ ವಂತನೋ? ನಿನ್ನ ಜಾತಿ ಯಾವುದು? ನಿನ್ನದು ಬಯಲುಸೀಮೆಯೋ ೋ? ಎಲ್ಲವಕ್ಕೆ ಹೇಗೆ ಉತ್ತರಿಸಿದರೂ ಅರೆಸುಳ್ಳಾಗಿರುತ್ತದೆ. ಅದಕ್ಕೆ ನಾನು ಹುಟ್ಟಿದ ಊರು ಮಲೆನಾಡೂ ಅಲ್ಲ, ಬಯಲುಸೀಮೆಯೂ ಾತೃಭಾಷೆಯಲ್ಲಿ ನನಗಿಂತ ಅಧಿಕಾರವಾಣಿಯಿಂದ ಮಾತಾಡಬಲ್ಲವರು, ಲ್ಲವರು ಇರಬಹುದು. ಅದಕ್ಕೇ ಅಲ್ಲಿಯೂ ಸುಳ್ಳು ಹೇಳಿದಂತಾಗುತ್ತದೆ. ೀಗಲು ಇಷ್ಟ, ಹೋಗದಿರಲೂ ಇಷ್ಟ-ಎಂಬುದು 'Catch-22' ುನ್ನು ಸೃಷ್ಟಿಸುವಂತೆ ಭೂತಕಾಲ, ವರ್ತಮಾನಕಾಲ, ಭವಿಷ್ಯಕಾಲ-ಎಲ್ಲದರಲ್ಲಿ ್ಚತೆ, ಅನಿಶ್ಚಯತೆ ಇರುತ್ತದೆ. ಭವಿಷ್ಯವನ್ನು ತೆಗೆದುಕೊಳ್ಳಿ. ಗೆದ್ದೇ ಗೆಲ್ಲುವ ಇದ್ದರೆ ಗೆದ್ದ ಮಜಾ ಇರುವುದಿಲ್ಲ, ಸೋತೇಬಿಡುತ್ತದೆ ಎನ್ನುವುದಿದ್ದರೆ ೂಡ ಜೂಜಾಟವಲ್ಲ. ಇವೆರಡನ್ನೂ ಮೇಲಿನ ಮಾತುಗಳೊಂದಿಗೆ tainty, tentativeness ಪದಗಳಿಂದ ವಿವರಿಸಬಹುದು. tainty ಬದುಕಿನ insecurity ಗೆ ಬದಲು ಬದುಕಿನ ಅನಿರೀಕ್ಷತೆಯ ೂಡುವಂತಿರಬೇಕು. ಅದಕ್ಕಾಗಿಯೇ ನಾನು ಹತ್ತು ರೂಪಾಯಿ ಇಟ್ಟು ಸಂತೋಷಪಡಬಲ್ಲೆನೇ ಹೊರತು ಫಾರಂಗಳನ್ನು ತುಂಬಲು ಸುತಾರಾಮ್ ುವುದಿಲ್ಲ. ಜೂಜಿನಲ್ಲಿ ಇರದಿರುವ ಸುಳ್ಳಿಗೆ ಈ ಫಾರಂಗಳು ಪ್ರೇರೇಪಿಸುತ್ತವೆ!

ಸೂಕ್ಷ್ಮಜ್ಞತೆ-ಒಬ್ಬಂಟಿತನ



ಮೇಲಿನ ತರಹದ್ದೇ ಇನ್ನೊಂದು ಅನುಭವ ಇರುತ್ತದೆ. ವಿಚಿತ್ರ ರೀತಿಯ ಒಬ್ಬಂಟಿತನ-ಮೊನ್ನೆ ಟಿ.ಎಸ್. ಎಲಿಯಟ್ ಜೀವನಚರಿತ್ರೆ ಓದುವಾಗ ಮನಸ್ಸನ್ನು ಮುತ್ತಿದ್ದು ಈ ಒಬ್ಬಂಟಿತನ; ದುರಂತದ ಮಟ್ಟಕ್ಕೆ ಹೋಗುವಂಥದು. ಎಲಿಯಟ್ ತುಂಬ ಪ್ರಶಾಂತನಾದವನು. ಜೀವನಪರ್ಯಂತ ಹಲವಾರು ಕಾಯಿಲೆಗಳಿಂದ ಆತ ನರಳಿದ. ಹಾಗೆಯೇ ಜೀವನವನ್ನು ತುಂಬ ಪ್ರೀತಿಸಿದವನು. ಚಿಕ್ಕಂದಿನಲ್ಲಿಯೇ ಸಿಗರೇಟ್ ಅಭ್ಯಾಸ ಅಂಟಿಕೊಂಡಿತು; ಆಮೇಲೆ ಮದ್ಯಪಾನ. ಸಂಕೋಚದ ಎಲಿಯಟ್ ಒಮ್ಮೊಮ್ಮೆ ಕುಡಿಯತೊಡಗಿದರೆ ನಿಲ್ಲಿಸುತ್ತಲೇ ಇರಲಿಲ್ಲ. ಇದರಿಂದ ಅವನಿಗೇ ದಿಗ್ಭ್ರಮೆ ಯಾಯಿತು. ತನ್ನ ವ್ಯಕ್ತಿತ್ವವೇ ನಾಶವಾಗುತ್ತಿದೆ ಅನ್ನಿಸಿ ಧರ್ಮದ ಬಗ್ಗೆ ಚಿಂತಿಸಿದ; ಧರ್ಮಗುರುಗಳನ್ನು ಸಂಧಿಸಿ ಮಾತಾಡಿದ; ತುಂಬ ಶಿಸ್ತಿನಿಂದ ಪ್ರತೀವಾರ ಚರ್ಚ್‌ಗೆ ಹೋಗತೊಡಗಿದ. ಇದನ್ನೆಲ್ಲ ಮೀರಿದ್ದು ಎಲಿಯಟ್‌ನ ಜೀವನ ದಾಹ ಮತ್ತು ಪ್ರಚಂಡ ಬುದ್ಧಿವಂತಿಕೆ. ಆದ್ದರಿಂದಲೇ ಆತನ ಕಾವ್ಯ ಧಾರ್ಮಿಕ ಕಾವ್ಯವಾಗುವುದಿಲ್ಲ; ಅಥವಾ ಸಿನಿಕ ಕಾವ್ಯವಾಗುವುದಿಲ್ಲ.

ಇದರಷ್ಟೇ ಮುಖ್ಯ ಎಲಿಯಟ್ ಗಳಿಸಿದ ಖ್ಯಾತಿ. ಮೊದಮೊದಲು ಬೇಜವಾಬ್ದಾರಿಯ ಮನುಷ್ಯ ಯಾರಿಗೂ ಅರ್ಥವಾಗದಂತೆ ಕ್ಲಿಷ್ಟವಾಗಿ ಬರೆಯುವವನು. ಆತ ಬರೆಯುವುದು ಸಾಹಿತ್ಯವೇ ಅಲ್ಲ ಅನ್ನುತ್ತಿದ್ದವರೂ ಎಲಿಯಟ್‌ನ ಸಹನೆಯ, ಸರಳ, ವಿದ್ವತ್ಪೂರ್ಣ ಬರಹಗಳಿಂದ ಆಕರ್ಷಿತರಾದರು; ಅವನ ಕಾಳಜಿ, ದೃಷ್ಟಿ, ತಮಾಷೆಗಳೆಲ್ಲ ಅವನ ವೈಶಿಷ್ಟ್ಯಗಳಾದವು. ಆತ ತನ್ನ 'ಕ್ರೈಟೀರಿಯನ್' ಪತ್ರಿಕೆ ಶುರುಮಾಡಿದ ಮೇಲಂತೂ ಸಾಹಿತ್ಯ ಕುರಿತ ಅವನ ಮಾತೇ ಕೊನೆಯದಾಯಿತು. ಹಾಗೆಯೇ ಗೌರವ, ಮೆಚ್ಚುಗೆಯಿಂದ (ಅಥವಾ ಅಂಜಿಕೆಯಿಂದ) ಪರಿಚಿತರು ದೂರ ಇರತೊಡಗಿದರು; ಸ್ನೇಹಿತರು ಕಡಿಮೆಯಾದರು. ಇದೊಂದು ವಿಚಿತ್ರ ಸ್ಥಿತಿ. ಗೆಳೆಯರಿಗಾಗಿ ಹಂಬಲಿಸುತ್ತಿದ್ದ ಎಲಿಯಟ್ ಅವರಿಗೆ ತೊಂದರೆ ಕೊಟ್ಟು ಒತ್ತಾಯಿಸಿ ಕರೆಯುತ್ತಿರಲಿಲ್ಲ; ಆದರೆ ಅವರು ಬಂದಾಗ ತನ್ನೊಳಗೆ ಸರಿದುಕೊಂಡು ಮುದುಡಿ ಕೂತುಬಿಡುತ್ತಿದ್ದ. ಒಬ್ಬನೇ ಕೂತು 'ಪೇಶನ್ಸ್' ಆಡುವುದನ್ನು ಕಲಿತ; ಒಬ್ಬಂಟಿತನದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅನೇಕ ಪ್ರಯೋಗ ನಡೆಸಿದ. ಎಲಿಯಟ್ ತರಹದವರು ಎಲ್ಲರ ಜೊತೆಗಿದ್ದರೂ ಒಬ್ಬಂಟಿ ಎಂಬುದೂ ನಿಜ; ಎಲ್ಲ ಸಾಧನೆಗಳೂ ಅಂಥವರನ್ನು ದುಃಖಿತರನ್ನಾಗಿ ಮಾಡುತ್ತದೆ. ಇದು ಗೊತ್ತಿದ್ದರೂ ಎಲಿಯಟ್ ಈ ಒಬ್ಬಂಟಿತನದಿಂದ ಆಘಾತ ಅನುಭವಿಸಿದ. ಆತ ಅರವತ್ತೈದು ಇಟಲಿ, ಫ್ರಾನ್ಸ್, ಅಮೆರಿಕಾದ ವಿಶ್ವವಿದ್ಯಾಲಯಗಳು ಅವನನ್ನು ಕರೆದು ಪ್ರೀತಿ, ಗೌರವ ತೋರಿಸಿದವು. ಈ ಮುಟ್ಟುವಷ್ಟರಲ್ಲಿ ನಿಜಕ್ಕೂ ಯಜಮಾನ ಆಗಿದ್ದ. ಅದೇ ಸಮಯದಲ್ಲಿ ಅವನಿಗೆ ನೊಬೆಲ್ ಬಹುಮಾನ ಬಂತು. ಬಹುಮಾನ ದೊರೆತಾಗ ಅವನ ಅಭಿಮಾನಿಗಳು ದೊಡ್ಡದೊಂದು ಸಂತೋಷಕೂಟ ಇಟ್ಟಿದ್ದರು. ಅಲ್ಲಿಗೆ ಹೋದೊಡನೆ ಎಕ್ಸ್‌ರೇ ವ್ಯಕ್ತಿತ್ವದ ಎಲಿಯಟ್-ಅಲ್ಲಿದ್ದ ಅಸೂಯೆ, ದ್ವೇಷವನ್ನು ಗ್ರಹಿಸಿ ದಿಗಿಲುಗೊಂಡ. ಅಲ್ಲಿ ಕೆಲವೇ ನಿಮಿಷ ಇರುವುದು ಅವನಿಗೆ ಸಾಧ್ಯವಾಯಿತು. ಎಲ್ಲರಿಗೆ ವಂದನೆ ಸಲ್ಲಿಸಿ ಅಲ್ಲಿಂದ ತನ್ನ ಒಬ್ಬಂಟಿತನಕ್ಕೆ ಹಿಂದಿರುಗಿದ.



-ಆಗಸ್ಟ್ 11, 1993

ರಾಷ್ಟ್ರೀಯ ಪ್ರಜ್ಞೆಯ ವಕಾಲತ್ತು

ರಾಷ್ಟ್ರೀಯ ವಿಪತ್ತು ಸಂಭವಿಸಿತ್ತು.


ಪ್ರಸಿದ್ಧ ತಾರೆ-ತಾರೆಯರ ಸಮಾಗಮ ಆಗಿತ್ತು. ಇದಕ್ಕೆ ಯಾವ ಅಡಚಣೆಯೂ ಇರಲಿಲ್ಲ. ಆದರೆ ಅವರು ವಿವಾಹವಾಗಲು ನಿಶ್ಚಯಿಸಿದ್ದರು!

ಸಲಿಂಗಿಗಳೇ ಅವರು?

ಅಲ್ಲ, ದ್ವಿಲಿಂಗಿಗಳೇ. ಆದರೂ ಅವರು ವಿವಾಹವಾಗಬಾರದು?

ಯಾಕೆ? ಅದರಲ್ಲೇನು ಅಪರಾಧ?

ಅಣಕ



▶ ಎಚ್.ಎಲ್. ಕೇಶವಮೂರ್ತಿ

ಅಂತಿಂತಹದ್ದಲ್ಲ! ಹುಡುಗಿ ಭಾರತೀಯಳು, ಹುಡುಗ ಪಾಕಿಸ್ತಾನಿ!

ವಿವಾಹ ನಡೆಯುವುದು ದೇಶಗಳ ನಡುವೆಯೋ? ಹುಡುಗ-ಹುಡುಗಿಯ ನಡುವೆಯೋ?

ರಾಷ್ಟ್ರದ್ರೋಹಿಗಳ, ಕೋಟಾ ವಿಚಾರವಂತರ ವಿಕೃತ ಮನಸ್ಸಿನ ಪ್ರಶ್ನೆ ಇದು!

ಎಚ್ಚರಗೊಂಡಿತು ರಾಷ್ಟ್ರೀಯ ಪ್ರಜ್ಞೆ!

ಯಾರ ಪ್ರಜ್ಞೆ ಇದು? ಭಾರತೀಯರದ್ದೋ? ಪಾಕಿಸ್ತಾನೀಯರದ್ದೋ?

ಎರಡರದ್ದೂ ಅಲ್ಲ, ಅವರ ವಕ್ತಾರರದ್ದು! ಶಿವಸೇನೆಯ ಬಾಳಠಾಕ್ರೆ, ಶ್ರೀರಾಮಸೇನೆಯ ಪ್ರಮೋದ್ ಮುತಾಲಿಕ್ ಭಾರತೀಯ ರಾಷ್ಟ್ರೀಯ ಪ್ರಜ್ಞೆ ವಕ್ತಾರರು! ಪಾಕಿಸ್ತಾನಿ ಟೆನ್ನಿಸ್ ಅಸೋಸಿಯೇಷನ್ ಪಾಕಿಸ್ತಾನಿ ರಾಷ್ಟ್ರೀಯ ಪ್ರಜ್ಞೆ ವಕ್ತಾರರು!

'ಇದನ್ನು ಸಹಿಸಲಸಾಧ್ಯ' ಎಂದಿತು ರಾಷ್ಟ್ರೀಯ ಪ್ರಜ್ಞೆ.

'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು, ವಿವಾಹಾನಂತರ ಸೋನಿಯಾ ಭಾರತೀಯಳಲ್ಲ' ಎಂದು ಸಾರಿತು ಭಾರತೀಯ ರಾಷ್ಟ್ರೀಯ ಪ್ರಜ್ಞೆ.

ಇದೇ ರಾಷ್ಟ್ರೀಯ ಪ್ರಜ್ಞೆ ಈ ಹಿಂದೆ ಸೋನಿಯಾ ಗಾಂಧಿ ಭಾರತೀಯಳಲ್ಲ, ಇಟಲಿ ದೇಶದವಳು ಎಂದಿತ್ತು ನಿಜ. ಸಮಯ, ಸಂದರ್ಭವೇ ಬೇರೆ ಇತ್ತು!

'ನಿಮ್ಮ ಮಾತು ಸತ್ಯ. ವಿವಾಹವಾದ ನಂತರ ಆಕೆ ಪಾಕಿಸ್ತಾನಿ ಪ್ರಜೆ. ಆಕೆ ಪಾಕಿಸ್ತಾನದ ಪರವಾಗಿ ಟೆನ್ನಿಸ್ ಆಡಬೇಕು' ಎಂದು ಘೋಷಿಸಿತು ಪಾಕಿಸ್ತಾನಿ ರಾಷ್ಟ್ರೀಯ ಪ್ರಜ್ಞೆ.

ಭಾರತೀಯ ರಾಷ್ಟ್ರೀಯ ಪ್ರಜ್ಞೆ ನಿದ್ರಿಸುತ್ತಿರಲಿಲ್ಲ.

'ಭಾರತದ ನೆಲದಲ್ಲಿ ಅವರು ಆಡಲು ಬಿಡುವುದಿಲ್ಲ' ಎಂದು ಸಾರಿತು!

ಮುತಾಲಿಕ್ ರಾಷ್ಟ್ರೀಯ ಪ್ರಜ್ಞೆ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹಾಕಿತು. 'ಹದಿನೈದು ಕೋಟಿ ಭಾರತೀಯ ಮುಸಲ್ಮಾನರಲ್ಲಿ ಆಕೆಗೆ ಅರ್ಹರು ಯಾರೂ ಕಣ್ಣಿಗೆ ಬೀಳಲಿಲ್ಲವೇ?' ಎಂದು ಮೂಲಕ್ಕೇ ಕೈಹಾಕಿತು.

ಹಿಂದೂ-ಮುಸಲ್ಮಾನರ ನಡುವೆ ಪ್ರೇಮಾಂಕುರ ಅಸಾಧ್ಯ. ಮುಸಲ್ಮಾನರು ಆಮಿಷ ಒಡ್ಡಿ ಹಿಂದೂ ಯುವಕ-ಯುವತಿಯರನ್ನು ವಿವಾಹವಾಗಿ ಮತಾಂತರ ಮಾಡಲಾಗುತ್ತದೆ ಎಂಬ ಅವರ ರಾಷ್ಟ್ರೀಯ ಪ್ರಜ್ಞೆ ದ್ಯೋತಕವಾಗಿ ಭಾರತೀಯ ಹಿಂದೂ ಯುವಕರನ್ನು ಅವರು ಪರಿಗಣಿಸಿಲ್ಲ ಎಂದು ತಿಳಿಯಬಹುದಾಗಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಇವರು ತಮ್ಮ ಕ್ರೀಡಾಕ್ಷೇತ್ರದಲ್ಲಿ ಅದ್ವಿತೀಯರೇ ಎಂದರೆ ಸಾನಿಯಾ ಮೂವತ್ತರ ಮಟ್ಟ ಬಿಟ್ಟು ಮೇಲೇರಲು ಇದುವರೆವಿಗೂ ಸಾಧ್ಯವೇ ಆಗಿಲ್ಲ! ಶೋಯಬ್ ಸಾಧನೆ ಇನ್ನೂ ಕಳಪೆ.

ಹೀಗಿದ್ದರೂ ಯಾಕೆ ಕೆಸರೆರಚಾಟ?

ಅಲ್ಲಿ ಪಾಕಿಸ್ತಾನ ಇದೆ. ಇಲ್ಲಿ ಭಾರತ ಇದೆ. ಇವರಿಬ್ಬರಿಗೂ ಕೊಂಚ ಮಟ್ಟಿನ ಹೆಸರಿದೆ. ಭಾರತ-ಪಾಕ್ ನಡುವಣ ಯಾವುದೇ ವಿಷಯವನ್ನ ವಿವಾದವನ್ನಾಗಿ ಪರಿವರ್ತಿಸುವ ಸದವಕಾಶವನ್ನು ವ್ಯರ್ಥಗೊಳಿಸಬಾರದು ಎಂದು ಒತ್ತಾಯಿಸುತ್ತದೆ- ರಾಷ್ಟ್ರೀಯ ಪ್ರಜ್ಞೆ!

ರಿವರ್ಸ್ ಮಹಾತ್ಮ!

ನಿಜವಾಗಿಯೂ ಇವರು ರೈತರ ಮುಖ್ಯಮಂತ್ರಿಯೇ ಸರಿ!

ರೈತರು ಅನ್ನೋ ದಡ್ಡ ಸೂಳೆಮಕ್ಕಳು ಅಪ್ಪ ಹಾಕಿದ ಆಲದಮರ ಅಂತ ಅದಕ್ಕೆ ನೇಣುಹಾಕಿಕೊಳ್ತಿದಾವೆ-ಇರೋ ಅಷ್ಟೋ ಇಷ್ಟೋ ಜಮೀನನ್ನೇ ಹಗಲೂ ರಾತ್ರಿ ಗೇದು ಗೇದು ಸೊರಗಿ ಸುಣ್ಣಾ ಆಗ್ತಿದಾವೆ. ಬಂದ ಬೆಳೇನ ಮಾರಾನ ಅಂತ ಹೋದ್ರೆ ಆರು ಕಾಸು ಮೂರು ಕಾಸಿಗೆ ಕೇಳ್ತಾರೆ. ಕೈಗಿದ್ದರೆ ಬಾಯಿಗಿಲ್ಲ, ಬಾಯಿಗಿದ್ದರೆ ಕೈಗಿಲ್ಲ ಅನ್ನೋ ಸ್ಥಿತಿ ಈ ದಡ್ಡ ಮುಂಡೇವ್ದು. ಇದ ನೋಡಲಾರದೆ ಯಡ್ಯೂರಪ್ಪನವರು ಕೊರಗಿ ಕೊರಗಿ ನುಗ್ಗೇಕಾಯಂಗಾದ್ರು. ಕೊನೆಗೆ ಒಂದು ಬುದ್ಧಿಮಾತ ಹೇಳಿದ್ರು. ಅದೇನಪ್ಪ ಅಂದ್ರೆ ಅಯ್ಯೋ ರೈತ ಮುಂಡೇಮಕ್ಕಳ ಹಿಂಗೆ ಎರಡೆಕ್ರೆ ಮೂರೆಕ್ರೆ ಜಮೀನು ಇಟ್ಟುಕೊಂಡು ಏನು ಮಾಡ್ತೀರೋ? ಇಷ್ಟು ಸಣ್ಣ ಭೂಮೀಲಿ ಈಗ ವ್ಯವಸಾಯ ಮಾಡಿದ್ರೆ ಮಣ್ಣು ಮುಕ್ತೀರಿ. ಅದರ ಬದಲು ಭೂಮಿ ಬಿಸಾಕಿ. ಒಳ್ಳೇ ರೇಟು ಕೊಡುಸ್ತೀನಿ. ಕೈತುಂಬ ಹಣ ಬರ್ತದೆ. ಜುಂ ಅಂತ ಮೂರು ಜನರಂಗೆ ಬಾಳ್ಬಹುದು. ಬ್ಯಾರೆಯೋರಂಗೆ ನೀವು ಬದ್ಲೋದ ಕಲ್ತುಕೊಳ್ಳೋ ಅಂತೆಲ್ಲ ಹೇಳಿದ್ರು.

ರೈತರ ಕುರಿತಂತೆ ಇಷ್ಟೊಂದು ಕಾಳಜಿ ಮಾತ ಯಾವ ಮಗನೂ ಆಡಿರಲಿಲ್ಲ ಬುಡಿ. ಇದ್ದಬಿದ್ದ ಜಮೀನೆಲ್ಲ ಮಾರಿ ಜೀವನಕ್ಕೇನು ಮಾಡೋದು ಅಂತ ಯೋಚನೇನೂ ಮಾಡಂಗಿಲ್ಲ. ಇವರು ಜಮೀನು ಕೊಟ್ರೆ ಸಾಕು ಅಲ್ಲಿ ಕೈಗಾರಿಕೆ ಬರ್ತದಂತೆ. ಸಾವಿರಾರು ಕೋಟಿ ಬಂಡವಾಳ ಹಂಗೇ ಹರಿದು ಬರ್ತದಂತೆ. ಜಮೀನು ಮಾರಿದೋರ್ಗೆ ಬೇಕಾದ್ರೆ ಅಲ್ಲೇ ಕೆಲ್ಸಾನೂ ಕೊಡ್ತಾರಂತೆ. ಯಾರಿಗುಂಟು ಯಾರಿಗಿಲ್ಲ ಇಂತಹ ಅವಕಾಶ ಹೇಳಿ. ಅದು ಸರಿ, ಎಂಥ ಕೆಲ್ಸ ಕೊಡ್ತಾರಂತೆ ಅಂದ್ರೆ ಎಂತಹದ್ದೋ ಒಂದು. ಅವರವರ ಯೋಗ್ಯತೆಗೆ ತಕ್ಕನಾದ್ದು ಕೊಡ್ತಾರೆ. ಆದ್ರೆ ಈಗಿನಂಗೆ ದಿನಾ ಯಂಗಪ್ಪ ಅನ್ನ ಸಂಕಟ ಇರೋದಿಲ್ವೊ. ತಿಂಗಳಾಯ್ತು ಅಂದ್ರೆ ಸಾಕು; ಮಳೆ ಹುಯ್ದಿಬಿದ್ದಿ ಸಂಬಳ ಬಂದುಬೀಳ್ತದೆ. ಅಷ್ಟೋ ಇಷ್ಟೋ ಒಟ್ಟಿನಲ್ಲಿ 'ಸಂಬಳದಾರ' ಅನ್ನಿಸಿಕೋಬೋದೋ!

ಈಶ್ವರಪ್ಪನವರು ಇಂತಹದ್ದೇ ಗರಡೀಲಿ ಸಾಮು ಮಾಡಿದೋರಲ್ವ, ಅವರೂ ಇದಕ್ಕೆ ಪೂರಕವಾಗಿಯೇ ಮಾತನಾಡಿದ್ದಾರೆ. ಅವರು ಹೇಳಿದ ಮಾತಿನ ತಾತ್ಪರ್ಯ ಏನು ಅಂದರೆ-ಜನ ವಿಮಾನ ಬೇಕು ಹಾರಾಡಕ್ಕೆ ಅಂತಾರೆ. ಅದ್ಕೆ ನಿಲ್ದಾಣ ಬ್ಯಾಡ್ವ. ಭೂಮಿಲಲ್ಲದೇ ಆಕಾಶದಲ್ಲಿ ಅದ ಮಾಡಡಾಕಾಗ್ತದ. ಅದ್ಕೆ ಭೂಮಿಬೇಕು. ಕರೆಂಟು ಇಲ್ಲ ಅಂತಾರೆ. ಕರೆಂಟ ತೆಗಿಯೋಕೆ ಕಾರ್ಖಾನೆ ಬೇಕು. ಇದು ಭೂಮಿ ಅಲ್ಲದೆ ಆಕಾಶದಲ್ಲಿ ಕಟ್ಟಾಕಾದಾತ. ಅದ್ಕೂ ಭೂಮಿ ಆಗ್ಬೇಕು. ಇಂತಹವೆಲ್ಲ ಬೇಕು ಅಂದ್ರೆ ದೂಸರಾ ಮಾತಾಡ್ದೆ ಭೂಮಿ ಬಿಸಾಕಿ-ಹೀಗೆಲ್ಲ ಹೇಳಿ ಭೂಮಿ ಒಡೆಯರು ಅದ ಮಾರುವುದೇ ಅಭಿವೃದ್ಧಿ ದಾರಿ ಎಂದು ತಾಕೀತು ಮಾಡಿದ್ದಾರೆ!



ಎಲ್ಲ ಭೂಮೀನೂ ಹಿಂಗೆ ಅಭಿವೃದ್ಧಿ, ಅಭಿವೃದ್ಧಿ ಅನ್ಕೊಂಡು ಯಾವುಯಾವುದೋ ಕಾರ್ಖಾನೆಗಳನ್ನು ತಂದುಹಾಕಿದ್ರೆ ತಿನ್ನೋ ಅನ್ನಕ್ಕೆ ಏನು ಮಾಡೋದು ಅನ್ನೋ ಯೋಚನೆಯನ್ನು ಬಿಡಿ. ಸರ್ಕಾರ ಇಲ್ವ ಅದ ಹೆಂಗೋ ನೋಡ್ಕತ್ತದೆ. ಬೇಕಾದ್ರೆ ಆಹಾರ ಪದಾರ್ಥವನ್ನೂ ಕಾರ್ಖಾನೇಲೆ ಉತ್ಪಾದನೆ ಮಾಡುಸ್ತಾರೆ!

ಗಾಂಧಿ ಅನ್ನೋ ಮುದ್ಕ ಹಳ್ಳಿಗಳಿಗೆ ಹಿಂತಿರುಗಿ ಅಂತಿದ್ದ. ಪ್ರಪಂಚದ ಜ್ಞಾನ ಇರಲಿಲ್ಲ ಅವ್ನಿಗೆ. ಇವರನ್ನೋಡಿ. ಬದುಕೋದ ತಿಳಿದವರು. ಹಳ್ಳಿಬಿಟ್ಟು ದಿಲ್ಲಿಗೆ ಬನ್ನಿ ಅಂತವ್ರೆ. ಆ ಮುದುಕನ ಮಾತ ಕೇಳಿ ಹಾಳಾಗ ಬ್ಯಾಡ್ರಪೊ. ಈ ರಿವರ್ಸ್ ಗಾಂಧಿಗಳ ಮಾತ ಕೇಳಿ.....

ಗಣಿಗಾರಿಕೆ ಅಂದ್ರೆ ವ್ಯಾಪಾರ!

ಗಣಿಗಾರಿಕೆಯಿಂದ ಪರಿಸರ ನಾಶ ಆಗ್ತದೆ ಅನ್ನೋದೆಲ್ಲ ಬೋಗಸ್ ಇರಬೇಕು. ಅದೆಂಗೆ ನಾಶ ಆಗ್ತದೆ ಅಂತೀನಿ. ಬಳ್ಳಾರೀನೆ ನೋಡಿ. ಆಕಾಶದ ತುಂಬ ಧೂಳೇ ತುಂಬಿರುತ್ತೆ ಗಣಿಗಾರಿಕೆ ನಡೀತಾನೇ ಇದೆ. ಪರಿಸರ ಕಾಳಜಿ ಇರೋರು ಇದು ಸತ್ಯ ಆಗಿದ್ದರೆ ದೊಂಬಿ ಏಳಬೇಕಾಗಿತ್ತು, ಹಂಗಾಗಿಲ್ವೆ. ಅದು ಇಡೀ ರಾಜ್ಯದಲ್ಲೇ ಅತ್ಯಂತ ಶಾಂತಿಯುತ ಜಿಲ್ಲೆ ಅಂತ ಜನಾರ್ದನ ರೆಡ್ಡಿಯವರೇ ಹೇಳಿದ್ದಾರೆ. ಅಲ್ಲಿ ಜಗಳಗಳೇ ನಡೆಯಲ್ವಂತೆ. (ಏನಿದ್ರೂ ಕೊಲೆಗಳು ಅಷ್ಟೇ ಅನ್ನುವವರ ಮಾತು ಬಿಡಿ) ಇದಕ್ಕೆ ಪುರಾವೆ ಅಂದ್ರೆ ಬಳ್ಳಾರಿಯ ಪೊಲೀಸ್ ಸ್ಟೇಶನ್ನಿನಲ್ಲಿ ಬಡಿದಾಟದ ಕೇಸುಗಳು ದಾಖಲಾಗುವುದು ಬಲೇ ವಿರಳ ಅಂತೆ. ಹೇಗಾಗುತ್ತೆ ಹೇಳಿ ರೆಡ್ಡಿ ವಿರೋಧಿಗಳು ದೂರು ನೀಡಿದರೆ ಪೋಲೀಸ್ನೋರು ದಾಖಲಿಸೋದೇ ಇಲ್ಲ; ರೆಡ್ಡಿ ಪರ ಇರುವ ಗೂಂಡಾಗಿರಿಗೆ ಪೋಲೀಸ್‌ನವರೇ ಸಾಥ್ ನೀಡ್ತಾರೆ ಅನ್ನುವವರೂ ಇದ್ದಾರೆ. ಆದರೆ ಒಂದು ಮಾತಂತೂ ಸತ್ಯ, ಗಣಿಗಾರಿಕೆಯಿಂದ ಪರಿಸರ ನಾಶ ಆಗಲ್ಲ, ಜೀವಸಂಕುಲಕ್ಕೆ ಸಂಕಷ್ಟ ಬರಲ್ಲ ಅನ್ನೋದು. ಹಂಗೇನಾದರೂ ಆಗಿದ್ದರೆ ಜನ ಸುಮ್ಮನೆ ಕುಳಿತ್ತಿದ್ರಾ, ಬಳ್ಳಾರಿ ಜನರ ಏಳ್ಗೆಯನ್ನೇ ಸದಾ ಚಿಂತಿಸುವ ಜನಾರ್ದನ ರೆಡ್ಡಿ ಗಣಿಗಾರಿಕೆ ಮಾಡುವವರನ್ನ ಸುಮ್ಮನೆ ಬಿಡ್ತಿದ್ರಾ, ಸರ್ಕಾರ ಅನ್ನೋದು ಕಡುಬು ತಿನ್ತಾ ಕೂರ್ತಿತ್ತಾ, ಕ್ರಮಜರುಗಿಸದೆ!

ಈಶ್ವರಪ್ಪನವರೂ ಗಣಿಗಾರಿಕೆಗೆ ಉತ್ತೇಜನ ನೀಡುವ ಮಾತನ್ನೇ ಆಡಿದ್ದಾರೆ. ಗಣಿಗಾರಿಕೆ ಅನ್ನೋದು ಇವತ್ತಿಂದ ನಡೀತೀರೋದಲ್ಲ, ಸ್ವಾತಂತ್ರ್ಯ ಬಂದಾಗಲಿಂದ ನಡೀತಾ ಇದೆ. (ಸ್ವಾತಂತ್ರ್ಯ ಪೂರ್ವದ ನೆನಪು ಬಂದಿಲ್ಲ ಪಾಪ!) ಪರಿಸರ ನಾಶ ಆಗುವಂತಿದ್ದರೆ ಈ ವೇಳೆಗೆ ಎಲ್ಲ ನಾಶ ಆಗಬೇಕಿತ್ತು, ಹಂಗೆ ಆಗಿಲ್ಲವಲ್ಲ, ಅದ್ಕೆ ಏಳು ಗಣಿಗಾರಿಕೆ ಲೈಸೆನ್ಸ್‌ಗಳನ್ನು ಹೊಸದಾಗಿ ನೀಡಲಾಗಿದೆ. ಇದರಲ್ಲಿ ತಪ್ಪೇನೂ ಇಲ್ಲ ಎನ್ನುವುದು ಅಪ್ಪನವರ ಅನಿಸಿಕೆ. ಗಣಿಗಾರಿಕೆ ಅಂದ್ರೆ ವ್ಯಾಪಾರ. ಬಂಡವಾಳ ಕಡಿಮೆ ಇರೋನು ಸಣ್ಣದಾಗಿ ವ್ಯಾಪಾರ ಮಾಡ್ತಾನೆ. ಹೆಚ್ಚಿಗೆ ಇರೋನು ದೊಡ್ಡದಾಗಿ ಮಾಡ್ತಾನೆ. ಇದರಲ್ಲೇನು ತಪ್ಪಿದೆ ಎಂಬುದು ಅವರಿಗೆ ಅರ್ಥಾನೆ ಆಗುತ್ತಿಲ್ಲವಂತೆ. ಗಣಿಗಾರಿಕೆಗೂ, ಪರಿಸರ ನಾಶಕ್ಕೂ ಯಾವುದೇ ಸಂಬಂಧ ಕಲ್ಪಿಸಬಾರದು ಅನ್ನುವುದು ಅವರ ಆಶಯ ಇದ್ದಿರಬಹುದು.

ಹೌದು ಗಣಿಗಾರಿಕೆ ಅಂದ್ರೆ ವ್ಯಾಪಾರ ಒಪ್ಕೋಣವಂತೆ 'ಆಪರೇಷನ್ ಕಮಲ' ಅದೂ ವ್ಯಾಪಾರವೇ?

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆನೂ ವ್ಯಾಪಾರವೇ?

ಭಾಜಪ ವ್ಯವಹಾರವೆಲ್ಲ ವ್ಯಾಪಾರವೇ.... ●

ಕಟ್ಟಾನಂತಹ ಗೂಂಡಾ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಳ್ಳಲು ಲಂಕೇಶರು ಇರಬೇಕಿತ್ತು

ಪೊಲೀಸ್-ರಾಜಕಾರಣಿ-ಕ್ರಿಮಿನಲ್ ನೆಕ್ಸಸ್‌ನಲ್ಲಿ ಮಂಗಳೂರು ಜಿಲ್ಲೆಯು ಕರ್ನಾಟಕದ ಕ್ರೈಮ್ ಕ್ಯಾಪಿಟಲ್ ಎನಿಸಿರುವ ನಮ್ಮ ಬೆಳಗಾವಿ ಜಿಲ್ಲೆಯನ್ನು ಹಿಂದಿಕ್ಕಿದಂತೆ ಕಾಣುತ್ತದೆ. (ಲಂಕೇಶ್ 14.4.10) ಬೆಳಗಾವಿ ಜಿಲ್ಲೆಯ ನಮ್ಮ ಗೋಕಾಕ್ ತಾಲ್ಲೂಕಿನಲ್ಲಿ ಸಭ್ಯ ವ್ಯಕ್ತಿಗಳನ್ನು ಕೊಲೆ ಮಾಡಿದವರು ಮೃತದೇಹದ ಹೊಟ್ಟೆಗೆ ಅಥವಾ ಕಾಲಿಗೆ ಹಗ್ಗ ಕಟ್ಟಿ ತೂಗಾಡಿಸಿದರೂ ಪೊಲೀಸರು ಅದನ್ನು ಬಾಲಿಶವಾಗಿ ಆತ್ಮಹತ್ಯೆ ಎಂದು ಬರೆದು ಮುಚ್ಚಿ ಹಾಕಿ ಕೊಲೆಗಾರರನ್ನು ಬಚಾವ್ ಮಾಡುತ್ತಾರೆ. ಆದರೆ ಮಂಗಳೂರಿನಲ್ಲಿ ಪ್ರಚಂಡ ಕಾನೂನು ಪಂಡಿತರು ಹಾಗೂ ಜಾಗೃತ ಪತ್ರಿಕೆಗಳು ಇರುವುದರಿಂದ ಪೊಲೀಸರು ಕೊಲೆಯಾದಾತನ ದೇಹವೇ ಸಿಗದಂತೆ ಮಾಯ ಮಾಡುತ್ತಾರೆ. ಜನರ ಒತ್ತಡ ಹೆಚ್ಚಾದರೆ ಸತ್ತವನು ತರುಣನಾದರೂ ಯಾರೋ ಮುದುಕನ ಕೊಳೆತ ಶವ ತೋರಿಸಿ ಇದೇ ನಿಮ್ಮ ಮಗ ಎಂದ್ಹೇಳಿ ಕೇಸ್ ಮುಚ್ಚಿಹಾಕುತ್ತಾರೆ. ಎಷ್ಟಾದರೂ ಮಂಗಳೂರು-ಉಡುಪಿಯವರು ನಮ್ಮ ಬೆಳಗಾವಿಯವರಿಗಿಂತ ಹೆಚ್ಚು ಬುದ್ಧಿವಂತರು ತಾನೇ. ಮಂಗಳೂರಿನಲ್ಲಿ ಎರಡು ತಿಂಗಳ ಹಿಂದೆ ಹೊಸ ಕಮೀಷನರೇಟ್ ಸ್ಥಾಪಿಸಿದ್ದು ಕರ್ಮಕ್ಕೆ, 'ಭೂ ಮಾಫಿಯಾದ ಮುಖಿಯಾ' ಕೃಷ್ಣ ಪಾಲೇಮಾರ್ ಮಂತ್ರಿಯಾಗಿರುವವರೆಗೆ, ಕರಾವಳಿ ಬಿಜೆಪಿ-ಆರೆಸ್ಸೆಸ್‌ನ ಡಾನ್‌ಗಳ ಮುಷ್ಟಿಯಲ್ಲಿ ಇರುವವರೆಗೆ, ಮಂಗಳೂರು-ಉಡುಪಿ ಪೊಲೀಸರು ಪ್ರಾಮಾಣಿಕವಾಗಿ ಕೆಲಸ ಮಾಡಲು ಹಾಗೂ ಪ್ರೀತಮ್‌ನ ಹೆತ್ತವರಿಗೆ ನ್ಯಾಯ ಸಿಗಲು ಸಾಧ್ಯವೇ ಇಲ್ಲ. ಉಡುಪಿಯ ಶಾಸಕ ರಘುಪತಿ ಭಟ್ಟನ ಹೆಂಡತಿಯ ಆತ್ಮಹತ್ಯೆ (ಕೊಲೆ) ಕೇಸ್‌ನಲ್ಲಿ ಯಾರ್‍ಯಾರನ್ನೋ ಸಿಕ್ಕಿಸಿ ಪೊಲೀಸರು ಒಂದೂವರೆ ವರ್ಷದಿಂದ ಚಿತ್ರಹಿಂಸೆ ಕೊಡುತ್ತಿಲ್ಲವೇ. ಸತ್ತ ಆ ಶಾಸಕನ ಹೆಂಡತಿಗೆ ಇಂದಿಗೂ ನ್ಯಾಯ ಸಿಕ್ಕಿದೆಯೇ?

-ಅನಿಲ್‌ಕುಮಾರ್ ಶೆಟ್ಟರ್, ಬೆಳಗಾಂ

ಹೊಗಳಿಕೆ ತೆಗಳಿಕೆ

ನಾನು ಬಿಇ ನಾಲ್ಕನೆ ವರ್ಷ ಓದುತ್ತಿರುವ ವಿದ್ಯಾರ್ಥಿ. ಇತ್ತೀಚಿಗಿನ ಬಿಬಿಎಂಪಿ ಚುನಾವಣೆಗಳಲ್ಲಿ ಕಟ್ಟಾ ಜಗ್ಗನ ವಿರುದ್ಧ ಸ್ಪರ್ಧಿಸಿದ್ದ ಎನ್.ಎಸ್.ರಮಾಕಾಂತ್ ಎಂಬುವವರ ಪರವಾಗಿ ನಾನು ಪ್ರಚಾರ ಮಾಡಿದ್ದೆ. ಕಟ್ಟಾ ಜಗ್ಗನ ಕುರಿತು ನಿಮ್ಮ ಪತ್ರಿಕೆಯಲ್ಲಿ ಬಂದ ವರದಿ ತುಂಬಾ ಚೆನ್ನಾಗಿತ್ತು. ನಿಮ್ಮ ಆ ಲೇಖನವನ್ನು ಇಂಗ್ಲಿಷಿಗೆ ಅನುವಾದಿಸಿ ಕುಮಾರ ಪಾರ್ಕ್‌ನಲ್ಲಿ ಕೆಲವರು ಹಂಚುತ್ತಿದ್ದರು. ಇದು ಗೊತ್ತಾಗುತ್ತಿದ್ದಂತೆ ಕಟ್ಟಾನ ಗೂಂಡಾಗಳು ಬಂದು ಅವುಗಳನ್ನು ಕಿತ್ತುಕೊಂಡು ಸುಟ್ಟುಹಾಕಿದರು.

ಈ ಚುನಾವಣೆಯಲ್ಲಿ ಕಟ್ಟಾ ಕನಿಷ್ಠವೆಂದರೂ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾನೆ. ಅವನ ಉದ್ದೇಶ ಕಾರ್ಪೊರೇಟರ್ ಆಗಿ ಕನಿಷ್ಠ 2,000 ಕೋಟಿ ರೂಪಾಯಿಗಳನ್ನು ಕಮಾಯಿಸುವುದೇ ಆಗಿದೆ. ಆತನ ದುರಾಸೆಗೆ ಅದೆಷ್ಟು ಜನ ಬಲಿಯಾಗಬೇಕೋ, ಅದೆಷ್ಟು ಮರಗಳು ಉರುಳಿವೆಯೋ (ಅಂದಹಾಗೆ, ಗುಬ್ಬಚ್ಚಿಗಳನ್ನು ಕುರಿತ ಗೌರಿ ಲಂಕೇಶ್ ಲೇಖನ ಕಣ್ಣು ತೆರೆಸುವಂತಿತ್ತು)

ಕಟ್ಟಾನಂತಹ ಗೂಂಡಾ ಕಂ ರಾಜಕಾರಣಿಗಳನ್ನು ತರಾಟೆಗೆ ತೆಗೆದುಕೊಳ್ಳಲು ಲಂಕೇಶರು ನಮ್ಮೊಂದಿಗೆ ಇಂದೂ ಇರಬೇಕಿತ್ತು. ಆದರೆ ಅವರ ಮೌಲ್ಯಗಳು ನಮ್ಮ ನಡುವೆ ಇನ್ನೂ ಇವೆ.

- ವಿದ್ಯಾಚರಣ್, ಬೆಂಗಳೂರು

ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ "'ಕೆಂಡಸಂಪಿಗೆ'ಯ ರಶೀದರಿಗೆ 'ಕೆಂಡ' ಮತ್ತು 'ಸಂಪಿಗೆ'ಯಂತಹ ಪತ್ರ"ವನ್ನು ಓದಿದೆ. ಚಂದ್ರಶೇಖರ ಐಜೂರ್ ಅವರ ಧೈರ್ಯಕ್ಕೂ, ನಿಮಗೂ ಅಭಿನಂದನೆಗಳು. ನಾನು 'ಕೆಂಡಸಂಪಿಗೆ'ಯಲ್ಲಿ ಬರೆಯುತ್ತಿದ್ದು ರಶೀದರಿಗೆ ಹಿರಿಯ ಲೇಖಕರನ್ನು ಬ್ಲಾಗಿಗರ ಕಟಕಟೆಯಲ್ಲಿ ನಿಲ್ಲಿಸುವ ಬಗೆಗೆ ಆಕ್ಷೇಪ ವ್ಯಕ್ತಪಡಿಸಿದ್ದೆ. ಆದರೆ ಅವಕ್ಕೆ ಈ ಪತ್ರದ ಬಲ ಇರಲಿಲ್ಲ. ಚಂದ್ರಶೇಖರ್ ನನ್ನ ಗೆಳೆಯರು. ಅವರ ಅಭಿಪ್ರಾಯಗಳನ್ನು ಕೇಳುತ್ತಿರುತ್ತಿದ್ದೆ. ಅದನ್ನು ಪ್ರಕಟಿಸುವ ಬದ್ಧತೆ ಇರುವ ನಿಮ್ಮ ನಿಲುವು ಇಷ್ಟವಾಯಿತು.

- ಡಾ. ಅನುಪಮಾ. ಎಚ್.ಎಸ್. ಕವಲಕ್ಕಿ ಅಂಚೆ, ಹೊನ್ನಾವರ ತಾಲೂಕು

ಸರ್ಕಾರಿ ಜಾತ್ರೆಯ ಅಧ್ವಾನಗಳು



ಶಿವಮೊಗ್ಗೆಯ ಜನ ಭಾರೀ ಕುತೂಹಲದಿಂದ ನೆಹರೂ ಕ್ರೀಡಾಂಗಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ಕನ್ನಡ ಚಿತ್ರರಂಗದ ತಾರೆಯರ ರಂಜನೆ-ಮನರಂಜನೆಯನ್ನು ಎದುರು ನೋಡುತ್ತಿದ್ದರು. ಆದರೆ ಉದ್ಯಮದವರ ನಿರಾಶಾದಾಯಕ ಪ್ರದರ್ಶನ ಮತ್ತು ನಿರ್ಲಕ್ಷ್ಯತನದಿಂದಾಗಿ ಸಮಾರಂಭ ನೀರಸವಾಗಿ ನಡೆದುಹೋಯಿತು. ಹೀಗಾಗಿ ಅಂದು ಶಿವಮೊಗ್ಗೆಯ ಜನತೆ ಕನ್ನಡ ಚಿತ್ರೋದ್ಯಮದವರಿಗೆ ಹಿಡಿಶಾಪ ಹಾಕಿದ್ದರೆ ಆಶ್ಚರ್ಯವೇನಿಲ್ಲ.

ಮೊನ್ನೆ ಏಪ್ರಿಲ್ 4ರಂದು ಶಿವಮೊಗ್ಗೆಯಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ಎಂಬ ಸರ್ಕಾರಿ ... ನಡೆಯಿತು.

ಸಾಹಿತಿಗಳು, ಸಮಾಜವಾದಿಗಳು, ಕಲಾವಿದರು ...ದ ನಾಡೆಂದೇ ಖ್ಯಾತಿಪಡೆದ ಶಿವಮೊಗ್ಗೆಯಲ್ಲಿ ನಡೆದ ಸಮಾರಂಭ ಹಾಸ್ಯಾಸ್ಪದವಾಗಿತ್ತು. ಅದಕ್ಕೆ ಮುಖ್ಯ ... ವಾರ್ತಾ ಇಲಾಖೆಯ ಅಧಿಕಾರಿಗಳ ಮತ್ತು ಈ ...ರಂಭದ ಸಂಯೋಜಕರ ಕಳಪೆ ಅಭಿರುಚಿ.

ಶಿವಮೊಗ್ಗೆಯ ಜನ ಭಾರೀ ಕುತೂಹಲದಿಂದ ...ರೂ ಕ್ರೀಡಾಂಗಣದಲ್ಲಿ ಸಾವಿರಾರು ಸಂಖ್ಯೆಯಲ್ಲಿ ...ಯಿಸಿ ಕನ್ನಡ ಚಿತ್ರರಂಗದ ತಾರೆಯರ ರಂಜನೆ-...ರಂಜನೆಯನ್ನು ಎದುರು ನೋಡುತ್ತಿದ್ದರು. ಆದರೆ ...ಮದವರ ನಿರಾಶಾದಾಯಕ ಪ್ರದರ್ಶನ ಮತ್ತು ...ಕ್ಷ್ಯತನದಿಂದಾಗಿ ಸಮಾರಂಭ ನೀರಸವಾಗಿ ...ದುಹೋಯಿತು. ಹೀಗಾಗಿ ಅಂದು ಶಿವಮೊಗ್ಗೆಯ ...ತೆ ಕನ್ನಡ ಚಿತ್ರೋದ್ಯಮದವರಿಗೆ ಹಿಡಿಶಾಪ ಹಾಕಿದ್ದರೆ ...ರ್ಯವೇನಿಲ್ಲ.

'ಸದಭಿರುಚಿಯ ಚಿತ್ರಗಳನ್ನು ನಿರ್ಮಿಸಿ' ಎಂದು ...ದ್ಯಮಕ್ಕೆ ಯಾವಾಗಲೂ ಕರೆ ಕೊಡುವ ಸರ್ಕಾರ ... ಮಾಡಿದ್ದು ಏನು ಗೊತ್ತೇ? ಅಲ್ಲಿ ಹಾಡು, ನೃತ್ಯದ ...ನಲ್ಲಿ ನಡೆದದ್ದು ಪಾಶ್ಚಾತ್ಯ ನೃತ್ಯಗಳ ಕುಣಿತದ ...ಕುಗಳು. ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ...ಡಿಯುವ ಅಥವಾ ಅದನ್ನು ಪ್ರದರ್ಶಿಸುವ ಒಂದೇ ... ಹಾಡಾಗಲಿ, ನೃತ್ಯವಾಗಲಿ ಅಲ್ಲಿ ಜರುಗಲೇ ... ಸರ್ಕಾರವೇ ಈ ತರಹದ ಅರೆನಗ್ನತೆಯ ಪಾಶ್ಚಾತ್ಯ ... ಶರಣಾದರೆ ಉದ್ಯಮದವರು ತಮ್ಮ ಚಿತ್ರಗಳಲ್ಲಿ ... ಅರೆನಗ್ನತೆಯನ್ನು, ಪಾಶ್ಚಿಮಾತ್ಯ ನೃತ್ಯವನ್ನು ...ರಿಸುವುದರಲ್ಲಿ ತಪ್ಪೇನಿದೆ? ಉದ್ಯಮದವರಿಗೆ ...ರುಚಿಯ ಚಿತ್ರ ನಿರ್ಮಿಸಿ ಎಂದು ಕರೆಕೊಡುವ ... ಹಕ್ಕಾದರೂ ಸರ್ಕಾರಕ್ಕೆ ಎಲ್ಲಿಂದ ಬರಬೇಕು?

...ಂದು ಯುವನಾಯಕ-ನಾಯಕಿಯರಾದ ವಿಜಯ ...ಕೇಂದ್ರ, ಲೂಸ್ ಮಾದ ಯಾನೆ ಯೋಗೀಶ್, ... ಯಜ್ಞಾ ಶೆಟ್ಟಿ, ನೀತೂ, ಪ್ರಜ್ಞಾ, ಭಾವನಾ, ...ೆ ಮೊದಲಾದವರ ನೃತ್ಯಗಳು ವ್ಯಾಯಾಮ ...ದಂತೆ ಕಾಣಿಸಿತೇ ವಿನಃ ಅದರಲ್ಲಿ ನೃತ್ಯದ ಸೊಬಗು ... ಮಾದಕತೆ ಇರಲಿಲ್ಲ. ಒಂದೆರಡು ಚಿತ್ರಗಳಲ್ಲಿ ... ಈ ನಟನಟಿಯರ ನೃತ್ಯ ಯಾವುದೇ ರೀತಿಯಲ್ಲಿ ...ಗ್ಗೆಯ ಜನತೆಯ ಮೇಲೆ ಯಾವುದೇ ಪ್ರಭಾವ ...ಲ್ಲ. ಬಹುತೇಕ ಎಲ್ಲರ ನೃತ್ಯವೂ ಒಂದೇತರಹ ... ಅಲ್ಲಿ ಯಾವುದೇ ವೈವಿಧ್ಯತೆ ಕಾಣಿಸಲಿಲ್ಲ. ಇದ್ದುದರಲ್ಲಿ ಭಾವನಾಳ ಕುಣಿತ ಮನಸ್ಸಿಗೆ ಒಂದಿಷ್ಟು ಮುದ ನೀಡುವಂತಿತ್ತು.

ಈ ನೃತ್ಯಗಳೇ ಅಂದು ಜಮಾಯಿಸಿದ್ದ ಪ್ರೇಕ್ಷಕರಿಗೆ ಬೋರು ಹೊಡೆಸಿದರೆ, ಇದರ ಮಧ್ಯದಲ್ಲಿ ಸಾಧು ಕೋಕಿಲಾ ಮತ್ತು 'ಕುರಿ' ಖ್ಯಾತಿಯ ಪ್ರತಾಪ್ ನಡೆಸಿಕೊಟ್ಟ ತಮಾಷೆಯ ಹುಟ್ಟ ಪ್ರಸಂಗವಂತೂ ಎಲ್ಲರೂ ನಾಚಿಕೆಯಿಂದ ತಲೆತಗ್ಗಿಸುವಷ್ಟು ಅಸಹ್ಯವಾಗಿತ್ತು ಮತ್ತು ಕಳಪೆಯಾಗಿತ್ತು. ಯಾವ ಪುರುಷಾರ್ಥಕ್ಕಾಗಿ ಸಾಧು ಇಂತಹ ಕಾರ್ಯಕ್ರಮಗಳನ್ನು ಸಾರ್ವಜನಿಕರೆದುರು ನಡೆಸಿಕೊಡುತ್ತಾರೆಂಬುದೇ ಅರ್ಥವಾಗುತ್ತಿಲ್ಲ. ಮುಖ್ಯಮಂತ್ರಿ ಉಪಸ್ಥಿತರಿರುವ, ಕೋಟ್ಯಾಂತರ ಜನ ಟಿವಿಯಲ್ಲಿ ನೇರಪ್ರಸಾರದಲ್ಲಿ ನೋಡುವ ಇಂತಹ ಕಾರ್ಯಕ್ರಮಕ್ಕೆ ನಮ್ಮ ತಾರೆಯರು ಒಂದಿಷ್ಟು ತಾಲೀಮು ನಡೆಸದೇ ಬಂದದ್ದು ದುಃಖದ ವಿಷಯ.

ಇಂತಹ ಕೆಟ್ಟ ಸಮಾರಂಭಕ್ಕೆ ಮುನ್ನುಡಿ ಬರೆದ ಕುಖ್ಯಾತಿ ನಿರೂಪಕ ಸೃಜನ್ ಲೋಕೇಶ್ ಮತ್ತು ಲಕ್ಷ್ಮಿ ಹೆಗಡೆಗೆ ಸಲ್ಲಬೇಕು. ಇವರಿಬ್ಬರ ನಿರೂಪಣೆಗೆ ಬ್ರೇಕ್ ಹಾಕುವವರೇ ಇರಲಿಲ್ಲ. ಅದರಲ್ಲೂ ಸೃಜನ್ ಲೋಕೇಶ್ ಅಸಹ್ಯ ಹುಟ್ಟಿಸುವಷ್ಟು ತಪ್ಪುತಪ್ಪಾಗಿ ಮಾತಾಡುತ್ತಿದ್ದರು.



ಒಂದು ಸಮಾರಂಭ ಎಂತಹ ಘನತೆ ಮತ್ತು ಗಾಂಭೀರ್ಯದಿಂದ ನಡೆಯಬೇಕಿತ್ತೋ, ಅದಕ್ಕೆ ವ್ಯತಿರಿಕ್ತವಾಗಿ ಶಿವಮೊಗ್ಗೆ ಸಮಾರಂಭ ಅಸ್ತವ್ಯಸ್ತವಾಗಿ ಗೊಂದಲದಲ್ಲಿ ನಡೆದುಹೋಯಿತು. ಡಾ.ರಾಜ್, ವಿಷ್ಣು ಸಿ.ಅಶ್ವತ್ಥ್, ಕೆ.ಅಶ್ವಥ್, ಚಿಂದೋಡಿ ಲೀಲಾ.... ಮೊದಲಾದ ಗಣ್ಯರ ನಿಧನಾನಂತರ ನಡೆದ ಮೊದಲ ಪ್ರಶಸ್ತಿ ಪ್ರದಾನ ಸಮಾರಂಭ ಇದಾಗಿತ್ತು. ಈ ಗಣ್ಯರಿಗೆ ಮಾತಿನ ಮುಖಾಂತರವಾಗಲಿ, ಕೃತಿಯ ಮುಖಾಂತರವಾಗಲಿ ಅಲ್ಲಿ ಶ್ರದ್ಧಾಂಜಲಿ ಅರ್ಪಿಸುವ ಅಥವಾ ಅವರ ಕೊಡುಗೆಯನ್ನು ನೆನಪಿಸುವ ಪ್ರಯತ್ನ ನಡೆಯಲೇ ಇಲ್ಲ. ಸರ್ಕಾರ ಮತ್ತು ಚಿತ್ರೋದ್ಯಮ ಇಷ್ಟು ಬೇಗ ಈ ಗಣ್ಯರನ್ನು ಮರೆಯಬಾರದಿತ್ತು!

ಕನ್ನಡ ಚಿತ್ರರಂಗದ ಸತ್‌ಸಂಪ್ರದಾಯದಂತೆ ಈ ಬಾರಿಯೂ ಪ್ರಶಸ್ತಿ ಸ್ವೀಕರಿಸುವವರನ್ನು ಹೊರತುಪಡಿಸಿ ಬೇರೆ ನಟನಟಿಯರು ಅಲ್ಲಿಗೆ ಬಂದಿರಲಿಲ್ಲ. ಹೀಗಾಗಿ ಈ ಸಮಾರಂಭ 'ತಾರಾ ಮೇಳ'ವಾಗಿ ಕಾಣಿಸಲೇ ಇಲ್ಲ. ಗೈರುಹಾಜರಾದವರಲ್ಲಿ ಕಲಾವಿದರ ಸಂಘದ ಅಧ್ಯಕ್ಷ ಅಂಬರೀಷ್, ಸುಮಲತಾ, ಉಪೇಂದ್ರ-ಪ್ರಿಯಾಂಕ, ರವಿಚಂದ್ರನ್, ಶಿವರಾಜ್‌ಕುಮಾರ್, ರಮೇಶ್, ದೇವರಾಜ್, ಗಣೇಶ್, ವಿಜಯ್, ದರ್ಶನ್, ರಮ್ಯಾ, ಶರ್ಮಿಳಾ ಮಾಂಡ್ರೆ, ಜಯಂತಿ, ಅನು ಪ್ರಭಾಕರ್ ಪ್ರಮುಖರು. ಇವರನ್ನೆಲ್ಲ ಬಿಡಿ, ಶಾಸಕರಾಗಿ ಆಯ್ಕೆಯಾಗಿರುವ ನಟರಾದ ಮುಖ್ಯಮಂತ್ರಿ ಚಂದ್ರು ಮತ್ತು ಶ್ರೀನಾಥ್ ಕೂಡ ಅಂದು ನಾಪತ್ತೆಯಾಗಿದ್ದರು.

ಆ ಸಮಾರಂಭದ ಭಾವುಕ ಕ್ಷಣವೆಂದರೆ ವಿಷ್ಣುವರ್ಧನ್ ಬದಲಿಗೆ ಅವರ ಪತ್ನಿ ಭಾರತಿ ವಿಷ್ಣುವರ್ಧನ್ ಪ್ರಶಸ್ತಿ ಸ್ವೀಕರಿಸಿದ್ದು. ಹಾಗೆಯೇ ಲಂಕೇಶರ ಹುಟ್ಟೂರಲ್ಲಿ ಅವರಿಗೆ ಬಂದ ಪ್ರಶಸ್ತಿಯನ್ನು ಅವರ ಪುತ್ರಿ ಕವಿತಾ ಲಂಕೇಶ್ ಸ್ವೀಕರಿಸಿದ್ದು. ಮತ್ತೊಂದೆಡೆ ಪಾರ್ವತಮ್ಮ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಮೊದಲಬಾರಿಗೆ ಅಣ್ಣಾವ್ರು ಇಲ್ಲದ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಿದ್ದು.

ಮುಖ್ಯಮಂತ್ರಿಯ ಭಾಷಣದಲ್ಲಾಗಲಿ, ವಾರ್ತಾ ಸಚಿವ ಕಟ್ಟಾರ ಭಾಷಣದಲ್ಲಾಗಲಿ ವಿಶೇಷತೆಯೆಂಬುದು ಏನೂ ಇರಲಿಲ್ಲ. "ಇನ್ನು ಮುಂದೆ ಪ್ರತಿವರ್ಷ ಯುಗಾದಿಯಂದೇ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸುತ್ತೇವೆ, ಇದಕ್ಕೆ ಉದ್ಯಮದವರ ಸಹಾಯಬೇಕು" ಎಂದು ಕಟ್ಟಾ ಅಲ್ಲಿ ಮನವಿ ಮಾಡಿ ಎಲ್ಲರ ಅವಕೃಪೆಗೆ ಒಳಗಾದರು. "ಯುಗಾದಿ ಹಬ್ಬದಂದು ನಮಗೆ ಬರಕ್ಕಾಗಲ್ಲ; ಬೇರಾವುದಾದರೂ ದಿನ ನಿಗದಿಪಡಿಸಿ" ಎಂದು ಜಯಮಾಲಾ ಕಟ್ಟಾ ಮನವಿಗೆ ನೇರ ಉತ್ತರ ನೀಡಿದರು.

ಸರ್ಕಾರವೇ ನಡೆಸಿದ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಯಡ್ಡಿಯನ್ನು 'ನಿನ್ನಿಂದಲೇ, ನಿನ್ನಿಂದಲೇ...' ಎಂದು ಹಾಡಿ ಸ್ವಾಗತಿಸಿದ ನೃತ್ಯವಂತೂ ಅಸಂಬದ್ಧವಾಗಿತ್ತು. ಚಿತ್ರದ್ಯೋಮದವರಂತೆ ವಾರ್ತಾ ಇಲಾಖೆಯ ಅಧಿಕಾರಿಗಳು ಕೂಡಾ ಹೊರಭಾಷಾ ಗಾಯಕರಿಗೆ ಮಣೆ ಹಾಕಿದ್ದರು. ಶಿವಮೊಗ್ಗದ ಜಿಲ್ಲಾಧಿಕಾರಿ ಪಂಕಜ್‌ಕುಮಾರ್ ಗುಪ್ತಾ ಅವರ ಭಾವಮೈದಾ 'ನಿನ್ನಿಂದಲೇ.. ನಿನ್ನಿಂದಲೇ...' ಹಾಡನ್ನು ತಪ್ಪುತಪ್ಪಾಗಿ ಹಾಡಿದರು. ಇಂತಹ ಪುಣ್ಯಾತ್ಮನ ಹೆಸರನ್ನು ವಿಶೇಷವಾಗಿ ನಮೂದಿಸಿದ ಕಾರ್ಯಕ್ರಮದ ನಿರೂಪಕರಿಗೆ 'ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ವಿಜೇತ ರೇಣುಕಾಶರ್ಮಾ ಅನಾರೋಗ್ಯದಿಂದ ಸಮಾರಂಭಕ್ಕೆ ಬಂದಿಲ್ಲ, ಅವರ ಮನೆಗೆ ಹೋಗಿ ಪ್ರಶಸ್ತಿ ನೀಡುತ್ತೇವೆ' ಎಂದು ಹೇಳಲು ಮರೆತುಹೋದದ್ದು ವಿಚಿತ್ರ!

ಅತ್ಯುತ್ತಮ ನಾಯಕನಟ ಪ್ರಶಸ್ತಿ ಪಡೆದ ಪುನೀತ್ ಕೂಡ ಅಂದು ನೃತ್ಯ ಮಾಡಿ ಪ್ರೇಕ್ಷಕರನ್ನು ರಂಜಿಸಿದರು. ಆದರೆ ಅತ್ಯುತ್ತಮ ನಾಯಕಿ ಪ್ರಶಸ್ತಿ ಪಡೆದ ಉಮಾಶ್ರೀಗೆ ನೃತ್ಯ ಮಾಡಲು ಅಥವಾ ಡೈಲಾಗ್ ಹೇಳಲು ಯಾರೂ ಕೇಳಲಿಲ್ಲ. ಹೀಗಾಗಿ ಈಕೆ ಪ್ರಶಸ್ತಿ ಪಡೆದು ಸುಮ್ಮನೆ ಕುಳಿತರು.


ಶಿವಮೊಗ್ಗೆಯವರೇ ಆದ ಸುದೀಪ್‌ಗೆ ನೃತ್ಯ ಮಾಡಲು ನಿರೂಪಕರು ಕರೆದರು. ಆದರೆ ಸುದೀಪ್ ಮಾತ್ರ ಈ ಸಮಾರಂಭ ಇದು ತನ್ನ ಸಿನಿಮಾದ ಶತದಿನೋತ್ಸವ ಎಂಬಂತೆ ಕೆಲವರನ್ನು ಲೇವಡಿ ಮಾಡುತ್ತಾ, ಇನ್ನು ಕೆಲವರಿಗೆ ಥ್ಯಾಂಕ್ಸ್ ಹೇಳುತ್ತಾ, ಕೆಲವರನ್ನು ಹೊಗಳುತ್ತಾ ಮಾತನಾಡುತ್ತಲೇ ಹೋದರು. ಮಾತಿನ ನಂತರ ಒಂದು ಸುಂದರವಾದ ಭಾವಗೀತೆ ಹಾಡಿದರು. ಮತ್ತೊಂದು ಹಾಡಿಗೆ ನೃತ್ಯ ಮಾಡಿದರು. ಆದರೆ ಸುದೀಪ್ ತನ್ನ ಕಾರ್ಯವ್ಯಾಪ್ತಿಯನ್ನು ಮೀರಿ ಅಲ್ಲಿ ವರ್ತಿಸಿದರೆಂದೇ ಅನೇಕ ಉದ್ಯಮದವರು ದೂರಿದರು. ಅಷ್ಟೆ ಅಲ್ಲ, ಸುದೀಪ್‌ಗೆ ವೇದಿಕೆಯಲ್ಲಿ ಸ್ಥಾನಕೊಟ್ಟ ವಾರ್ತಾ ಇಲಾಖೆಯವರು ಶಿವಮೊಗ್ಗೆಯವರೇ ಆದ ದೊಡ್ಡಣ್ಣ ಮತ್ತು ಎಸ್.ನಾರಯಣ್‌ರವರಿಗೆ ಯಾಕೆ ಕೊಡಲಿಲ್ಲ ಎಂಬ ಪ್ರಶ್ನೆಯನ್ನು ಕೆಲವರು ಕೇಳಿದ್ದು ಸಹಜವಾಗಿತ್ತು.

ಸಾಮಾನ್ಯವಾಗಿ ರಾಜ್ಯ ಪ್ರಶಸ್ತಿ ಸಮಾರಂಭವನ್ನು ದೂರದರ್ಶನದವರು ನೇರ ಪ್ರಸಾರ ಮಾಡುತ್ತಾರೆ. ಆದರೆ ಇತ್ತೀಚೆಗೆ ಕೆಲವು ಖಾಸಗಿ ಚಾನೆಲ್‌ಗಳು ಹಣ ಕೊಟ್ಟು ನೇರ ಪ್ರಸಾರದ ಹಕ್ಕನ್ನು ಖರೀದಿಸುತ್ತಿದ್ದಾರೆ. ಈ ಬಾರಿ ಈ ಸಮಾರಂಭದ ನೇರ ಪ್ರಸಾರದ ಹಕ್ಕನ್ನು ಉಚಿತವಾಗಿ ಉದಯ ಟಿವಿಯವರಿಗೆ ನೀಡಿರುವುದು ಹಲವಾರು ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ. ಒಂದು ಮೂಲದ ಪ್ರಕಾರ ಅಮೃತಮಹೋತ್ಸವದ ಸಂದರ್ಭದಲ್ಲಿ ಉದಯ ಟಿವಿಯವರಿಗೆ ನಷ್ಟವಾಗಿದ್ದರಿಂದ ಅದನ್ನು ಸರಿದೂಗಿಸಲು ಈ ಬಾರಿ ಉಚಿತವಾಗಿ ನೀಡಿದ್ದಾರಂತೆ! ಅಂದರೆ ಈ ಕಾರ್ಯಕ್ರಮ ಉದಯ ಟಿವಿಗಾಗಿಯೇ ನಡೆಸಿದಂತಾಯಿತಲ್ಲವೇ.

ಕೇಂದ್ರ ಸರ್ಕಾರ ಅತ್ಯಂತ ಸರಳವಾಗಿ, ಘನಗಾಂಭೀರ್ಯತೆಯಿಂದ ಪ್ರಶಸ್ತಿಗಳನ್ನು ನೀಡುತ್ತದೆ. ಆದರೆ ಆಂಧ್ರ ಮತ್ತು ತಮಿಳುನಾಡು ಸರ್ಕಾರಗಳು ಅತ್ಯಂತ ವೈಭವೋಪೇತವಾಗಿ ಇಂತಹ ಸಮಾರಂಭಗಳನ್ನು ನಡೆಸುತ್ತವೆ. ಅಷ್ಟೇ ಯಾಕೆ ಇತ್ತೀಚೆಗೆ ಖಾಸಗಿ ಟಿವಿ ಚಾನೆಲ್‌ಗಳೂ ಎಲ್ಲರೂ ಬೆಚ್ಚಿಬೀಳುವಂತೆ ಪ್ರಶಸ್ತಿ ಸಮಾರಂಭಗಳನ್ನು ನಡೆಸುತ್ತವೆ. ಆದರೂ ರಾಜ್ಯ ಸರ್ಕಾರದ ಸಮಾರಂಭ ಮಾತ್ರ ಪ್ರತಿಬಾರಿಯೂ ಯಾಕೆ ಇಷ್ಟೊಂದು ಅದ್ವಾನವಾಗಿ ನಡೆಯುತ್ತದೆ ಎಂಬುದು ನಮ್ಮ ಪ್ರಶ್ನೆ. ಈ ಪ್ರಶ್ನೆ ಪ್ರತಿವರ್ಷ ಉದ್ಭವವಾಗುತ್ತದೆ. ಆದರೆ ಈ ಪ್ರಶ್ನೆಗೆ ಈ ತನಕ ಯಾರೂ ಉತ್ತರ ಕೊಟ್ಟಿದ್ದೇ ಇಲ್ಲ!

• ಸದಾಶಿವ ಶೆಣೈ
shenoylankesh@gmail.com

...ಾಯಿ ಪ್ರೀತಿಗಾಗಿ 20 ಲಕ್ಷ ಇನ್‌ವೆಸ್ಟ್‌ಮೆಂಟ್



...ರ್ನಾಟಕ, ಕೇರಳ, ತಮಿಳುನಾಡು ಸೇರಿದಂತೆ ದೇಶದ ನಾನಾಕಡೆ ...ರು ಉದ್ಯಮಗಳನ್ನು ಹೊಂದಿರುವ ಕಾನ್ಫಿಡೆಂಟ್ ಗ್ರೂಪ್‌ನ ... ಎಂಬ ಪುಣ್ಯಾತ್ಮನಿಗೆ ಸಿನಿಮಾ ಮೇಲೆ ಎಲ್ಲಿಲ್ಲದ ಪ್ರೀತಿ. ... ಮೂಲ ಕೇರಳವಾದರೂ ಈತ ಹುಟ್ಟಿ ಬೆಳೆದದ್ದೆಲ್ಲಾ ...ೂರಿನಲ್ಲೇ. ಮುನ್ನೂರು ಕೋಟಿ ರೂಪಾಯಿಗಳಿಗೂ ಅಧಿಕವಾದ ...ೂಂದಿರುವ ರಾಯ್ ಕನ್ನಡದಲ್ಲಿ ಈಗ ಐದಾರು ಸಿನಿಮಾಗಳನ್ನು ...ಸುವ ಆಶಯ ಹೊಂದಿದ್ದಾರೆ.

... ಹಿಂದೆ ನಟಿ ಸಿಂಧು ಮೆನನ್ ಸಹೋದರನನ್ನು ನಾಯಕನನ್ನಾಗಿಸಿ ...ದಾರ' ಎನ್ನುವ ಸಿನಿಮಾವನ್ನು ಆರಂಭಿಸಿದ್ದರು. ಆದರೆ ...ಕರೊಂದಿಗಿನ ಭಿನ್ನಾಭಿಪ್ರಾಯದಿಂದ ಆ ಚಿತ್ರ ಆರಂಭದಲ್ಲೇ ...ಟ್ಟಿತ್ತು. ಸದ್ಯ ರಮೇಶ್ ಅರವಿಂದ್ ಅವರ 'ಪ್ರೀತಿಯಿಂದ ...' ಎನ್ನುವ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ ರಾಯ್.

...ದಹಾಗೆ ಸಿನಿಮಾದೊಂದಿಗೆ ರಾಯ್ ಅವರ ನಂಟು ಬೆಳೆದದ್ದು ಅವರ ನಾಯಿಯ ಮೂಲಕ. ತಾವು ಪ್ರೀತಿಯಿಂದ ಸಾಕಿದ ಲ್ಯಾಬ್ರಡಾರ್ ನಾಯಿ ದಿನ ಬೆಳಗಾದ ಕೂಡಲೇ ನೀಟಾಗಿ ಸಿಂಗಾರ ಮಾಡಿಕೊಂಡು ಮನೆಯಿಂದ ಹೊರಹೋಗುತ್ತಿತ್ತಂತೆ. ಅದು ಹೀಗೆ ಪ್ರತಿನಿತ್ಯ ಶಿಸ್ತಾಗಿ ಹೊರಹೋಗುತ್ತಿದ್ದುದನ್ನು ಕಂಡು ಇವರಿಗೆ ಅಚ್ಚರಿಯಾಗಿತ್ತಂತೆ.

ಒಮ್ಮೆ ನವರಸ ನಾಯಕ ಜಗ್ಗೇಶ್ ಫೋನ್ ಮಾಡಿ "ಏನ್ರಿ ರಾಯ್ ಅವರೇ, ನಿಮ್ಮ ನಾಯಿ ನನಗಿಂತ ಚೆನ್ನಾಗಿ ಆ್ಯಕ್ಟ್ ಮಾಡುತ್ತೆ..." ಎಂದಾಗಲೇ ಈ ನಾಯಿ ದಿನಬೆಳಗಾದರೆ ಶೂಟಿಂಗ್‌ಗೆ ಹೋಗ್ತಾ ಇದೆ ಅನ್ನೋದು ಗೊತ್ತಾಯಿತಂತೆ.

ಅವರ ನಾಯಿಯೇನೋ 'ಸಿಐಡಿ ಈಶ' ಚಿತ್ರದಲ್ಲಿ ನಟಿಸಿತ್ತು. ಆದರೆ ಹಾಗೆ ನಟಿಸಿದ ಕೆಲವೇ ದಿನಗಳಲ್ಲಿ ಹಾರ್ಟ್ ಅಟ್ಯಾಕ್ ಆಗಿ ನಾಯಿ ತೀರಿಕೊಂಡಿತಂತೆ. ಅಷ್ಟೊತ್ತಿಗೇ 'ಸಿಐಡಿ ಈಶ' ಕೂಡಾ ಫೈನಾನ್ಸ್ ಪ್ರಾಬ್ಲಂನಿಂದ ಅರ್ಧಕ್ಕೇ ನಿಂತುಹೋಗಿದ್ದ. ತಮ್ಮ ನಾಯಿ ಆ ಚಿತ್ರದಲ್ಲಿ ನಟಿಸಿದೆ ಎಂಬ ಸೆಂಟಿಮೆಂಟಿಗೆ ಒಳಗಾದ ರಾಯ್ ತಕ್ಷಣ ಆ ಚಿತ್ರದ ನಿರ್ಮಾಪಕರನ್ನು ಕರೆದು ಇಪ್ಪತ್ತು ಲಕ್ಷ ರುಪಾಯಿಯ ಹಾರ್ಡ್ ಕ್ಯಾಶ್‌ಅನ್ನು ಅವರ ಕೈಗಿಟ್ಟು ಸಿನಿಮಾ ಮುಗಿಸಲು ಹೇಳಿದರಂತೆ...

ಪ್ರಾಣಿ ಪ್ರೀತಿ ಎಂದರೆ ಹೀಗೂ ಇರುತ್ತಾ?



arunodayagc@gmail.com

ಸುನಿಲ್ ಶೈನ್!



ಹುಲಿ
ಜೆನ್ನಿಫರ್

ಸುನಿಲ್ ರಾವ್ ಎಂಬ ನತದೃಷ್ಟ ನಟನಿಗೆ ಕಡೆಗೂ ಒಳ್ಳೆಯ ಘಳಿಗೆ ಕೂಡಿಬಂದುತಿದೆ.

ವಯಸ್ಸಿಗೇ ಕ್ಯಾಮೆರಾ ಮುಂದೆ ನಿಂತು ಬಹಳಷ್ಟು ಹಿರಿಯ ನಾಯಕನಟರೊಂದಿಗೆ ನಟಿಸಿದ ಈ ಬಾಲ ಕಲಾವಿದ ನಂತರದ ದಿನಗಳಲ್ಲಿ ಹೀರೋ ಆಗಿಯೂ ಚಾಲ್ತಿಗೆ ಬಂದವನು. ಈತ 'ಎಕ್ಸ್‌ಕ್ಯೂಸ್ ಮಿ', 'ಪ್ರೀತಿ ಪ್ರೇಮ ಪ್ರಣಯ'ದಂಥ ಯಶಸ್ವೀ ಚಿತ್ರಗಳಲ್ಲಿ ನಟಿಸಿದಾಗ ಕನ್ನಡಕ್ಕೆ ಹೊಸ ನಾಯಕನಟ ಸಿಕ್ಕ ಎಂದು ಮಾಧ್ಯಮಗಳು ಹೊಗಳಿದವು. ಆದರೆ ಆನಂತರ ಬಂದ 'ಬಾಬಾರೋ ರಸಿಕ', 'ಮಸಾಲ'ದಂಥ ಚಿತ್ರಗಳು ಸೋತಿದ್ದರಿಂದ ಗಾಂಧಿನಗರದವರು ಆತನತ್ತ ತಿರುಗಿ ನೋಡುವ ಮನಸ್ಸೇ ಮಾಡಲಿಲ್ಲ. ಇತ್ತೀಚೆಗೆ ಈತ ಪೂಜಾ ಗಾಂಧಿ ಜೊತೆ ನಟಿಸಿದ 'ಮಿನುಗು' ಚಿತ್ರ ಕೂಡಾ ಮಿನುಗದೇ ಡಬ್ಬಾ ಸೇರಿತು.



ಹೀಗಾಗಿ ಕಳೆದ ನಾಲ್ಕು ವರ್ಷಗಳ ಕಾಲ ಯಾವ ಸಿನಿಮಾದಲ್ಲೂ ಛಾನ್ಸೂ ಇಲ್ಲದೆ ಈಗ ಮನೆಯಲ್ಲಿ ಕೂರುವ ದೌರ್ಭಾಗ್ಯ ಎದುರಿಸಿದ್ದ. ಆದರೆ ಈ ಮಧ್ಯೆ ಆತನಿಗೆ ಮತ್ತೊಂದು ಬ್ರೇಕ್ ಸಿಗುವಂಥ ಪಾತ್ರ ಸಿಕ್ಕಿದೆ. ಅದು 'ಪ್ರೇಮಿಸಂ'ನಲ್ಲಿ.

'ಪ್ರೇಮಿಸಂ' ಚಿತ್ರದ ಪೋಸ್ಟರ್‌ಗಳಲ್ಲಾಗಲಿ, ಪ್ರೋಮೋಗಳಲ್ಲಾಗಲಿ ಎಲ್ಲೂ ಸುನೀಲ್ ಇರುವ ಕುರುಹೇ ಇಲ್ಲ. ಎಲ್ಲಿ ಈತ ತನ್ನ ಸಿನಿಮಾದಲ್ಲಿ ಇರುವುದು ಗೊತ್ತಾದರೆ ಪ್ರೇಕ್ಷಕರು ಥಿಯೇಟರಿಗೆ ಬರುವುದಿಲ್ಲವೋ ಎಂಬ ಭಯ ಮತ್ತು ಆತಂಕದಿಂದ ನಿರ್ದೇಶಕ ರತ್ನಜ ಎಲ್ಲೂ ಸುನೀಲ್‌ನ ಪ್ರಸ್ತಾಪ ಮಾಡಿರಲೇ ಇಲ್ಲ ಮತ್ತು ಉದ್ದೇಶಪೂರ್ವಕವಾಗೇ ಆತನನ್ನು ಗೌಪ್ಯವಾಗಿಟ್ಟಿದ್ದರು; ಯಾರೋ ಇಬ್ಬರು ಡೆಮ್ಮಿ ಹುಡುಗರನ್ನೇ ನಾಯಕರು ಎಂಬಂತೆ ಬಿಂಬಿಸಿದ್ದರು.

ಆದರೆ 'ಪ್ರೇಮಿಸಂ' ನೋಡಿಬಂದ ಪ್ರತಿಯೊಬ್ಬರಿಗೂ ಒಂದು ಅಚ್ಚರಿ ಕಾದಿತ್ತು, ಯಾಕೆಂದರೆ ಆ ಚಿತ್ರದ ನಿಜವಾದ ನಾಯಕ ಇದೇ ಸುನೀಲ್ ರಾವ್!

ಚಿತ್ರದ ಆರಂಭದಲ್ಲಿ ಅಮೂಲ್ಯಳ ಜೀವವಿಲ್ಲದ ನಟನೆ, ಹೊಸ ಹುಡುಗರ ಕಳಾಹೀನ ಮುಖಗಳ ಮಧ್ಯೆ ಈ ಚಿತ್ರದಲ್ಲಿ ಹೊಸ ಲವಲವಿಕೆ ಹುಟ್ಟುವುದೇ ಸುನಿಲನ ಎಂಟ್ರಿ ಆದಮೇಲೆ.

'ಗೋಲ್ಡನ್', 'ಪವರ್', 'ಲೂಸ್'ಗಳ ಮುಂದೆ ಕಳೆದುಹೋಗಿದ್ದ ಸುನಿಲನ ವೃತ್ತಿ ಬದುಕಿಗೆ ರತ್ನಜ ಈಗ ಹೊಸ ತಿರುವು ನೀಡಿದ್ದಾರೆ. ಸಿನಿಮಾದ ಕಲೆಕ್ಷನ್ ಕೂಡಾ ಒಳ್ಳೆಯ ಮಟ್ಟದಲ್ಲಿರುವುದರಿಂದ ಇನ್ನು ಮುಂದಾದರೂ ಸುನೀಲ್ ಪಾಲಿಗೆ ಹೊಸ ಅವಕಾಶಗಳು ದೊರೆಯಬಹುದು.

ಶ್ಯಾಂಪೂಗಾಗಿ ಕಣ್ಣೀರು!



ಮೊನ್ನೆ ಮೊನ್ನೆಯಷ್ಟೇ ನಟಿ ಅಂದ್ರಿತಾ ರೈ ನಾಗತಿಹಳ್ಳಿ ಮೇಷ್ಟ್ರ ಮೇಲೆ ಏನೇನೋ ಆರೋಪ ಮಾಡಿ ಬೀದಿರಂಪ ಮಾಡಿದ್ದಳು. ಈಗ ಅದೇ ಅಂದ್ರಿತಾಳ ವಿರುದ್ಧ ಶ್ರೀನಿವಾಸ್ ರಾಜು ಎಂಬ ನಿರ್ದೇಶಕನೂ, ಪ್ರಜ್ವಲ್ ಎಂಬ ನಟನೂ ಸೇರಿ ಜಂಟಿ ಮಾತಿನ ದಾಳಿ ನಡೆಸಿದ್ದಾರೆ.

ಈ ಹಿಂದೆ 'ಸಂಗಾತಿ' ಅನ್ನೋ ಚಿತ್ರವನ್ನು ನಿರ್ದೇಶಿಸಿದ್ದ ಶ್ರೀನಿವಾಸ ರಾಜು 'ನನ್ನವನು' ಎಂಬ ಚಿತ್ರವನ್ನು ಆರಂಭಿಸಿ ಸರಿಸುಮಾರು ಒಂದೂವರೆ ವರ್ಷವೇ ಕಳೆದುಹೋಗಿದೆ. ಅಂದ್ರಿತಾ ನಟಿಸಿದ ಎರಡನೇ ಚಿತ್ರವಿದು. ಪ್ರಜ್ವಲ್ ಮತ್ತು ಅಂದ್ರಿತಾ 'ಮೆರವಣಿಗೆ' ಮಾಡಿದಮೇಲೆ "ಈ ಚಿತ್ರಕ್ಕೆ ಅಂದ್ರಿತಾಳನ್ನೇ ಹಾಕಿಕೊಳ್ಳಿ" ಎಂದು ಹಠ ಹಿಡಿದು ಆಕೆಗೆ ಛಾನ್ಸ್ ಕೊಡಿಸಿದ್ದ ಪ್ರಜ್ವಲ್ ಇಂದು ಅಂದ್ರಿತಾಳನ್ನೇ ಜರಿಯುತ್ತಿದ್ದಾನೆ.

ಚಿತ್ರೀಕರಣದ ಸಮಯದಲ್ಲಿ ಪ್ರತಿದಿನ ಸ್ಪಾಟ್‌ಗೆ ಲೇಟ್ ಆಗಿ ಬರುತ್ತಿದ್ದ ಅಂದ್ರಿತಾ ಕುಂತ್ರೆ ನಿಂತ್ರೆ ಕಿರಿಕ್ಕು ಮಾಡುತ್ತಿದ್ದಳಂತೆ. ಹಾಡಿನ ಶೂಟಿಂಗ್‌ಗಾಗಿ ಫಾರಿನ್ನು, ಔಟ್‌ಡೋರ್ ಎಂದು ಹೋದಾಗಲಂತೂ ಈಕೆಯ ಕಿತಾಪತಿ ಎಲ್ಲೆ ಮೀರುತ್ತಿತ್ತಂತೆ. ಅದು ಯಾವ ಮಟ್ಟಕ್ಕೆ ಹೋಯಿತೆಂದರೆ ಸ್ನಾನ ಮಾಡುವಾಗ ತಲೆಗೆ ಶ್ಯಾಂಪೂ ಕೊಟ್ಟಿಲ್ಲ ಎಂಬ ಕಾರಣಕ್ಕೆ ಶೂಟಿಂಗ್ ಸ್ಪಾಟ್‌ನಲ್ಲಿ ಈಕೆ ರಗಳೆ ಆರಂಭಿಸಿಬಿಡುತ್ತಿದ್ದಳಂತೆ.

ಒಮ್ಮೆ ನೂರು ಜನ ಡ್ಯಾನ್ಸರ್‌ಗಳು, ಹೀರೋ ಪ್ರಜ್ವಲ್ ಎಲ್ಲರೂ ದೂರದ ಊರಿಗೆ ಹಾಡಿನ ಚಿತ್ರೀಕರಣಕ್ಕೆ ತೆರಳಿದ್ದರಂತೆ. ಅಂದಿನ ಶೂಟಿಂಗ್‌ನಲ್ಲಿ ಅಂದ್ರಿತಾ ಪಾಲ್ಗೊಳ್ಳಬೇಕಿತ್ತಾದರೂ ಆಕೆ ಅಲ್ಲಿಗೆ ಹಾಜರಾಗಲೇ ಇಲ್ಲವಂತೆ. ಹೀಗಾಗಿ ಚಿತ್ರೀಕರಣವನ್ನು ಕ್ಯಾನ್ಸಲ್ ಮಾಡಬೇಕಾಗಿ ಬಂತು ಎಂದು ನಿರ್ದೇಶಕ ಶ್ರೀನಿವಾಸ್ ರಾಜು ಒಂದೇ ಕಣ್ಣಿನಿಂದ ಧಾರಾಕಾರವಾಗಿ ನೀರು ಹರಿಸುತ್ತಿದ್ದರೆ ಅವರ ಪಕ್ಕದಲ್ಲಿ ಕುಂತ ಪ್ರಜ್ವಲ್ ಅದನ್ನು ಒರೆಸುತ್ತಿದ್ದಾನೆ.

ಈಕೆ ಮೇಲಿಂದ ಮೇಲೆ ಹೀಗೆ ಕೈಕೊಡುತ್ತಲೇ ಇದ್ದುದರಿಂದ ಕಡೆಗೆ ಈಕೆಯ ಉಳಿದ ಭಾಗವನ್ನು ರದ್ದುಮಾಡಿ, ಆಕೆ ನಟಿಸಬೇಕಿದ್ದ ದೃಶ್ಯಗಳನ್ನು ಅನಿಮೇಷನ್ ಮಾಡಿಸಿದ್ದಾರಂತೆ.

ಆದರೆ ಅಂದ್ರಿತಾ ರೈ ಮಾತ್ರ "'ನನ್ನವನು' ಚಿತ್ರಕ್ಕೂ ನನಗೂ ಯಾವುದೇ ಸಂಬಂಧವಿಲ್ಲ, ನಾನು ಆ ಚಿತ್ರದ ಪ್ರಮೋಷನ್‌ಗೂ ಹೋಗುವುದಿಲ್ಲ" ಎಂದಿದ್ದಾಳೆ. ಒಂದು ಸಿನಿಮಾದ ನಾಯಕನಟಿಯಾಗಿದ್ದರೂ ಈಗ 'ನನಗೂ ಆ ಸಿನೆಮಾಗೂ ಸಂಬಂಧವೇ ಇಲ್ಲ' ಎನ್ನುವುದು ಸರಿಯೇನವ್ವಾ..

• ಅರುಣ್



ನನ್ನವನು
ಅಂದ್ರಿತಾ ರೇ



ಬಾಬಾನ ಗಾನ ಬಜಾನಾ...

ಬಾಬಾ ಸೆಹಗಲ್‌ನದ್ದು ಬಾಲಿವುಡ್‌ನಲ್ಲಿ ದೊಡ್ಡ ಹೆಸರು.

ರಾಕ್, ಪಾಪ್ ಶೈಲಿಯ ಹಾಡುಗಳನ್ನು ಹಾಡುವ, ಸ್ಟೇಜ್ ಶೋಗಳನ್ನು ನೀಡುವ ಸೆಹಗಲ್ ಸಿನಿಮಾಗಳಲ್ಲೂ ನಟಿಸುತ್ತಿರುತ್ತಾರೆ.

ಅವರಿಂದ ಕನ್ನಡ ಚಿತ್ರಕ್ಕೆ ಹಾಡು ಹೇಳಿಸಲು ಹಲವಾರು ನಿರ್ದೇಶಕರು, ಮ್ಯೂಸಿಕ್ ಡೈರೆಕ್ಟರ್‌ಗಳು ಪ್ರಯತ್ನಪಟ್ಟು ವಿಫಲರಾಗಿದ್ದರು. ಆದರೀಗ ದಿಲೀಪ್ ಪೈ ನಟಿಸುತ್ತಿರುವ 'ಪುನೀತ್' ಚಿತ್ರದಲ್ಲಿ ಬಾಬಾ ಸೆಹಗಲ್ ಒಂದು ಹಾಡು ಹಾಡಿದ್ದಾರೆ ಮಾತ್ರವಲ್ಲ, ಅದರಲ್ಲಿ ನಟಿ ನೀತೂ ಜೊತೆ ಕುಣಿದೂ ಹೋಗಿದ್ದಾರೆ...

ಅದನ್ನು ಕಂಡು ನಮ್ಮ ಕನ್ನಡದ ಹಾಡುಗಾರರು "ಹಾಡ್ಕೊಂಡ್ ಹೋಗೋ ಅಂದ್ರೆ ಕುಣ್ಕೊಂಡ್ ಹೋದ್ರಲ್ಲೋ...." ಎಂದು ಕರುಬುತ್ತಿದ್ದಾರೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44